ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ ದಿನಾಂಕ ೧೩ನೇ ಮಾರ್ಚಿ ೧೯೮೬ ಫಾಲ್ಗುಣ ೨೨, ೧೯೦೭ ಶಕ

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಸದನವು ಬೆಳಿಗ್ಗೆ ೯-೦೦ ಗಂಟೆಗೆ ಸಮಾವೇಶಗೊಂಡಿತು.

[ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್)ರವರು ಪೀಠವನ್ನು ಅಲಂಕರಿಸಿದರು].

ವಿತ್ತೀಯ ಕಾರ್ಯಕಲಾಪಗಳು

1986-87ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ.

(ಕೃಷಿ ಮಂತ್ರಿಯವರಿಂದ ಉತ್ತರ)

ಅಧ್ಯಕ್ಷರು.—ಈಗ ಮಾನ್ಯ ಕೃಷಿ ಮಂತ್ರಿಗಳಿಂದ ಉತ್ತರ. ತಾವು ಅರ್ಧ ತಾಸಿನಲ್ಲಿ ಮುಗಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಹಿಂದೆ ಟ್ರಾನ್ಸ್‌ಪೋರ್ಟ್ ಮಂತ್ರಿಗಳಾಗಿದ್ದರು. ಬಸ್ಸನ್ನು ಜೋರಾಗಿ ಓಡಿಸಿ ಎಂದು ಹೇಳಿ.

ಅಧ್ಯಕ್ಷರು.—ಎಕ್ಸ್‌ಪ್ರೆಸ್ ಗಾಡಿ ಆಗಲಿ.

ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ರಾಜ್ಯ ಮಂತ್ರಿ).—ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ದಿನ ಎರಡೂ ಕಡೆ ಕುಳಿತಿರತಕ್ಕ ಹಿರಿಯ ಸದಸ್ಯರುಗಳು ಇಲಾಖೆಯನ್ನು ಯಾವರೀತಿ ಉತ್ತಮಪಡಿಸಬೇಕು ಎಂಬ ವಿಚಾರದ ಬಗ್ಗೆ ಅತ್ಯಂತ ಉಪಯುಕ್ತವಾದ ಸಲಹೆಗಳನ್ನು ಕೊಟ್ಟರು. ಯಾವುದೇ ತರಹದ ಭಾವೋದ್ವೇಗಕ್ಕೆ ಒಳಗಾಗದೆ ಮತ್ತು ಪೂರ್ವಾಗ್ರಹ ದೃಷ್ಟಿಕೋನಗಳನ್ನು ಇಟ್ಟುಕೊಳ್ಳದೆ ಇಡೀ ಕರ್ನಾಟಕದ ಅಭ್ಯುದಯಕ್ಕೆ ಕೃಷಿರಂಗದಲ್ಲಿ ಆಗುವಂಥ ಕಾರ್ಯಕ್ರಮಗಳು ಅತ್ಯಂತ ಮುಖ್ಯವಾದುದು, ಪ್ರಗತಿಗೆ ಮುಖ್ಯವಾದುದು ಎಂದು ಪ್ರಸ್ತಾಪ ಮಾಡಿದ್ದಾರೆ. ಹಿರಿಯ ಸದಸ್ಯರಾದ ಸನ್ಮಾನ್ಯ ಕೆ. ಎಚ್. ಪಾಟೀಲರು ಮತ್ತು ಬೆಂಗಳೂರು ನಗರದಿಂದ ಆರಿಸಿಬಂದಿದ್ದರೂ ಕೃಷಿರಂಗದ ಬಗ್ಗೆ ಹೆಚ್ಚು ಆಸಕ್ತಿ ತಾಳಿರುವ ಮೊಯಿನುದ್ದೀನ್ ಅವರು ಮತ್ತು ಪ್ರಥಮದಲ್ಲೇ ಭಾಷಣ ಮಾಡಿದ ರಮೇಶ್ ಕುಮಾರ್ ಅವರು ಇಡೀ ಕೃಷಿರಂಗದ ಸರ್ವಾಂಗೀಣ ಅಭಿವೃದ್ಧಿ ಕುರಿತು ಅನೇಕ ಉಪಯುಕ್ತ ಸಲಹೆಗಳನ್ನು ನೀಡಿ ಈ ಇಲಾಖೆಗೆ ಒಂದು ಹೊಸ ದೃಷ್ಟಿಕೋನವನ್ನು ಆಯಾಮವನ್ನು ಒದಗಿಸಿಕೊಡಬೇಕೆಂದು ಪ್ರಸ್ತಾಪ ಮಾಡಿದ್ದಾರೆ. ಅವರಿಗೆ ನಾನು ಅತ್ಯಂತ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ತಮ್ಮ ಮೂಲಕ ಅರ್ಪಿಸುತ್ತಾ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. "ನೇಗಿಲ ಮೊನೆಯಲ್ಲಿ ಅಡಗಿದ್ದ ಧರ್ಮ" ಎಂದು ಕುವೆಂಪು ಅವರು ಅನೇಕ ದಶಕಗಳ ಹಿಂದೆ ಹೇಳಿದ್ದರೂ ಕೂಡ ಈ ಧರ್ಮ ಅಡಗಿರತಕ್ಕ ಸೂಕ್ಷ್ಮಾತಿಸೂಕ್ಷ್ಮಗಳ ಬಗ್ಗೆ ಮಾತನಾಡದೆ ಅನೇಕ ಶತಮಾನಗಳಿಂದ ಶೋಷಣೆಗೆ ಒಳಗಾಗಿರತಕ್ಕ ಕೃಷಿಕನ ಪ್ರತಿನಿಧಿಗಳಾಗಿ ಇಲ್ಲಿ ಮತ್ತು ಪಾರ್ಲಿಮೆಂಟಿನಲ್ಲಿ ನಾವು ಅನೇಕರಿದ್ದರೂ ಕೃಷಿಕನ ಕೂಗು ಬರೀ ಗೋಳಾಗಿದೆ ಅಥವಾ ಅರಣ್ಯರೋಧನವಾಗಿದೆ ಎಂದರೆ ತಪ್ಪಾಗಲಾರದು. ಈ ವಿಚಾರದಲ್ಲಿ ಆತನನ್ನು ಅಭಿವೃದ್ಧಿಪಡಿಸಬೇಕಾಗಿದ್ದರೆ, ಗ್ರಾಮೀಣ ಅಭಿವೃದ್ಧಿಗೆ ಬೇಕಾಗಿರತಕ್ಕ ಅನುಕೂಲಗಳನ್ನು ಕಲ್ಪಿಸಿಕೊಡಬೇಕು ಮತ್ತು ಆತ ಬೆಳೆದಿರತಕ್ಕ ಬೆಳೆಗೆ ಸರಿಯಾದ ಬೆಲೆ ಕೊಡಬೇಕೆಂದು ಪ್ರಸ್ತಾಪ ಮಾಡಿದ್ದಾರೆ. ಆದರೆ ರಾಜ್ಯಸರ್ಕಾರದ ಅಧಿಕಾರದ ಇತಿಮಿತಿಯಲ್ಲಿ

ಇಂಥ ವಿಚಾರಗಳನ್ನು ಅವಲೋಕಿಸತಕ್ಕದ್ದು ಅತ್ಯಂತ ಮುಖ್ಯ ಎಂದು ಅರಿಕೆ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತಿದ್ದೇನೆ. ನಮ್ಮ ರಾಜ್ಯಕ್ಕೆ ಕುರಿತಾಗಿ ಹೇಳುವುದಾದರೆ ೪ ಕೋಟಿ ಜನಸಂಖ್ಯೆ ಇರತಕ್ಕ ಅಥವಾ ೩ ಕೋಟಿ ೭೫ ಲಕ್ಷ ಜನಸಂಖ್ಯೆ ಇರತಕ್ಕ ಕರ್ನಾಟಕದಲ್ಲಿ ಶೇಕಡ ೭೯ರಷ್ಟು ಮಾತ್ರ ಕೃಷಿ ರಂಗದಲ್ಲಿ ಅವಲಂಬಿತರಾಗಿದ್ದಾರೆ. ಅದರಲ್ಲೂ ಬೇರೆ ರಂಗದಲ್ಲಿ ಕೆಲಸ ಮಾಡತಕ್ಕ ಜನರಿದ್ದಾರೆ. ಅದರಲ್ಲಿ ೪.೩ ದಶಲಕ್ಷದಷ್ಟು ರೈತ ಕುಟುಂಬಗಳಿದ್ದರೆ ೨.೫ ದಶಲಕ್ಷ ಸಣ್ಣ ಮತ್ತು ಅತಿ ಸಣ್ಣ ರೈತರಿದ್ದಾರೆ. ೧೦೦ಕ್ಕೆ ೮೦ಕ್ಕಿಂತ ಹೆಚ್ಚು ಭಾಗ ನಮ್ಮದು ಮಳೆ ಆಧಾರಿತ ಪ್ರದೇಶವಾಗಿರುವುದರಿಂದ, ರಾಜಾಸ್ಥಾನವನ್ನು ಬಿಟ್ಟರೆ ಕರ್ನಾಟಕ ಹೆಚ್ಚು ಮಲೆನಾಡು ಮತ್ತು ಅರೆ ಮಲೆನಾಡಿಗೆ ಒಳಗಾಗಿರತಕ್ಕ, ೭೫೦ ಮಿಲಿಮೀಟರ್‌ಗಿಂತಲೂ ಕಡಿಮೆ ಮಳೆ ಬರತಕ್ಕ ಪ್ರದೇಶವಾಗಿರುವುದರಿಂದ ಮತ್ತು ಭೌಗೋಳಿಕವಾಗಿ ವಿಭಿನ್ನ ಹವಾಮಾನಕ್ಕೆ ಒಳಗಾಗಿರುವ ಪ್ರದೇಶವನ್ನು ನಾವು ಪಡೆದಿದ್ದರೂ ಕೂಡ ಎಲ್ಲ ನಮೂನೆಯ ಆಹಾರಧಾನ್ಯಗಳನ್ನಾಗಲೀ ತರಕಾರಿಗಳನ್ನಾಗಲೀ ಬೆಳೆಯುತಕ್ಕ ಶಕ್ತಿ ನಮಗಿದ್ದರೂ ಕೂಡ ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಕೃಷಿ ರಂಗದಲ್ಲಿ ಆಗಿರತಕ್ಕ ದೊಡ್ಡ ಕ್ರಾಂತಿ ಏನಿದೆ ಅದರ ಸದುಪಯೋಗ ಪಡೆಯತಕ್ಕ ಪ್ರಯತ್ನದಲ್ಲಿ ಎಷ್ಟೇ ಪ್ರಯತ್ನ ಮಾಡಿದರೂ ಕೂಡ ದೇಶದಲ್ಲಿ ಸರಾಸರಿ ೧೦೩೧ ಕೆ.ಜಿ. ಬೆಳೆಯುತಕ್ಕ ಅವಕಾಶವಿದೆ. ಒಣ ಬೇಸಾಯ ಪದ್ಧತಿಯಲ್ಲಿ ಒಂದು ಎಕರೆಗೆ ಸಾಧಾರಣ ೧೦೩೧ ಕೆ.ಜಿ. ಬೆಳೆಯುತಕ್ಕದ್ದಿದ್ದರೆ ನಮ್ಮಲ್ಲಿ ಮಾತ್ರ ೭೬೮ ಕೆ.ಜಿ. ಇದೆ. ನಮ್ಮ ಕೃಷಿಕನಿಗೆ ಸರಿಯಾದ ತಂತ್ರಜ್ಞಾನವನ್ನು ಕೊಡುವಹಾಗಿದ್ದರೆ ಕೃಷಿರಂಗದಲ್ಲಿ ಆಗಿರುವ ಹೊಸ ಹೊಸ ವಿಚಾರಗಳನ್ನು ತಿಳಿಸಿದರೆ ಅದನ್ನು ಕೂಡಲೇ ತಿಳಿದುಕೊಂಡು ತನ್ನ ಬದುಕಿನಲ್ಲಿ ಅದನ್ನು ಅಳವಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾನೆ ಎಂಬುದರಲ್ಲಿ ಸಂಶಯವಿಲ್ಲ. ಇನ್ನು ೧೫ ವರ್ಷಗಳ ನಂತರ ೨೧ನೇ ಶತಮಾನಕ್ಕೆ ಕಾಲಿಡುತ್ತಿದ್ದೇವೆ. ಅಷ್ಟರಲ್ಲಿ ಕೃಷಿರಂಗದಲ್ಲಿ ಕೂಡ ಹಸಿದಿರತಕ್ಕ ಮನುಷ್ಯನಿಗೆ ಅನುಕೂಲ ಕಲ್ಪಿಸಿಕೊಡುವ ದೃಷ್ಟಿಯಲ್ಲಿ ದೊಡ್ಡದಾಗಿರತಕ್ಕ ಬದಲಾವಣೆಯನ್ನು ಮಾಡಬೇಕಾಗಿದೆ. ೧೨.೬೦ ದಶಲಕ್ಷ ಧಾನ್ಯವನ್ನು ೨೦೦೦ನೇ ಇಸವಿ ಹೊತ್ತಿಗೆ ಬೆಳೆಯಬೇಕಾಗುತ್ತದೆ. ೧.೨ ದಶಲಕ್ಷ ದ್ವಿದಳ ಧಾನ್ಯಗಳನ್ನು ನಾವು ಬೆಳೆಯಬೇಕಾಗುತ್ತದೆ. ೨.೦ ದಶಲಕ್ಷದಷ್ಟು ಎಣ್ಣೆಕಾಳನ್ನು ನಾವು ಕೊಡಬೇಕಾಗುತ್ತದೆ. ೨೫.೪೭ ದಶಲಕ್ಷ ಟನ್ ಕಬ್ಬನ್ನು ನಾವು ಉತ್ಪಾದನೆ ಮಾಡಬೇಕಾಗುತ್ತದೆ. ಇಷ್ಟು ದೊಡ್ಡ ಪ್ರಮಾಣದ ಉತ್ಪನ್ನ ಕೇವಲ ೧೫ ವರ್ಷಗಳ ಅವಧಿಯಲ್ಲಿ ಮಾಡಬೇಕಾಗಿದೆ. ಕನಿಷ್ಠ ೮ ಲಕ್ಷ ಕ್ವಿಂಟಾಲ್ ಸುಧಾರಿತ ಶಕ್ತಿಮಾನ್ ತಳಿಗಳನ್ನು ತರಬೇಕಾಗಿದೆ. ನಮಗಿರತಕ್ಕ ಮಾಪನಗಳ ಆಡಿಯಲ್ಲಿ ೧೦೦ಕ್ಕೆ ೧೦೦ರಷ್ಟು ಶಕ್ತಿಮಾನ್ ತಳಿಗಳಿಗೆ ಬೀಜ ಕೊಡುತ್ತೇವೆಂದರೂ ಶೇಕಡ ೧೦ರಷ್ಟು ಎಣ್ಣೆ ಕಾಳಿಗೆ ಸಂಬಂಧಿಸಿದ ಬೀಜಗಳನ್ನು ಬೀಜ ನಿಗಮದಿಂದ ಒದಗಿಸಿಕೊಡುವುದಾದರೂ ೮ ಲಕ್ಷ ಕ್ವಿಂಟಾಲ್ ಶಕ್ತಿಮಾನ್ ಬೀಜಗಳನ್ನು ಕೊಡಬೇಕಾಗಿರತಕ್ಕ ಅಗತ್ಯ ಇದೆ. ಒಂದು ಹೆಕ್ಟೇರಿಗೆ ೧೨೦ ಕೆ.ಜಿ. ಗೊಬ್ಬರವನ್ನು ನಾವು ಬಳಸಬೇಕಾದ ಅಗತ್ಯ ಇದೆ. ಈಗ ಸರಾಸರಿ ಒಂದು ಹೆಕ್ಟೇರಿಗೆ ೫೫ ಕೆ.ಜಿ. ರಸಗೊಬ್ಬರವನ್ನು ಬಳಸತಕ್ಕ ಪರಿಪಾಠ ಇದೆ. ಆದರೆ ೧೨೦ ಕೆ.ಜಿ.ಯಷ್ಟು ರಸಗೊಬ್ಬರವನ್ನು ಒಂದು ಹೆಕ್ಟೇರಿಗೆ ಬಳಸತಕ್ಕ ಮಟ್ಟಕ್ಕೆ ನಾವು ಹೋಗುವುದಾದರೆ ದೊಡ್ಡ ಪ್ರಮಾಣದ ಕ್ರಾಂತಿಯನ್ನು ಮಾಡಬೇಕಾಗುತ್ತದೆ. ಇದರಲ್ಲಿ ಕೃಷಿ ವಿಶ್ವವಿದ್ಯಾನಿಲಯ, ಕೃಷಿ ಇಲಾಖೆ, ಈ ಪೂರಕವಾಗಿ ನಿಂತಿರತಕ್ಕ ಅನೇಕ ನಿಗಮಗಳು ಸಂಪೂರ್ಣವಾಗಿ ಕೆಲಸ ಮಾಡುವುದರ ಮೂಲಕ ಮತ್ತು ಬೇರೆ ಬೇರೆ ಇಲಾಖೆಗಳ ಸಹಕಾರದ ಮೂಲಕ ಹಾಗೂ ಸಹಕಾರ ಇಲಾಖೆಯ ಸಹಕಾರದ ಮೂಲಕ ಅತ್ಯಂತ ಮುಖ್ಯವಾಗಿರುವ ಗುರಿಯನ್ನು ನಾವು ಮುಟ್ಟಬೇಕಾಗುತ್ತದೆ.

ನಮ್ಮ ರಾಜ್ಯದ ಮಟ್ಟಿಗೆ ಹೇಳುವುದಾದರೆ ಸುಮಾರು ೨ ಸಾವಿರ ಕೋಟಿ ರೂಪಾಯಿಗಳ ಸಾಲದ ಅಗತ್ಯ ಇದೆ. ಇದನ್ನು ಕೊಡುವುದರ ಮೂಲಕ ರೈತ ತನ್ನ ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದು ಇದೆ. ಆದರೆ ನಾವು ಈಗ ಕೊಡುತ್ತಿರುವುದು ಸುಮಾರು ೨೫೦ ಕೋಟಿ ರೂಪಾಯಿಗಳು ಮಾತ್ರ, ಮತ್ತು ನಮ್ಮಲ್ಲಿ ಇರತಕ್ಕ ವಾಣಿಜ್ಯ ಬ್ಯಾಂಕುಗಳು, ಸಹಕಾರಿ ಸಂಘಗಳು ಹಾಗೂ ಇತರೇ ಸಹಕಾರಿ ಸಂಘಗಳ ಬ್ಯಾಂಕುಗಳ ಮೂಲಕ ಕೇವಲ ೨೫೦ ಕೋಟಿ ರೂಪಾಯಿಗಳು ಮಾತ್ರ ಲಭ್ಯವಾಗಿದೆ. ಆದರೆ ವೈಯಕ್ತಿಕವಾಗಿ ಇರತಕ್ಕ ರಂಗದಿಂದ ಸಂಪನ್ಮೂಲಗಳನ್ನು ರೂಢೀಕರಿಸಿ ರೈತ ಬೆಳೆಯುತಕ್ಕ ಪ್ರಯತ್ನ ಮಾಡುತ್ತೇವೆ. ಆದರೆ ನಮಗೆ ಬೇಕಾಗಿರತಕ್ಕ ಅಗತ್ಯ ಸುಮಾರು ೨ ಸಾವಿರ

ಕೋಟಿ ರೂಪಾಯಿಗಳಾಗುತ್ತದೆ. ಈ ಎಲ್ಲಾ ಕೆಲಸಗಳನ್ನೂ ಕ್ರೋಢೀಕರಿಸಿ ಸುಮಾರು ೧೭ ರಿಂದ ೨೦ ರಷ್ಟು ಸರಾಸರಿ ಇರತಕ್ಕ ನೀರಾವರಿ ಪ್ರದೇಶವನ್ನು ಅಭಿವೃದ್ಧಿಪಡಿಸಲು ನಮ್ಮಲ್ಲಿರುವ ಸಂಪನ್ಮೂಲಗಳನ್ನು ಅವುಗಳ ಕಡೆಗೆ ಹರಿಸುವುದರ ಮೂಲಕ ಕನಿಷ್ಟ ೩೦ ರಿಂದ ೪೦ ಸರಾಸರಿ ಹೆಚ್ಚು ಮಾಡುವ ಪ್ರಯತ್ನವನ್ನು ನಾವು ಮಾಡಬೇಕಾಗುತ್ತದೆ. ಒಬ್ಬ ತಜ್ಞರು ಹೇಳುವ ಪ್ರಕಾರ, ನಾವು ಎಲ್ಲಾ ಪ್ರಯತ್ನಗಳನ್ನು ಮಾಡಿದರೂ ಕೂಡಾ, ನಮ್ಮಲ್ಲಿರತಕ್ಕ ಜಲ ಸಂಪನ್ಮೂಲವನ್ನೆಲ್ಲಾ, ಅಂತರ ಜಲವನ್ನೆಲ್ಲಾ ಉಪಯೋಗಿಸಿಕೊಂಡರೆ ಕರ್ನಾಟಕದ ಮಟ್ಟಿಗೆ ಶೇಕಡಾ ೪೦ಕ್ಕಿಂತಾ ಹೆಚ್ಚು ನೀರಾವರಿ ಮಾಡುವುದಕ್ಕೆ ಸಾಧ್ಯತೆ ಇದೆ ಎನ್ನುವ ಮಾತನ್ನು ನಮ್ಮ ದೃಷ್ಟಿಕೋನದಲ್ಲಿ ಇಟ್ಟುಕೊಳ್ಳುವುದು ಅತ್ಯಂತ ಮುಖ್ಯ. ಈ ಕಾರಣಕ್ಕಾಗಿ ಮಾನ್ಯ ಮುಖ್ಯ ಮಂತ್ರಿಗಳು ಎಲ್ಲಾ ಸಂದರ್ಭದಲ್ಲೂ ಕೂಡಾ ನಾವು ಒಣ ಬೇಸಾಯದ ಮೇಲೆ ಹೆಚ್ಚು ಒತ್ತನ್ನು ತರಬೇಕು, ಒಣ ಬೇಸಾಯದ ಮೂಲಕ ರೈತರಿಗೆ ಅನುಕೂಲವನ್ನು ಕಲ್ಪಿಸಿಕೊಡಬೇಕೆನ್ನುವ ಮಾತನ್ನು ಪ್ರಸ್ತಾಪ ಮಾಡಿರುವುದರಿಂದ, ಈಗ ೪ ಕಂದಾಯ ಇಲಾಖೆಗಳಲ್ಲಿ ಕುಷ್ಕಿ ಬೆಳೆಗಳಿಗೆ ಸಂಬಂಧಪಟ್ಟಿರತಕ್ಕಂತಹ ಒಣ ಬೇಸಾಯ ಮಂಡಲಿಗಳನ್ನು ರಚನೆ ಮಾಡಿದ್ದೇವೆ. ಸುಮಾರು ೭೩೫ ಲಕ್ಷ ರೂಪಾಯಿಯಷ್ಟು ಬಿಡುಗಡೆ ಆಗಿರತಕ್ಕ ಮೊತ್ತ ಕೇವಲ ಅಕ್ಟೋಬರ್ ತಿಂಗಳಲ್ಲಿ ಬಿಡುಗಡೆ ಆಗಿದ್ದರೂ ಕೂಡಾ ಇಲ್ಲಿಯವರೆಗೆ ನಮ್ಮ ಅರಣ್ಯ ಇಲಾಖೆ ಮತ್ತು ನಮ್ಮ ಇಲಾಖೆ ಒಟ್ಟು ಕ್ರೋಢೀಕೃತ ಆಗಿರತಕ್ಕ ಪ್ರಯತ್ನದ ಮೂಲಕವಾಗಿ ೪ ಕೋಟಿ ರೂಪಾಯಿಗಿಂತಲೂ ಹೆಚ್ಚು ಖರ್ಚನ್ನು ನಾವು ಮಾಡಿದ್ದೇವೆ. ಇದರಲ್ಲಿ ಒಡ್ಡು ಹಾಕತಕ್ಕದ್ದು, ಹೊಲಗಳಲ್ಲಿ ಕೃಷಿ ಹೊಂಡಗಳನ್ನು ತೆಗೆಯತಕ್ಕದ್ದು ಹಾಗೂ ಅಲ್ಲಿ ಸಾಮಾಜಿಕ ಅರಣ್ಯವನ್ನು ಬೆಳೆಸತಕ್ಕದ್ದು ಇದೆ. ಇದರ ಜೊತೆಗೆ ನಾಲಾಬಂದ್‌ಗಳನ್ನು ಮಾಡತಕ್ಕ ಪ್ರಯತ್ನಗಳ ಮೂಲಕವಾಗಿ ಕೊಚ್ಚಿಹೋಗತಕ್ಕ ಮೇಲ್ಮಟ್ಟದ ಮಣ್ಣನ್ನು ತಡೆ ಹಿಡಿಯತಕ್ಕ ಪ್ರಯತ್ನ ಹಾಗೂ ಹೆಚ್ಚು ತೇವಾಂಶವನ್ನು ತಡೆಹಿಡಿಯತಕ್ಕ ಪ್ರಯತ್ನ. ಅನೇಕ ಸಂದರ್ಭದಲ್ಲಿ ಕಡಿಮೆ ಮಳೆ ಬಂದಿರತಕ್ಕದ್ದರಲ್ಲಿ ಬೇರೆ ರೀತಿಯ ಕೃಷಿ ರಂಗವನ್ನು ತಂತ್ರಜ್ಞಾನದಲ್ಲಿ ತೊಡಗಿಸುವುದರ ಮೂಲಕ ಕಬ್ಬನ್ ನಾಲಾದಲ್ಲಿ ಬೆಳೆದಿರತಕ್ಕ ಒಂದು ದೊಡ್ಡ ಪ್ರಯತ್ನ ಏನಿದೆ ಅದು ಕೇಂದ್ರ ಸರ್ಕಾರದ ಸಹಾಯಧನದಿಂದ ಆಗಿರತಕ್ಕದ್ದು. ಇಡೀ ಭಾರತದಲ್ಲಿ ಅತ್ಯಂತ ಮುಖ್ಯವಾಗಿರತಕ್ಕ ಕಬ್ಬನ್ ನಾಲಾ ಯೋಜನೆಯನ್ನು ಈಗಾಗಲೇ ಪ್ರಕಟಗೊಳಿಸಿ, ಯೋಜನಾ ಆಯೋಗ ಮತ್ತು ವಿಶ್ವ ಬ್ಯಾಂಕ್ ನೆರವಿನಿಂದ ಮಾಡಿರತಕ್ಕ ಈ ಜಲಾನಯನ ಪ್ರದೇಶವನ್ನು ಏರಿಯಾ ಆಫ್ ಎಕ್ಸಲೆನ್ಸ್ ಎಂದು ಏನು ಕರೆಯುತ್ತಾರೋ ಅದರ ಬಗ್ಗೆ ಇತ್ತೀಚೆಗೆ ಅತ್ಯಂತ ಗಣನೀಯವಾದ ಪ್ರಮಾಣದಲ್ಲಿ ಕೆಲಸಗಳು ಆಗಿರುವ ಬಗ್ಗೆ ವಿಶ್ವಬ್ಯಾಂಕಿನವರು ತಮ್ಮ ಮೆಚ್ಚುಗೆಯನ್ನು ವ್ಯಕ್ತಮಾಡಿದ್ದಾರೆ. ಅದರ ಬಗ್ಗೆ ಕೇಂದ್ರ ಸರ್ಕಾರದವರು ಶಿಫಾರಸ್ ಮಾಡಿ ಇಡೀ ರಾಷ್ಟ್ರಕ್ಕೆ ಒಂದು ಮಾದರಿಯಾಗಿರತಕ್ಕ ಒಂದು ಜಲಾನಯನ ಪ್ರದೇಶವೆಂದು ಗುರುತಿಸಿದ್ದಾರೆ. ಇದರ ಜೊತೆಗೆ ಇನ್ನೊಂದೆಂದರೆ, ಮತ್ತೊಂದು ಇಂತಹದ್ದೇ ಕೇಂದ್ರ ಸರ್ಕಾರದವರು ಪ್ರಯತ್ನ ಮಾಡುವುದಕ್ಕೆ ಮತ್ತೊಂದು ಅನುಕೂಲ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಅದಕ್ಕೆ ಹಣವನ್ನೂ ಕೊಡುತ್ತೇವೆನ್ನುವ ಮಾತನ್ನು ಹೇಳಿದ್ದಾರೆಂದು ಹೇಳಿದರೆ ತಮ್ಮ ಮುಖಾಂತರ ಸದನಕ್ಕೆ ಹೇಳುವುದಕ್ಕೆ ಸಂತೋಷಪಡುತ್ತೇನೆ. ಈ ವಿಚಾರಗಳಿಗೆ ಕುರಿತಾಗಿ ಬೆಳೆದಿರತಕ್ಕ ಬೆಳೆಗಳಿಗೆ ಸರಿಯಾದ ಒಂದು ಬೆಲೆಯನ್ನು ಕೊಡಬೇಕೆನ್ನುವ ನೀತಿ ಏನಿದೆ ಅದು ಅತ್ಯಂತ ಮುಖ್ಯ. ಎಲ್ಲಾ ಉದ್ಯೋಗದಲ್ಲಿ ನಿರತರಾಗಿರತಕ್ಕ ಜನ ತಾವು ಬೆಳೆದಿರತಕ್ಕ ಮಾಲಿಗೆ ತಾವು ಉತ್ಪಾದಿಸಿರತಕ್ಕ ಒಂದು ಸಿದ್ಧವಸ್ತುವಿಗೆ ಅವರು ತಮ್ಮದೇ ಆದ ಬೆಲೆಯನ್ನು ಹೇರತಕ್ಕ ಅರ್ಹತೆಯನ್ನು ಪಡೆಯುತ್ತಾರೆ. ಆದರೆ ರೈತ ಮಾತ್ರ ಶೋಷಣೆಗೆ ಒಳಗಾಗುತ್ತಿದ್ದಾನೆ. ಶೋಷಣೆಗೆ ಒಳಗಾಗಿರತಕ್ಕ ತಾನು ತನ್ನದೇ ಆಗಿರತಕ್ಕ ಬೆಲೆಯನ್ನು ನಿರ್ಧಾರ ಮಾಡುವುದಕ್ಕೆ ಸಾಧ್ಯವಾಗಿಲ್ಲ ಎನ್ನುವ ಮಾತನ್ನು ಪದೇಪದೇ ಸದನದಲ್ಲಾಗಲೀ ಹೊರಗಡೆಯಲ್ಲಾಗಲೀ ಹೇಳಲಾಗುತ್ತಿದೆ. ಈ ಬಗ್ಗೆ ಹೋರಾಟ ನಡೆಯುತ್ತಿದ್ದರೂ ಕೂಡಾ ರೈತರು ಮಾಡುತ್ತಿರತಕ್ಕ ಕೂಗು ಅರಣ್ಯರೋಧನವಾಗೇ ಉಳಿದಿದೆ. ನನ್ನ ಅಧ್ಯಕ್ಷತೆಯಲ್ಲಿ ಕೊಟ್ಟಂತಹ ಒಂದು ಸಮಿತಿಯ ವರದಿಯಲ್ಲಿ ನಾವು ಭತ್ತಕ್ಕೆ ೧ ಕ್ವಿಂಟಾಲಿಗೆ ೧೯೪ ರೂಪಾಯಿ ಕೊಡಬೇಕು, ರಾಗಿಗೆ ಒಂದು ಕ್ವಿಂಟಾಲಿಗೆ ೨೦೫ ರೂಪಾಯಿ ಕೊಡಬೇಕು. ಬಿಳಿ ಜೋಳಕ್ಕೆ ೧೯೪ ರೂಪಾಯಿ ಕೊಡಬೇಕು. ಹೈಬ್ರಿಡ್ ಜೋಳಕ್ಕೆ ೧೬೭ ರೂಪಾಯಿ ಕೊಡಬೇಕು ಎಂದು ಶಿಫಾರಸ್ಸು ಮಾಡಿದ್ದೇವೆ ಹಾಗೂ ಕೇಂದ್ರದ ಜೊತೆ ಈ ಬಗ್ಗೆ ಸಮಾಲೋಚನೆ ನಡೆಸುತ್ತಿದ್ದೇವೆ. ಈ ಬೆಲೆಗಳನ್ನು ನಿರ್ಧಾರ ಮಾಡತಕ್ಕ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇರುವುದರಿಂದ ಅವರ ಜೊತೆ ಹೆಚ್ಚು ಸಂಪರ್ಕ ಮಾಡುವುದರಿಂದ, ಸಂಪರ್ಕ ಬೆಳೆಸುವುದರ ಮೂಲಕವಾಗಿ ರೈತರಿಗೆ ಹೆಚ್ಚು ಆಕರ್ಷಕವಾಗತಕ್ಕ ರೀತಿಯಲ್ಲಿ ಇದು ಒಂದು ಆಕರ್ಷಕ ಉದ್ಯೋಗ ಎಂದು ಆತನು ಪರಿಗಣಿಸಬೇಕಾದರೆ ಅವನು ಉಪಯೋ

ಗಿಸತಕ್ಕ ಪರಿಶ್ರಮಕ್ಕೆ ತತ್ಸಮಾನವಾಗಿರತಕ್ಕ ಒಂದು ಲಾಭವನ್ನು ಪಡೆಯುತಕ್ಕ ರೀತಿಯಲ್ಲಿ ಕೆಲಸ ಆದರೆ ಆ ಕ್ಷೇತ್ರದಲ್ಲಿ ಇರತಕ್ಕ ಜನ ಹೆಚ್ಚು ಉತ್ಸುಕರಾಗಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ನಮ್ಮ ಜನ ಇವತ್ತು ಅವಿದ್ಯಾವಂತರಿರಬಹುದು, ಆದರೆ ಅವರು ದಡ್ಡರಲ್ಲ. ಏಕೆಂದರೆ ಈ ವಿಚಾರದಲ್ಲಿ ಅತ್ಯಂತ ಪ್ರಾಜ್ಞರಾಗಿರತಕ್ಕ, ಕೃಷಿರಂಗದಲ್ಲಿ ತಜ್ಞರಾಗಿರತಕ್ಕ ಶಾಸ್ತ್ರಿಕಿಯವರು ಹೈಬ್ರಿಡ್ ಹತ್ತಿಯನ್ನು ಪರಾಗಸ್ಪರ್ಶ ಮಾಡತಕ್ಕ ಒಂದು ತಂತ್ರಗಾರಿಗೆ ತಂದ ತಕ್ಷಣವೇ ೨-೩ ವರ್ಷಗಳಲ್ಲಿ ಇಡೀ ಗ್ರಾಮೀಣ ಪ್ರದೇಶದಲ್ಲಿ ೧೦-೧೨ ವರ್ಷದ ಸಾಮಾನ್ಯ ಹುಡುಗನು ಕೂಡಾ ಪರಾಗಸ್ಪರ್ಶ ಮಾಡುವುದರ ಮೂಲಕ ಈ ಹತ್ತಿ ಬೆಳೆಯನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯುವುದಕ್ಕೆ ಒಂದು ಸಾಧ್ಯತೆಯನ್ನು ಕಂಡುಕೊಂಡಿರತಕ್ಕ ಜನ ನಮ್ಮವರು ಆಗಿರುವುದರಿಂದ ಅವರು ದಡ್ಡರಲ್ಲ. ಅವರು ಅವಿದ್ಯಾವಂತರಿರಬಹುದು. ಇವತ್ತು ಟೊಮ್ಯಾಟೋದಂತಹ ಸಣ್ಣ ಸಣ್ಣ ಗಿಡಗಳನ್ನು ಪರಾಗಸ್ಪರ್ಶ ಮಾಡಿ ಹೆಚ್ಚು ಬೆಳೆ ಬೆಳೆಯುವುದರ ಬಗ್ಗೆ ರಾಣೆಬೆನ್ನೂರು ಬಳ್ಳಾರಿ ಜಿಲ್ಲೆಯ ಅಡಗಲಿ ತಾಲ್ಲೂಕಿನಲ್ಲಿ ವ್ಯಾಪಕವಾದ ರೀತಿಯಲ್ಲಿ ಇಂತಹ ಒಂದು ಹೈಬ್ರಿಡ್ ಟೊಮ್ಯಾಟೋ ಬೆಳಸತಕ್ಕ ರೀತಿಯಲ್ಲಿ ಜನಸಾಮಾನ್ಯರು ಮುಂದಾಗಿದ್ದಾರೆ. ಕೇವಲ ೧೦-೧೨-೧೪ ವರ್ಷದ ಹುಡುಗರೂ ಕೂಡಾ ಪರಿಣತಿಯನ್ನು ಪಡೆದಿದ್ದಾರೆಂದರೆ, ಹೊಸ ತಂತ್ರಜ್ಞಾನವನ್ನು ಹೇಳುವುದರ ಜೊತೆಗೆ ಅದರಿಂದ ಏನು ಲಾಭದಾಯಕವಾಗುತ್ತದೆಂದು ಕೃಷಿಕನಿಗೆ ಮನದಟ್ಟಾಗಿದೆ. ತತಕ್ಷಣದಲ್ಲಿ ಅಂತಹ ಒಂದು ವಿಚಾರಗಳನ್ನು ತಿಳಿಯತಕ್ಕ ಶಕ್ತಿ ಆತನಿಗೆ ಇದೆ. ನಗರ ಪ್ರದೇಶಕ್ಕೆ ವಲಸೆ ಹೋಗತಕ್ಕ ಜನ ಕೃಷಿ ರಂಗದಲ್ಲಿ ಇರತಕ್ಕ, ಅದರಲ್ಲೇ ಅವಲಂಬಿತರಾಗಿರತಕ್ಕ ಜನ ಅದಕ್ಕೆ ಪೂರಕವಾಗಿರತಕ್ಕ ಪಶು ಸಂಗೋಪನೆಯಾಗಿರಬಹುದು. ಹೈನುಗಾರಿಕೆ ಆಗಿರಬಹುದು ಅಥವಾ ತೋಟಗಾರಿಕೆ ಇರಬಹುದು ಅಥವಾ ಯಾವುದೋ ಪೂರಕವಾಗಿರತಕ್ಕ ಕಮ್ಮಾರ, ಬಡಗಿ ಮೊದಲಾಗಿರತಕ್ಕ ಉಪ ಕಸಬುಗಳನ್ನು ಆಧಾರವಾಗಿರತಕ್ಕ ಗ್ರಾಮೀಣ ಬದುಕು ಏನಿದೆ ಅಲ್ಲಿಯೇ ನೆಲೆ ನಿಲ್ಲಬೇಕಾಗಿದ್ದರೆ, ಅದು ಅಭಿವೃದ್ಧಿ ಪಡೆಯಬೇಕಾಗಿದ್ದರೆ ಏನು ಬೆಲೆ ಕೊಡಬೇಕೆನ್ನುವ ಮಾತು ಏನಿದೆ ಅದರ ಬಗ್ಗೆ ಸಂಘಟಿತರಾಗಿ ಹೋರಾಡಬೇಕಾಗಿದೆ. ಇದರ ಬಗ್ಗೆ ಕೇಂದ್ರ ಸರ್ಕಾರದೊಡನೆ ಒತ್ತಾಡ ತರುತ್ತಿದ್ದೇವೆ. ಇದನ್ನು ಸರ್ಕಾರ ತೀವ್ರವಾಗಿ ಪರಿಗಣಿಸಿ ಸಂಪನ್ಮೂಲಗಳ ಇತಿಮಿತಿಯಲ್ಲಿ ಎಷ್ಟನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಂಬುದನ್ನು ಸಚಿವ ಸಂಪುಟ ಸಭೆಯ ಎದುರು ಯೋಚನೆ ಮಾಡುತ್ತೇವೆ ಎನ್ನುವ ಮಾತನ್ನು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ವಿಚಾರದ ಬಗ್ಗೆ ತತ್ವದ ಬಗ್ಗೆ ಎಲ್ಲರೂ ಮಾತನಾಡಿದ್ದಾಗಿದೆ. ನಾವು ಕೃಷಿ ರಂಗದಲ್ಲಿ ಎಷ್ಟು ಮಾತನ್ನು ಹೇಳಿದರೂ ಕೂಡಾ ಇಡೀ ಪ್ರಪಂಚದಲ್ಲಿನ ಭೂಮಿಯಲ್ಲಿ, ಬೆಳೆಯತಕ್ಕ ವಿಸ್ತಾರದಲ್ಲಿ ಭಾರತ ದೇಶದ ಭಾಗ ಸುಮಾರು ಶೇಕಡಾ ೧೧ರಷ್ಟು ಇದೆ. ಈ ಶೇಕಡಾ ೧೧ ಬೆಳೆಯತಕ್ಕ ಭೂಮಿಯಲ್ಲಿ ಜಾಗತಿಕ ಲೆಕ್ಕಾಚಾರದಲ್ಲಿ ನಾವು ಕೇವಲ ಶೇಕಡಾ ೮ರಷ್ಟನ್ನು ಮಾತ್ರ ಉತ್ಪಾದನೆಗೆ ತೊಡಗಿಸಿದ್ದೇವೆ. ಶೇಕಡಾ ೧೧ರಷ್ಟು ಬೆಳೆಯತಕ್ಕ ಭೂಮಿ ಇರುವಾಗ ಜಾಗತಿಕ ಮಟ್ಟದ ಆಹಾರ ಉತ್ಪಾದನೆಯಲ್ಲಿ ಶೇಕಡಾ ೮ರಷ್ಟು ಮಾತ್ರ ಇದೆ ಎಂದು ತೋರಿಸಲಾಗಿದೆ, ಮತ್ತು ಈಗ ನಮ್ಮಲ್ಲಿ ಭೀಕರವಾದಂತಹ ಬರಗಾಲ ಇದೆ. ನಾವು ಕೇವಲ ೪೨೦ ಗ್ರಾಮ್‌ನಷ್ಟು ಒಂದು ದಿವಸಕ್ಕೆ ಒಬ್ಬ ವ್ಯಕ್ತಿಗೆ ಕೊಡಬೇಕಾದ ಆಹಾರ ಧಾನ್ಯವೆಂದರೆ, ಅದು ವರ್ಷಕ್ಕೆ ೯ ಕೆ. ಜಿ. ಎಂದರೆ, ಆತನಿಗೆ ಕನಿಷ್ಠವಾಗಿರತಕ್ಕ ಆಹಾರವನ್ನು ಕೊಡಬೇಕೆಂದು ಲೆಕ್ಕಾಚಾರ ಹಾಕಿದರೆ ೨೦೦೦ನೇ ವರ್ಷವನ್ನು ಮುಟ್ಟುವಾಗ ಕೇವಲ ಇನ್ನು ೧೫ ವರ್ಷಗಳ ನಂತರ ೩೦೦ ದಶಲಕ್ಷ ಟನ್ ಆಹಾರ ಧಾನ್ಯದ ಅಗತ್ಯ ಇದೆ. ಈಗ ನಾವು ಬೆಳೆಯುತ್ತಿರತಕ್ಕದ್ದು ೧೫೫ ದಶಲಕ್ಷ ಟನ್ ಮಾತ್ರ. ಇದನ್ನು ದ್ವಿಗುಣಗೊಳಿಸಬೇಕಾದ ಅನಿವಾರ್ಯತೆ ಇದೆ. ಇವತ್ತು ಒಂದು ಹೆಕ್ಟೇರಿಗೆ ೫೫ ಕೆ. ಜಿ. ರಸಗೊಬ್ಬರವನ್ನು ಉಪಯೋಗಿಸುವ ಜೊತೆಗೆ ಸಾವಯವ ಗೊಬ್ಬರವನ್ನೂ ಉಪಯೋಗಿಸಬೇಕಾಗಿದೆ. ಇದರ ಜೊತೆಗೆ ಕೀಟನಾಶಕಗಳನ್ನೂ ಕೂಡಾ ಉಪಯೋಗಿಸಬೇಕಾಗಿದೆ. ಇವತ್ತು ನಮ್ಮ ರಾಜ್ಯದಲ್ಲಿ ಕೇವಲ ೩೦೦ ಗ್ರಾಮ್‌ನಷ್ಟು ಮಾತ್ರ ಒಂದು ಎಕರೆಗೆ ಉಪಯೋಗಿಸುತ್ತಿದ್ದೇವೆ. ದಕ್ಷಿಣ ಕೊರಿಯಾದಲ್ಲಿ ೧೨ ಕೆಜಿಗಿಂತಲೂ ಹೆಚ್ಚು ಉಪಯೋಗ ಆಗುತ್ತಿದೆ. ಜಪಾನ್‌ಗೆ ಹೋಲಿಸಿದರೆ ೬ ಕೆಜಿಗಿಂತಲೂ ಹೆಚ್ಚು ಆಗುತ್ತದೆ. ಎಂದರೆ ಹೆಚ್ಚು ಹೆಚ್ಚು ಕೀಟನಾಶಕಗಳ ಮೂಲಕವೇ ನಮ್ಮ ಬೆಳೆಗಳನ್ನು ಉಳಿಸಿಕೊಳ್ಳಬೇಕೆಂದು ಹೇಳುವ ಮಾತನ್ನು ನಾನು ಪ್ರತಿಪಾದಿಸುತ್ತಿಲ್ಲ. ಆದರೆ ಶಕ್ತಿಮಾನ್ ತಳಿಗಳನ್ನು ಉಪಯೋಗಿಸಿ ಅವುಗಳ ಮೂಲಕ ಹಸಿದ ಮಾನುಷ್ಯನಿಗೆ ಅನ್ನವನ್ನು ಕೊಡಬೇಕಾಗಿರತಕ್ಕ ದೊಡ್ಡ ಕ್ರಾಂತಿ ಮಾಡುವಾಗ ಈ ವಿಜ್ಞಾನವನ್ನು; ಕ್ರಾಂತಿಕಾರಕವಾಗಿರತಕ್ಕದ್ದನ್ನು ಬೇಸಾಯಕ್ಕೆ ಅಳವಡಿಸಿಕೊಂಡಿರತಕ್ಕ ಕೃಷಿ ರಂಗದ ಪ್ರಗತಿ ಏನಿದೆ ಅದಕ್ಕೆ ಅತ್ಯಂತ ಮುಖ್ಯವಾಗಿರತಕ್ಕದ್ದು ರಸಗೊಬ್ಬರಗಳ ಬಳಕೆ, ಸಾವಯುವ ಗೊಬ್ಬರಗಳ ಉಪಯೋಗ. ನಿರೀಕ್ಷಿತ ಪ್ರದೇಶದಲ್ಲಿ ಈಗಿರ

ತಕ್ಕ ನೀರನ್ನು ಉಪಯೋಗಿಸಿಕೊಳ್ಳತಕ್ಕದ್ದು, ಮಣ್ಣಿನ ತಡೆಯನ್ನು ತೆಗೆದು ಸಂರಕ್ಷಣೆ ಮಾಡತಕ್ಕದ್ದು, ನೀರಿನ ತೇವಾಂಶವನ್ನು ಹಿಡಿದಿಡತಕ್ಕದ್ದು ಮತ್ತು ಕೀಟನಾಶಕಗಳನ್ನು ಸರಿಯಾದ ಕಾಲದಲ್ಲಿ ಉಪಯೋಗಿಸಿಕೊಂಡರೆ ಮಾತ್ರ ೨೦೦೦ನೇ ವರ್ಷವನ್ನು ಮುಟ್ಟುವಷ್ಟರಲ್ಲಿ ಕನಿಷ್ಟ ೩೦೦ ದಶಲಕ್ಷ ಟನ್ ಆಹಾರವನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಲ್ಲಿ ಕೂಡಾ ನಮ್ಮ ರಾಜ್ಯ ಈಗ ಸ್ವಾವಲಂಬಿಯಾಗಿರತಕ್ಕದ್ದಾಗಿದೆ. ೮೭ ಲಕ್ಷ ಟನ್ ಆಹಾರಧಾನ್ಯವನ್ನು ಬೆಳೆಯಬೇಕೆನ್ನುವ ಗುರಿಯನ್ನು ಈ ವರ್ಷ ನಾವು ಇಟ್ಟುಕೊಂಡಿದ್ದೇವೆ. ಮಾನ್ಯ ಅಧ್ಯಕ್ಷರೇ, ಕಳೆದ ನಾಲ್ಕು ವರ್ಷಗಳಿಂದ ಆಗಿರತಕ್ಕ ನಿರಂತರ ಅಭಾವ ಪರಿಸ್ಥಿತಿಗೆ ಕಾರಣವಾಗಿ, ಕಳೆದ ವರ್ಷ ಆಗಿರತಕ್ಕ ದೊಡ್ಡ ವ್ಯತ್ಯಾಸದಿಂದಾಗಿ ನಮ್ಮ ಬರಗಾಲಕ್ಕೆ ಕಾರಣವಾಗಿ ನಿರೀಕ್ಷಿತ ಪ್ರದೇಶದಲ್ಲಿ ಆಹಾರಧಾನ್ಯವನ್ನು ಬೆಳೆಯುವುದಕ್ಕೆ ಆಗಲಿಲ್ಲ. ಸುಮಾರು ೮೫ ಲಕ್ಷ ಟನ್ ಬೆಳೆಯಬೇಕೆಂದು ಗುರಿಯನ್ನು ಇಟ್ಟುಕೊಂಡಿದ್ದರೂ ೫೦ ಲಕ್ಷ ಟನ್‌ಗಿಂತಾ ಕಡಿಮೆಯಾಗಿದೆ. ೫೫ ಲಕ್ಷ ಟನ್ ಆಹಾರಧಾನ್ಯ ಬರಬಹುದೆಂದು ನಿರೀಕ್ಷೆಯಿಂದ ನಾನು ಹಿಂದೆ ವಾದ ಮಾಡಿದ್ದೆ. ಯೋಜನಾ ಆಯೋಗದ ಕಮೀಷನರ್‌ರವರೇ ಕಾರ್ಯದರ್ಶಿಯಾಗಿರತಕ್ಕವರು ಸುಮಾರು ೪೪ ಲಕ್ಷ ಟನ್ ಬರಬಹುದೆಂದು ಅಂದಾಜು ಮಾಡಿದ್ದರು. ಈ ಮಾತುಗಳನ್ನು ಹೇಳುವ ಸಂದರ್ಭದಲ್ಲಿ ಅಂತಿಮವಾಗಿ ರತಕ್ಕ ವಿವರಗಳು ನಮ್ಮ ಮುಂದೆ ಇಲ್ಲದೇ ಇರುವುದರಿಂದ ಅಂದಾಜು ಸುಮಾರು ೮-೧೦ ಲಕ್ಷ ಟನ್ ವ್ಯತ್ಯಾಸ ಆಗತಕ್ಕದ್ದು ಕಂಡುಬಂದರೂ ಕೂಡಾ ಈಗ ಶೇಕಡಾ ೫೦ಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿ ಆಹಾರಧಾನ್ಯ ಬೇಕಾಗಿರುವುದರಿಂದ ಈ ವರ್ಷ ಕೃಷಿ ರಂಗದ ಮಟ್ಟಿಗೆ ಹೇಳುವುದಾದರೆ, ಅತ್ಯಂತ ದೌರ್ಭಾಗ್ಯದ ಒಂದು ವರ್ಷ ಎಂದು ಪರಿಗಣಿಸಿದರೆ ತಪ್ಪಾಗಲಾರದು.

ಬಂದಿರತಕ್ಕ ಮಳೆಯೂ ಕೂಡ ಅನಿರ್ದಿಷ್ಟ ಕಾಲದಲ್ಲಿ ಹಿಂದೆಂದೂ ನೋಡದೇ ಇದ್ದಷ್ಟು ಒಣ ಹವೆಯಿಂದ ಕೂಡಿ ಸುಮಾರು ದಿವಸಗಳವರೆಗೆ ಬಿದ್ದಿರತಕ್ಕದ್ದು ಹಾಗೂ ಬೆಳೆಯೂ ಕೂಡ ನಾಶವಾಗಿರತಕ್ಕ ಸಂದರ್ಭಗಳಿವೆ. ಈ ಕಾರಣಕ್ಕಾಗಿ ಬೆಳೆಯ ವಿಮೆಯನ್ನು ಮಾಡುವುದು ಅತ್ಯಂತ ಮುಖ್ಯ ಎಂಬುದಾಗಿ ಪ್ರತಿಪಾದಿಸಿ ಈ ವರ್ಷದಲ್ಲಿ ಸಾಲವನ್ನು ಕೊಟ್ಟಿರತಕ್ಕ ಪ್ರತಿಯೊಬ್ಬರಿಗೂ ಕೂಡ ಬೆಳೆಯ ವಿಮೆಯ ಕಾರ್ಯಕ್ರಮವನ್ನು ನಾವು ಮಾಡಿದ್ದೇವೆ. ಈ ಬೆಳೆ ವಿಮೆಯ ಕಾರ್ಯಕ್ರಮದಲ್ಲಿ ನೆಲಗಡಲೆ, ರಾಗಿ, ಜೋಳ ಮುಂತಾದ ಎಲ್ಲ ಆಹಾರ ಧಾನ್ಯಗಳನ್ನೂ ಕುರಿತಾದ ಬೆಳೆಗಳಿಗೆ ಈಗ ಶೇಕಡ ೧ರಷ್ಟು, ಎಣ್ಣೆ ಕಾಳುಗಳ ಮೇಲೆ, ಶೇಕಡ ೨ರಷ್ಟು ಬೇರೆ ಧಾನ್ಯಗಳ ಮೇಲೆ ಸಾಲ ಕೊಡತಕ್ಕ ಪ್ರತಿಯೊಂದು ಸಂದರ್ಭದಲ್ಲೂ ಕೂಡ ಪ್ರೀಮಿಯಂನ್ನು ತೆಗೆದುಕೊಳ್ಳತಕ್ಕ ಪದ್ಧತಿ ಇದೆ. ಇದರ ಫಲವಾಗಿ ಸುಮಾರು ೨೮ ಕೋಟಿ ರೂಪಾಯಿಗಳಷ್ಟು ಈ ವರ್ಷದಲ್ಲಿ ಬೆಳೆ ವಿಮೆ ಆಗುತ್ತದೆ. ೨೮ ಕೋಟಿ ರೂಪಾಯಿಗಳಿಗೆ ಕಳೆದ ೫ ವರ್ಷಗಳಲ್ಲಿ ನಮ್ಮ ಕೃಷಿಯನ್ನು ಮಾಡಿರತಕ್ಕ ಜನರಿಗೆ ವಿಮೆಯನ್ನು ಮಾಡಿರತಕ್ಕ ಜನರಿಗೆ ಹೆಚ್ಚಿಗೆ ಲಾಭದಾಯಕವಾಗುವುದಿಲ್ಲ ಎನ್ನತಕ್ಕ ಮಾತನ್ನೂ ಕೂಡ ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಕಳೆದ ೫ ವರ್ಷದಲ್ಲಿ ಬಂದಿರತಕ್ಕ ಸರಾಸರಿಯನ್ನು ತೆಗೆದುಕೊಂಡು ಹೋದ ವರ್ಷದ ತ್ರೆಷ್‌ಹೋಲ್ಡ್ ಬೆಳೆಯನ್ನು ಅಂದರೆ ಹಂತದ ಬೆಳೆಯನ್ನು ನಾವು ಯೋಚನೆ ಮಾಡಿ ಅವುಗಳಿಗಿಂತ ಕನಿಷ್ಠ ಕಡಿಮೆ ಆಗುವಂಥ ಸಂದರ್ಭದಲ್ಲಿ ವಿಮೆಯನ್ನು ಕೊಡಬೇಕಾದುದು ಆಗಿರುವುದರಿಂದ ಮಾನ್ಯ ಸದಸ್ಯರಾದ ಆಚಾರ್‌ರವರು ಪ್ರತಿಪಾದಿಸಿದಂತೆ ಇದು ಸಾಲದ ವಿಮೆಯೇ ವಿನಃ ಇದು ಬೆಳೆಯ ವಿಮೆ ಅಲ್ಲ ಎಂಬುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಏನೂ ಮಾಡಲಾಗದೇ ಇದ್ದಂಥ ಸಂದರ್ಭಗಳಿಗಿಂತಲೂ ಇದು ಉತ್ತಮವಾದಂಥ ಯೋಜನೆ ಎಂಬುದನ್ನು ಒಪ್ಪಿಕೊಳ್ಳಬೇಕು. ಪಂಜಾಬಿನಲ್ಲಿರತಕ್ಕವರು ಹೆಚ್ಚು ಹೆಚ್ಚು ಬೆಳೆಯನ್ನು ಬೆಳೆಯುತ್ತಿರುವುದರಿಂದ ಈ ರೀತಿಯಾದ ಮಾರ್ಗಗಳ ಮೂಲಕವಾಗಿ ಬೆಳೆಯನ್ನು ವಿಮೆ ಮಾಡುತ್ತಿರುವುದರಿಂದ ಹೆಚ್ಚು ಲಾಭವಾಗುವುದಿಲ್ಲ ಎನ್ನತಕ್ಕ ಮಾತನ್ನು ಪಂಜಾಬಿನ ರೈತರು ಹೇಳುತ್ತಿದ್ದರು. ಕಳೆದ ೫ ವರ್ಷಗಳಿಂದ ಬರಗಾಲಕ್ಕೆ ಒಳಗಾಗಿರತಕ್ಕ ನಾವುಗಳು ಈ ೫ ವರ್ಷಗಳಲ್ಲಿ ಕನಿಷ್ಠ ಬೆಳೆ ಬಂದರೂ ಅವುಗಳಿಗಿಂತಲೂ ಕಡಿಮೆ ಆದಾಗ ಮಾತ್ರ ನಮಗೆ ಅನುಕೂಲ ಸಿಕ್ಕುತ್ತದೆ. ಆದ್ದರಿಂದ ಇದು ಸರಿಯಾದ ಮಾತಲ್ಲ ಎಂಬುದನ್ನು ನಾನು ಪ್ರತಿಪಾದಿಸುತ್ತಿದ್ದೇನೆ. ಈ ದೃಷ್ಟಿಯಿಂದ ಈಗ ಸ್ವಲ್ಪ ಮಟ್ಟಿಗಾದರೂ ಒಳ್ಳೆಯದಾಗಿದೆ ಸ್ವಲ್ಪ ಮಟ್ಟಿನ ಬದಲಾವಣೆಯಾಗಿದೆ. ಈ ದಿಸೆಯಲ್ಲಿ ನಾವು ಒಂದು ಸಣ್ಣ ಹೆಜ್ಜೆಯನ್ನಿಟ್ಟಿದ್ದೇವೆ. ಕೇಂದ್ರ ಸರ್ಕಾರದೊಂದಿಗೆ ನಾವು ಈ ವ್ಯವಹಾರವನ್ನು ಮಾಡಿ ಏನೊಂದು ಮಾಪನವನ್ನು ನಾವು ಇಟ್ಟುಕೊಂಡಿದ್ದೇವೆ ಅದನ್ನೂ ಕೂಡ ನಾವು ಬದಲಾವಣೆ ಆಗುವಂತೆ ಮಾಡಬೇಕು. ಯಾವುದು ಕನಿಷ್ಠ ಮುಖ್ಯವಾದಂಥ ವರ್ಷ

ಎಂದು ನಾವು ಗುರ್ತಿಸಿದ್ದೇವೆ. ಯಾವುದು ಸಮೃದ್ಧವಾದಂಥ ವರ್ಷವೆಂದು ಗುರ್ತಿಸಿದ್ದೇವೆ ಆ ವರ್ಷಗಳ ಸರಾಸರಿಯನ್ನು ಲೆಕ್ಕಕ್ಕೆ ತೆಗೆದುಕೊಂಡು ಈ ಬೆಳೆಯ ವಿಮೆಯನ್ನು ಮಾಡಿರತಕ್ಕ ರೈತನಿಗೆ ಅದಕ್ಕಿಂತಲೂ ಕಡಿಮೆ ಬಂದಿರತಕ್ಕವರಿಗೆ ಅನುಕೂಲ ಮಾಡಿಕೊಡಬೇಕೆಂಬ ಮಾತನ್ನು ಈಗಾಗಲೇ ನಾವು ಕೇಂದ್ರ ಸರ್ಕಾರದೊಂದಿಗೆ ಪ್ರಸ್ತಾಪ ಮಾಡಿದ್ದೇವೆ. ಈ ಕಾರಣದಿಂದಲೂ ಕೂಡ ಈ ಬೆಳೆಯನ್ನು ವಿಮೆ ಮಾಡುವುದರ ಮೂಲಕ ಈ ರೈತನಿಗೂ ಅನುಕೂಲ ಕಲ್ಪಿಸಿಕೊಡುವುದಕ್ಕೆ ಅನುಕೂಲವಾಗುತ್ತದೆ ಎನ್ನತಕ್ಕ ಮಾತನ್ನು ನಾನು ಅತ್ಯಂತ ವಿನಯ ಪೂರ್ವಕವಾಗಿ ಇಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ.

ಸನ್ಮಾನ್ಯ ಅಧ್ಯಕ್ಷರೆ, ಮಣ್ಣಿನ ಆರೋಗ್ಯವನ್ನು ಕುರಿತಾಗಿ ಇಲಾಖೆಯವರು ಏನೂ ಕೆಲಸ ಮಾಡಿಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕಳೆದ ೩೦–೪೦ ವರ್ಷಗಳ ಹಿಂದೆ ಮಣ್ಣಿನ ಸರ್ವೆ ಏನಿದೆ ಅದರಲ್ಲಿದ್ದಂಥ ಸತ್ವಗಳು ಏನಿವೆ ಆ ಸತ್ವಗಳಿಗೆ ನಾವು ಮಾಡಿರತಕ್ಕ ಚಿಕಿತ್ಸೆ ಏನು ? ಅವುಗಳ ಬಗ್ಗೆ ನಾವು ತೆಗೆದುಕೊಳ್ಳಬೇಕಾದ ಸಿದ್ಧತೆಗಳೇನು ? ಎನ್ನುವ ಬಗ್ಗೆ ಅನೇಕ ಸಂದರ್ಭಗಳಲ್ಲಿ ಇಂಥ ಕಾರ್ಯಕ್ರಮಗಳು ನಡೆದಿವೆ. ಆದರೆ ನಮಗಿರತಕ್ಕ ಸಂಪನ್ಮೂಲಗಳ ಇತಿಮಿತಿಯಲ್ಲಿ ಮತ್ತು ಇತ್ತೀಚೆಗೆ ಆಗಿರತಕ್ಕಂಥ ನೀರಾವರಿ ಪ್ರದೇಶಗಳಲ್ಲಿ ಸುಮಾರು ೩ ಲಕ್ಷ ಹೆಕ್ಟೇರ್ ಭೂಮಿ ಕ್ಷಾರಕ್ಕೆ ಜೌಳಿಗೆ, ಮುಂತಾದುದಕ್ಕೆ ಒಳಗಾಗಿರತಕ್ಕದ್ದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಇದಕ್ಕಾಗಿ ಸುಮಾರು ೩ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಹಣ ಬಂದಾಗ ಮಾತ್ರ ಅವುಗಳನ್ನು ಸರಿಯಾಗಿ ಶಾಶ್ವತ ಪರಿಹಾರದ ಮೂಲಕ ಕ್ಷಾರ ಮತ್ತು ಜೌಳಿಗೆ ಒಳಗಾಗಿರತಕ್ಕ ಈ ಭೂಮಿಗಳನ್ನು ನಾವು ಪುನಶ್ಚೇತನ ಗೊಳಿಸುವುದಕ್ಕೆ ಮತ್ತು ಹೊಸದಾಗಿ ಬೆಳೆಗಳನ್ನು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಆದರೆ ಇದುವರೆಗೂ ನಾವು ಈ ಬಾಬಿನಲ್ಲಿ ಖರ್ಚು ಮಾಡಿರತಕ್ಕದ್ದು ಕೇವಲ ೮೮ ಲಕ್ಷ ರೂಪಾಯಿಗಳು. ಆದರೆ ಈ ವರ್ಷ ಅಷ್ಟನ್ನೂ ಕೊಟ್ಟಿಲ್ಲವೆಂದು ಹೇಳತಕ್ಕ ವಿಚಾರವನ್ನು ಮಾನ್ಯ ಸದಸ್ಯರಾದ ಮೊಯಿನುದ್ದೀನ್‌ರವರು ಪ್ರಸ್ತಾಪ ಮಾಡಿದ್ದಾರೆ. ಈಗ ನಾವು ಇದರ ಬಗ್ಗೆ ಸಮಗ್ರವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಕೃತಕ ಉಪಗ್ರಹಗಳ ಮೂಲಕ ತೆಗೆದಿರತಕ್ಕ ಮಣ್ಣಿನ ನಕಾಶೆಗಳನ್ನು ಹೈದರಾಬಾದ್ ಕೇಂದ್ರದಿಂದ ತೆಗೆದುಕೊಂಡು ಬಂದು ಅವುಗಳ ಬಗ್ಗೆ ಹೊಸ ನೀಲಿ ನಕಾಶೆಯನ್ನು ತಯಾರು ಮಾಡತಕ್ಕದ್ದು. ಗಣಿ ಮತ್ತು ಭೂ ವಿಜ್ಞಾನ ಇಲಾಖೆಗಳ ಜೊತೆಯಲ್ಲಿ ನಾವು ನೇರವಾಗಿ ಸಂಪರ್ಕವನ್ನು ಬೆಳೆಸಿಕೊಂಡು ಅದರ ಮೂಲಕ ನಾವು ಒಂದು ಹೊಸ ಯೋಜನೆಯನ್ನು ತಯಾರು ಮಾಡುತ್ತೇವೆ ಎನ ತಕ್ಕ ಮಾತನ್ನು ಹೇಳಬಯಸುತ್ತೇನೆ. ಈ ಕೆಲಸವನ್ನು ಈ ವರ್ಷದಲ್ಲಿ ನಾವು ಕಾರ್ಯಗತಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನತಕ್ಕ ಮಾತನ್ನು ಮಾನ್ಯ ಅಧ್ಯಕ್ಷರ ಮೂಲಕ ಈ ಸದನಕ್ಕೆ ಅರಿಕೆ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಈ ವರ್ಷ ಅತ್ಯಂತ ಸಂತೋಷದ ವಿಚಾರ ಎಂದರೆ ಕಳೆದ ವರ್ಷ ಮಾನ್ಯ ಹಿರಿಯ ಸದಸ್ಯರಾದ ವೀರಪ್ಪಮೊಯ್ಲಿಯವರು ಎಲ್ಲ ವಿಚಾರ ಗಳನ್ನೂ ಪ್ರಸ್ತಾಪ ಮಾಡತಕ್ಕ ಸಂದರ್ಭದಲ್ಲಿ ಕಳೆದ ೩–೪ ವರ್ಷಗಳ ಕಾಲದಲ್ಲಿ ಬೇಸಾಯ ಇಲಾಖೆಗೆ ಕೊಟ್ಟಿರತಕ್ಕ ದುಡ್ಡನ್ನು ಕಡಿಮೆ ಮಾಡಿದ್ದೀರಿ ಎಂದು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಅದನ್ನು ಒಪ್ಪಿ ಈ ವರ್ಷ ಯೋಜನೇತರ ವೆಚ್ಚಕ್ಕೆ ೩೧.೮೯ ಕೋಟಿ ರೂಪಾಯಿ ಗಳನ್ನು ಕೊಟ್ಟಿದ್ದಾರೆ. ಕಳೆದ ವರ್ಷ ೨೫.೮೩ ಕೋಟಿ ರೂಪಾಯಿಗಳನ್ನು ಕೊಡಲಾಗಿತ್ತು. ಇದೇ ರೀತಿ ಕಳೆದ ವರ್ಷ ಯೋಜನಾ ಕಾರ್ಯಗಳಿಗೆ ೨೨.೨೬ ಕೋಟಿ ರೂಪಾಯಿಗಳನ್ನು ಕೊಡಲಾಗಿತ್ತು. ಆದರೆ ಈ ವರ್ಷ ಈ ಬಾಬಿಗೆ ೨೫.೮೬ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇದನ್ನು ನೋಡಿದರೆ ಯೋಜನೆ ಮತ್ತು ಯೋಜನೇತರ ವೆಚ್ಚಗಳಿಗಾಗಿ ಕೇಂದ್ರ ಸರ್ಕಾರ ಬೇರೆ ಯೋಜನೆಗಳಿಗೆ ಕೊಡುವುದನ್ನು ಬಿಟ್ಟರೂ ಕೂಡ ಈ ರೀತಿಯಾದ ಪ್ರಗತಿ ಹೊಂದಲು ನಮಗೆ ಹಣಕಾಸಿನ ವ್ಯವಸ್ಥೆ ಯನ್ನು ಒದಗಿಸಿಕೊಟ್ಟಿದ್ದಕ್ಕಾಗಿ ನಾನು ಮಾನ್ಯ ಮುಖ್ಯ ಮಂತ್ರಿಯವರನ್ನು ಅಭಿನಂದಿಸುತ್ತೇನೆ. ಆದರೆ ಕೊಟ್ಟಿರತಕ್ಕ ಹಣವೂ ಕೂಡ ಸಾಲದು ಎಂಬುದನ್ನು ನಾನು ಇಲ್ಲಿ ಪ್ರಸ್ತಾಪಿಸುತ್ತೇನೆ. ಆದರೆ ಕಳೆದ ವರ್ಷಕ್ಕಿಂತ ಇನ್ನೂ ಹೆಚ್ಚು ಹಣವನ್ನು ಈ ವರ್ಷ ಈ ಸಂಪನ್ಮೂಲಗಳ ಇತಿಮಿತಿಯಲ್ಲಿ ಕೊಡ ಬಾರದೆಂದು ಇದನ್ನು ನಾವು ಇನ್ನೂ ಹೆಚ್ಚು ಅರ್ಥಪೂರ್ಣವಾಗಿ ಖರ್ಚು ಮಾಡಬೇಕಾಗಿದೆ. ಇದರ ಜೊತೆಗೆ ವಿಶೇಷ ಘಟಕ ಯೋಜನೆಯಲ್ಲಿ ಹಣವನ್ನು ಖರ್ಚು ಮಾಡಿಲ್ಲವೆಂದು ಅನೇಕ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ಬಂದಿರತಕ್ಕ ಹಣ ಡಿಸೆಂಬರ್ ಅಂತ್ಯದವರೆಗೆ ಇರತಕ್ಕ ಅಂಕಿಅಂಶಗಳನ್ನು ಕೊಟ್ಟಿರುವುದರಿಂದ ಈ ಮಾರ್ಚಿ ತಿಂಗಳವರೆಗೆ ನಾವು ಲೆಕ್ಕ ಹಾಕಿದರೆ ಈ ಹಣವನ್ನು ಸಂಪೂರ್ಣವಾಗಿ ಖರ್ಚು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಬರಗಾಲ

ಕಾಮಗಾರಿಗಳಿಗೆ ಸುಮಾರು ೫ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಕೃಷಿ ಚೀಲಗಳನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೊಡತಕ್ಕ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿರುವುದರಿಂದ ಅವುಗಳನ್ನೂ ಕೂಡ ನಾವು ಸಂಪೂರ್ಣವಾಗಿ ಉಪಯೋಗಿಸಿದ್ದೇವೆ. ರಸಗೊಬ್ಬರಗಳನ್ನು ಕೊಡತಕ್ಕದ್ದು, ಸುಧಾರಿತ ಬೀಜಗಳನ್ನು ಕೊಡತಕ್ಕದ್ದು, ಅವುಗಳಿಗೆ ಕೃಷಿ ಜ್ಞಾನವನ್ನು ಒದಗಿಸತಕ್ಕದ್ದು ಏನಿದೆ ಅದನ್ನು ಒದಗಿಸಿ ಕೊಡುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಈಗಿರತಕ್ಕ ನಮ್ಮ ಕೃಷಿರಂಗದಲ್ಲಿ ಶೇಕಡ ೩-೪ರಷ್ಟು ಬೆಳವಣಿಗೆ ಇದೆ. ಈ ಬೆಳವಣಿಗೆ ಕನಿಷ್ಠ ೫ರಷ್ಟಾದರೂ ಆಗಬೇಕಾಗುತ್ತದೆ. ಈ ರೀತಿ ನಾವು ಮಾಡ ಬೇಕಾದರೆ ಮುಖ್ಯವಾಗಿ ಒಳ್ಳೆಯ ಬೀಜ ಬೇಕು. ಈ ಬೀಜದ ಜೊತೆಗೆ ಒಳ್ಳೆಯ ಜ್ಞಾನವನ್ನು ಕೊಡ ಬೇಕೆಂದು ನಮ್ಮ ಉದ್ದೇಶ ಇರುವುದರಿಂದ ಬೀಜ ನಿಗಮದವರೂ ಕೂಡ ಒಳ್ಳೆಯ ಕೆಲಸವನ್ನು ಮಾಡು ತ್ತಿದ್ದಾರೆ.

ಮಾನ್ಯ ಅಧ್ಯಕ್ಷರೆ ನಾನು ಕೃಷಿ ಖಾತೆಯನ್ನು ವಹಿಸಿಕೊಳ್ಳುವುದಕ್ಕೆ ಮುಂಚಿತವಾಗಿ ಎಲ್ಲ ಇಲಾಖೆಗಳ ನಿಗಮಗಳು ಏನಿವೆ ಅವೆಲ್ಲ ಸಂಪೂರ್ಣವಾಗಿ ನಷ್ಟದಲ್ಲಿ ನಡೆಯುತ್ತಿದ್ದುವು. ಸುಮಾರು ೧೯೦ ಲಕ್ಷ ರೂಪಾಯಿಗಳಿಗಿಂತ ಹೆಚ್ಚು ನಷ್ಟವನ್ನು ಕೃಷಿ ನಿಗಮ ಅನುಭವಿಸುತ್ತಿತ್ತು. ಆದರೆ ಈ ವರ್ಷದ ಲೆಕ್ಕಾಚಾರದ ಪ್ರಕಾರ ಕನಿಷ್ಠ ೨ ಲಕ್ಷ ರೂ. ಗಳ ನಷ್ಟದಲ್ಲಿದ್ದರೂ ಕೂಡ ಸ್ವಲ್ಪಮಟ್ಟಿಗೆ ಇದು ಸರಿದೂಗುತ್ತದೆ. ಮಾರ್ಚಿ ತಿಂಗಳ ಅಂತ್ಯದ ಲೆಕ್ಕಾಚಾರವನ್ನು ತೆಗೆದುಕೊಳ್ಳುವುದಾದರೆ ಯಾವುದೇ ನಷ್ಟ ಇಲ್ಲದಂತೆ ಕೃಷಿ ಕೈಗಾರಿಕಾ ನಿಗಮ ಈ ವರ್ಷ ಪ್ರಥಮ ಬಾರಿಗೆ ೨೦ ವರ್ಷದ ನಂತರ ಒಂದು ಹೆಜ್ಜೆಯನ್ನು ಇಟ್ಟಿದೆ ಎಂಬುದನ್ನು ಹೇಳುವುದಕ್ಕೆ ನನಗೆ ಸಂತೋಷವಾಗುತ್ತದೆ. ಮೇಲ್ಮನೆಯಲ್ಲಿ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಮಾತನಾಡಿದಂಥ ಕೆಲವು ಮಿತ್ರ ಶಾಸಕರು ಕೇವಲ ನೀವು ಮಾತನಾಡುವುದಕ್ಕೆ ಹೋಗಬೇಡಿ ಅದನ್ನು ಕಾರ್ಯತಃ ಮಾಡಿ ತೋರಿಸಿಕೊಡಿ ಎನ್ನತಕ್ಕ ಮಾತನ್ನು ಹೇಳಿದರು. ಅದನ್ನು ನಾನು ಸವಾಲಿನ ರೂಪದಲ್ಲಿ ಸ್ವೀಕಾರ ಮಾಡಿದಾಗ ಕೃಷಿ ಕೈಗಾರಿಕಾ ನಿಗಮದಲ್ಲಿರತಕ್ಕ ಈ ಎಲ್ಲ ಅಧಿಕಾರಿಗಳೂ ಮತ್ತು ವ್ಯವಸ್ಥಾಪಕ ನಿರ್ದೇಶಕರೂ, ಅಧ್ಯಕ್ಷರೂ, ಸರಿಯಾದಂಥ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಈ ವರ್ಷದಲ್ಲಿ ಸಂಪೂರ್ಣವಾಗಿ ನಷ್ಟವನ್ನು ತೊಡೆದು ಹಾಕತಕ್ಕ ಕೆಲಸವನ್ನು ಅವರು ಮಾಡಿದ್ದಾರೆಂದು ಹೇಳಬಯಸುತ್ತೇನೆ. ಅದರಲ್ಲಿರುವ ಭ್ರಷ್ಟಾಚಾರ ವನ್ನು ನಾವು ತೆಗೆದುಹಾಕಿದ್ದೇವೆಂದು ನಾನು ಹೇಳುತ್ತಿಲ್ಲ. ಆದರೆ ತೆಗೆದುಕೊಳ್ಳತಕ್ಕ ನಿರ್ಣಯಗಳನ್ನು ಸರಿಯಾದ ವ್ಯವಹಾರಿಕವಾದ ರೀತಿಯಲ್ಲಿ ತೆಗೆದುಕೊಳ್ಳುವುದರ ಮೂಲಕ ಖರೀದಿ ಮಾಡತಕ್ಕ ವಿಚಾರ ಗಳಲ್ಲಿ ಮತ್ತು ಮಾರಾಟ ಮಾಡತಕ್ಕ ಹಾಗೂ ಈ ವಿಚಾರಗಳಲ್ಲಿ ನಾವು ಕೊಟ್ಟಂಥ ಅಭಿವಚನವನ್ನು ನೆರವೇರಿಸುವುದರಲ್ಲಿ ಸೂಕ್ತ ರೀತಿಯ ಕ್ರಮಗಳನ್ನು ಕೈಗೊಂಡಿರುವುದರ ಮೂಲಕ ಈ ವರ್ಷ ಈ ನಿಗಮ ಲಾಭ ಮಾಡತಕ್ಕ ಪರಿಸ್ಥಿತಿ ಬಂದಿದೆಯೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ಅದರದೇ ಆಗಿರತಕ್ಕಂಥ ಮತ್ತೊಂದು ಸಂಸ್ಥೆ ಆಗ್ರೋ ಕಾರನ್ ಪ್ರಾಡಕ್ಟ್ಸ್ ಎಂದು ಇದೆ. ಈ ಕರ್ನಾಟಕ ಆಗ್ರೋ ಕಾರನ್ ಪ್ರಾಡಕ್ಟ್ಸ್ ಎನ್ನುವ ಸಂಸ್ಥೆ ಈ ವರ್ಷ ೨೦ ಲಕ್ಷ ರೂಪಾಯಿ ಲಾಭ ಪಡೆದಿದೆ. ೧೯೮೪-೮೫ನೇ ಸಾಲಿನ ಅಂಕಿಸಂಖ್ಯೆಗಳನ್ನು ಕೊಟ್ಟಿರುವುದರಿಂದ ಇದರ ವಿವರಗಳು ನನಗೆ ಗೊತ್ತಿಲ್ಲವೆಂದು ಮಾನ್ಯ ಸದಸ್ಯರಾದ ಮೊಯಿನುದ್ದೀನ್‌ರವರು ಹೇಳಿದರು. ಅವರು ಹೇಳುವ ರೀತಿ ಯಲ್ಲಿ ಅದು ಹಳೆಯ ಅಂಕಿಸಂಖ್ಯೆಗಳಾಗಿವೆ. ಆದರೆ ಈ ವರ್ಷದಲ್ಲಿ ಅದು ೨೦ ಲಕ್ಷ ರೂಪಾಯಿಗಳ ಲಾಭವನ್ನು ಮಾಡಿದೆ ಎಂಬುದನ್ನು ಅರಿಕೆ ಮಾಡುತ್ತಿದ್ದೇನೆ. ಇದರ ಜೊತೆಗೆ ಹೊಸ ಕಾರ್ಯಕ್ರಮ ಗಳನ್ನು ಹಾಕಿಕೊಂಡು ಈ ಸಂಸ್ಥೆಯನ್ನು ಇನ್ನೂ ನವೀಕರಣಗೊಳಿಸಬೇಕೆಂದೂ ಕೂಡ ನಾವು ಯೋಚನೆ ಮಾಡುತ್ತಿದ್ದೇವೆ. ನಮ್ಮದೇ ಆದಂಥ ಒಂದು ಬ್ರೂಯರಿಯನ್ನೂ ಕೂಡ ನಾವು ಕಟ್ಟ ಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಮೆಕ್ಕೆ ಜೋಳದಲ್ಲಿ ಸುಮಾರು ೧೩೩ ಮಿಲಿಯನ್ ಟನ್ ಹಿಟ್ಟನ್ನು ತಯಾರಿಸುವುದಕ್ಕೆ ನಮಗೆ ಸಾಧ್ಯತೆ ಇದೆ. ಅದಕ್ಕೆ ಸಂಬಂಧಪಟ್ಟಂತೆ ಇನ್ನೂ ಅನೇಕ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವುದಕ್ಕೆ ನಾವು ಯೋಚನೆ ಮಾಡುತ್ತಿದ್ದೇವೆ. ಪೌಷ್ಟಿಕ ಆಹಾರ ವನ್ನೂ ಕೂಡ ಕೊಡತಕ್ಕದ್ದರಲ್ಲಿ ನಾಳೆ ಅಕಸ್ಮಾತ್ ತಮಿಳುನಾಡು ಅಥವಾ ಆಂಧ್ರ ಪ್ರದೇಶದ ಸರ್ಕಾರ ನಮ್ಮಲ್ಲಿ ಇದನ್ನು ಖರೀದಿ ಮಾಡದಿದ್ದರೂ ಕೂಡ ೨೦ ಲಕ್ಷ ರೂಪಾಯಿಗಳಿಗಿಂತಲೂ ಕೂಡ ಲಾಭ ಕಡಿಮೆ ಆಗಲಾರದಂಥ ರೀತಿಯಲ್ಲಿ ಈ ಒಂದು ಸಂಸ್ಥೆಯನ್ನು ಪುನರ್‌ಘಟಿಸಬೇಕೆಂಬ ದೂರದೃಷ್ಟಿಯಿಂದ ನಾವು ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದೇವೆ. ಇದರ ಜೊತೆಗೆ ಆಗ್ರೋ ಫ್ರೂಟ್ಸ್ ಪ್ರಾಡಕ್ಟ್ಸ್ ವಿಚಾರದಲ್ಲಿ ಕೂಡ ಹೇಳುವುದಾದರೆ, ಇದುವರೆಗೂ ಈ ಸಂಸ್ಥೆ ಸಂಪೂರ್ಣವಾಗಿ ನಷ್ಟದಲ್ಲಿ ನಡೆಯುತ್ತಿತ್ತು.

ಈ ವರ್ಷ ಇದೂ ಕೂಡ ಲಾಭದಲ್ಲಿದೆ. ಅಂದರೆ ನಾವು ಈ ದಿಸೆಯಲ್ಲಿ ಒಂದು ದೊಡ್ಡ ಕ್ರಾಂತಿಯನ್ನು ಮಾಡಿದ್ದೇವೆಂದು ಅಲ್ಲ. ಅಥವಾ ದೊಡ್ಡ ವ್ಯಾಪಾರ ಆಗಿದೆ ಎನ್ನತಕ್ಕ ವಿಚಾರವೂ ಅಲ್ಲ. ಪಾಶ್ಚಿಮಾತ್ಯ ರಾಷ್ಟ್ರಗಳಿಗಾಗಲಿ ಅಥವಾ ಕೊಲ್ಲಿ ರಾಷ್ಟ್ರಗಳಿಗಾಗಲಿ ನಾವು ಇದನ್ನು ಕೊಡಮಾಡುತ್ತೇವೆಂದು ಹೇಳತಕ್ಕದ್ದಲ್ಲ. ಮಾವಿನ ಹಣ್ಣನ್ನು ಆ ಸಂದರ್ಭದಲ್ಲಿ ಖರೀದಿ ಮಾಡತಕ್ಕದ್ದರಲ್ಲಿ ಆಗಿರತಕ್ಕ ಸ್ವಲ್ಪಮಟ್ಟಿನ ವ್ಯತ್ಯಾಸಗಳು ಆಗಿತ್ತು. ಅದರಲ್ಲಿ ನಿಗಾವಹಿಸತಕ್ಕ, ಶ್ರಮವಹಿಸತಕ್ಕ ಕೆಲಸವನ್ನು ದಕ್ಷತೆಯನ್ನು ಸುಧಾರಣೆ ಮಾಡುವುದರ ಮೂಲಕ ಇವತ್ತು ಆಗ್ರೋ ಫ್ರೂಟ್ಸ್ ಪ್ರಾಡಕ್ಟ್ಸ್ ಸಂಸ್ಥೆ ಕೂಡ ಲಾಭದಾಯಕ ಸಂಸ್ಥೆಯಾಗಿದೆ. ಇದರ ಜೊತೆಗೆ ಬೀಜ ಪ್ರಮಾಣಿತವಾದ ಸಂಸ್ಥೆ ಮತ್ತು ಬೀಜ ನಿಗಮ ಇವೆರಡೂ ಕೂಡ ಲಾಭವನ್ನು ಮಾಡಿವೆಯೆಂದು ಹೇಳಬಯಸುತ್ತೇನೆ.

ಇನ್ನು ನಮ್ಮ ಕರ್ನಾಟಕ ಕಾಂಪೋಸ್ಟ್ ಗೊಬ್ಬರ ನಿಗಮ ಏನಿದೆ ಇದು ಮಾತ್ರ ನಷ್ಟದಲ್ಲಿ ಇನ್ನೂ ಮುಂದುವರಿಯುತ್ತಿದೆ. ಇದಕ್ಕೂ ಬೇರೆ ಬೇರೆ ಕಾರಣಗಳಿವೆ. ಒಂದು ದಿವಸಕ್ಕೆ ಕನಿಷ್ಠ ೨೦೦ ಟನ್‌ಗಿಂತ ಹೆಚ್ಚಿಗೆ ಹಸಿರು ತರಕಾರಿ ಮುಂತಾದುವು ಏನಿದೆ ಈ ಗಾರ್ಬೇಜಸ್‌ನ್ನು ಕೂಡಾ ಕೊಡಬೇಕಾಗಿದೆ. ಅನೇಕ ಸಂದರ್ಭಗಳಲ್ಲಿ ಅವರು ಹೇಳಿದಂಥ ಕಟ್ಟಡದ ಉಪಕರಣಗಳು ಆಗಿರಬಹುದು ಅಥವಾ ಬೇರೆ ಆಗಿರಬಹುದು ಇವುಗಳಿಂದ ಗೊಬ್ಬರವನ್ನು ತಯಾರು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ಬೆಂಗಳೂರು ನಗರ ಪಾಲಿಕೆಗೆ ನಾವು ವಹಿಸಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಆದರೆ ಇದು ನಮಗೆ ಬೇಡ ಎನ್ನತಕ್ಕ ಮಾತನ್ನು ಅವರು ಹೇಳುತ್ತಿದ್ದಾರೆ.

ಈ ಒಂದು ದೃಷ್ಟಿಯಲ್ಲಿ ಯೋಚನೆ ಮಾಡುವುದಾದರೆ ಕಾಂಪೋಸ್ಟ್ ಗೊಬ್ಬರವನ್ನು ತಯಾರು ಮಾಡತಕ್ಕಂಥದ್ದು ಏನು ಇದೆ ಇದು ಬೆಂಗಳೂರು ನಗರವನ್ನು ದುರ್ಗಂಧದಿಂದ ಉಳಿಸತಕ್ಕಂಥ ಒಂದು ದೊಡ್ಡ ಕೆಲಸವಾಗಿದೆ. ದಿವಸಕ್ಕೆ ಸುಮಾರು ಇನ್ನೂರು ಟನ್‌ಗಳಿಗೂ ಹೆಚ್ಚಾಗಿರತಕ್ಕಂಥ ಗೊಬ್ಬರ ಏನು ಇದೆ ಅದು ಸಿಟಿ ಮಾರ್ಕೆಟ್‌ನಲ್ಲಿರತಕ್ಕಂಥದ್ದು ಇರಬಹುದು, ಮಲ್ಲೇಶ್ವರಂ ಮಾರ್ಕೆಟ್‌ನಲ್ಲಿರತಕ್ಕಂಥದ್ದು ಇರಬಹುದು, ಅದನ್ನೆಲ್ಲ ನುಂಗಿ ಹಾಕಿ ಒಳ್ಳೆಯ ರಸಗೊಬ್ಬರವನ್ನು ತಯಾರು ಮಾಡತಕ್ಕಂಥ ಕೆಲಸವನ್ನು ಬೆಂಗಳೂರು ನಗರಪಾಲಿಕೆಯವರು ತೆಗೆದುಕೊಳ್ಳುವುದಾದರೆ ಬಹಳ ಒಳ್ಳೆಯ ಕೆಲಸವಾಗುತ್ತದೆ ಇಲ್ಲದಿದ್ದರೆ ಇದನ್ನು ಇನ್ನು ಸ್ವಲ್ಪ ದಿವಸಗಳಲ್ಲೇ ಸುಧಾರಿಸುತ್ತೇವೆ ಎನ್ನತಕ್ಕ ಮಾತನ್ನು ಹೇಳುತ್ತೇನೆ.

ರಾಯಚೂರಿನಲ್ಲಿದ್ದಂತಹ ಒಂದು ಪ್ರೋಟಿನ್ ಘಟಕ ಸುಮಾರು ೫ ವರ್ಷಗಳ ಕಾಲದಿಂದ ಏನು ಕೆಲಸ ಮಾಡದೆ ಇತ್ತು. ಶೇಕಡಾ ೧೪ ರಷ್ಟು ಅತಿ ಸಾಮರ್ಥ್ಯವನ್ನು ಮಾತ್ರ ಉಪಯೋಗಿಸಿಕೊಳ್ಳುತ್ತಿತ್ತು. ಘಟಕದ ಒಟ್ಟು ಸಾಮರ್ಥ್ಯದಲ್ಲಿ ಕೇವಲ ಶೇಕಡಾ ೧೪ ರಷ್ಟು ಮಾತ್ರ ಉಪಯೋಗಿಸಿಕೊಳ್ಳಲಾಗುತ್ತಿತ್ತು. ಈಗ ೯೫ ಲಕ್ಷ ರೂಪಾಯಿಗಳ ಹೆಚ್ಚಿಗೆ ಹಣವನ್ನು ಪಡೆಯುವುದರ ಮೂಲಕವಾಗಿ ಅಲ್ಲಿಯೇ ಒಬ್ಬ ಖಾಯಂ ನಿರ್ದೇಶಕರನ್ನು ರಾಯಚೂರಿನಲ್ಲಿಯೇ ಉಳಿಯಬೇಕೆಂಬ ಆಜ್ಞೆಯನ್ನು ಸಹ ಮಾಡುವುದರ ಮೂಲಕ ಅದು ಕೂಡ ಸಕ್ರಮವಾಗಿ ಕೆಲಸ ಮಾಡುತ್ತಿದೆ ಎನ್ನುವುದನ್ನು ತಮಗೆ ಅರಿಕೆ ಮಾಡಿಕೊಳ್ಳುತ್ತಿದ್ದೇನೆ.

ಇನ್ನು ಮಾನ್ಯ ಅಧ್ಯಕ್ಷರೇ ಎಣ್ಣೆ ಕಾಳುಗಳ ಬೆಳೆಯನ್ನು ಬೆಳೆಯತಕ್ಕಂಥ ಒಂದು ಸಹಕಾರಿ ಸಂಘದಲ್ಲಿ ಡಾ. ಕುರಿಯನ್‌ರ ರಾಷ್ಟ್ರೀಯ ಹೈನುಗಾರಿಕೆ ನಿಗಮದ ಮೂಲಕವಾಗಿ ತೆಗೆದುಕೊಂಡು ಸುಮಾರು ೧೪.೮೫ ಕೋಟಿ ರೂಪಾಯಿಗಳನ್ನು ಈಗಾಗಲೇ ಕೊಟ್ಟಿದ್ದಾರೆ. ಈ ಒಂದು ಪರಿಷ್ಕರಣಾ ಕೇಂದ್ರವನ್ನು ಈಗಾಗಲೇ ಪ್ರಾರಂಭ ಮಾಡುತ್ತೇವೆ. ಇದು ಆರು ಜಿಲ್ಲೆಗಳಿಗೆ ವ್ಯಾಪಕವಾಗಿ ಇರತಕ್ಕಂಥದ್ದಾಗಿದೆ. ಧಾರವಾಡ, ಚಿತ್ರದುರ್ಗ, ಬಳ್ಳಾರಿ, ಬಿಜಾಪುರ, ಗುಲ್ಬರ್ಗ ಈ ಜಿಲ್ಲೆಗಳ ವ್ಯಾಪ್ತಿಗೆ ಒಳಪಟ್ಟಿರತಕ್ಕಂಥ ಈ ಎಣ್ಣೆ ಕಾಳುಗಳನ್ನು ಬೆಳೆಯತಕ್ಕಂಥ ಸಹಕಾರಿ ಸಂಘಗಳ ಒಂದು ಸಂಸ್ಥೆ ಏನು ಇದೆ ಈ ಸಂಸ್ಥೆ ಬಹಳ ಒಳ್ಳೆಯ ಕೆಲಸ ಮಾಡುತ್ತಿದೆ. ಇದರ ಬಗ್ಗೆಯೂ ಕೂಡ ೧೦ ಕೋಟಿ ರೂಪಾಯಿಗಳನ್ನು ಹೆಚ್ಚಾಗಿ ನಾವು ಕೊಡುತ್ತೇವೆ ಎನ್ನುವ ಮಾತನ್ನು ಮೊನ್ನೆ ಡಾ. ಕುರಿಯನ್‌ರವರು ಹೇಳಿದ್ದಾರೆ. ಈ ೧೦ ಕೋಟಿ ರೂಪಾಯಿಗಳನ್ನು ಕೊಡುವುದರ ಮೂಲಕ ಸುಮಾರು ೨೦ ಕೋಟಿ ರೂಪಾಯಿಗಳ ಈ ಒಂದು ದೊಡ್ಡ ಸಂಸ್ಥೆ ಲಾಭದಾಯಕವಾಗಿ ನಡೆಯುವುದು ಮಾತ್ರವಲ್ಲದೆ ಇದರಿಂದ ಎಣ್ಣೆ ಕಾಳುಗಳಲ್ಲಿ ಒಂದು ದೊಡ್ಡ ಕ್ರಾಂತಿಕಾರಕವಾಗಿ ಬದಲಾವಣೆಗೆ ತರಲಿಕ್ಕೆ ಸಾಧ್ಯವಾಗು

ತ್ತದೆ. ಇದರಲ್ಲಿ ಈಗಾಗಲೇ ಬರೇ ಸೂರ್ಯಕಾಂತಿ ಮತ್ತು ನೆಲಗಡಲೆ ಮಾತ್ರ ಸೇರಿರುತ್ತದೆ. ಈ ವರ್ಷದಲ್ಲಿ ಕುಸುಬೆಯನ್ನು ಸೇರಿಸಬೇಕೆಂದು ನಿರ್ಧಾರ ಮಾಡಿದ್ದೇವೆ. ಈ ಆರು ಜಿಲ್ಲೆಗಳ ವ್ಯಾಪ್ತಿಯೊಳಗೆ ಮತ್ತೊಂದು ಜಿಲ್ಲೆಯಾದ ಬೆಳಗಾವಿ ಜಿಲ್ಲೆಯನ್ನೂ ಕೂಡ ಸೇರಿಸಬೇಕೆಂಬ ನಿರ್ಧಾರವನ್ನು ಕೂಡ ತೆಗೆದುಕೊಂಡಿದ್ದೇವೆ. ಅದಕ್ಕೆ ಸಂಬಂಧಪಟ್ಟಿರತಕ್ಕಂಥ ಬೇರೆ ಬೇರೆ ನಿಗಮಗಳು ಏನು ಇವೆ ಈ ನಿಗಮಗಳು ಮಾಡಬೇಕಾದಂಥ ಕೆಲಸ ಬೇಕಾದಷ್ಟು ಇವೆ. ಮಾನ್ಯ ಕೆ. ಎಚ್. ಪಾಟೀಲ್‌ರವರು ಹೇಳುತ್ತಿದ್ದರು. ನಿಮ್ಮಲ್ಲಿರುವ ರಿಗ್ ಮೆಷೀನುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇವುಗಳು ತುಕ್ಕು ಹಿಡಿಯುತ್ತಿರತಕ್ಕಂಥದ್ದಾಗಿರುತ್ತದೆ. ಮೆಷಿನರೀಸ್ ಕೆಲಸ ಸರಿಯಾಗಿ ಮಾಡುತ್ತಿಲ್ಲ ಎನ್ನುವ ವಿಷಯವನ್ನೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಅದು ನಿಜ, ಆದರೆ ಇತ್ತೀಚೆಗೆ ಮಾತ್ರ ನಮ್ಮ ಈ ಆರು ಇಂಚಿನ ವ್ಯಾಸ ಕೊರೆಯತಕ್ಕಂಥ ಮೆಷಿನರಿಗಳು ಯಾವುದು ಇರುತ್ತವೆ ಅವು ಸಮರ್ಪಕವಾಗಿ ಕೆಲಸ ಮಾಡುತ್ತಿವೆ. ಈ ವಿಶೇಷ ಘಟಕ ಯೋಜನೆಗಳಲ್ಲಿರತಕ್ಕಂಥ ಹಣವನ್ನು ಉಪಯೋಗಿಸಿಕೊಳ್ಳಲಿಕ್ಕೆ ನಮ್ಮ ಜಿಲ್ಲಾಧಿಕಾರಿಗಳು ಸಹಾಯವನ್ನು ಮಾಡಿದ್ದಾರೆ. ವಿಶೇಷ ಜಿಲ್ಲಾಧಿಕಾರಿಗಳು ಅಭಿವೃದ್ಧಿಗೆ ಸಂಬಂಧಪಟ್ಟವರು, ಅದರಲ್ಲೂ ಬಳ್ಳಾರಿಯಲ್ಲಿರತಕ್ಕಂಥವರು ಸುಮಾರು ೫೦ ಲಕ್ಷಕ್ಕಿಂತ ಹೆಚ್ಚು ವ್ಯಾಪಾರವನ್ನು ಕೃಷಿ ಕೈಗಾರಿಕಾ ನಿಗಮಕ್ಕೆ ಕೊಡುವ ಮೂಲಕವಾಗಿ ಹೆಚ್ಚು ಲಾಭವನ್ನು ಮಾಡಿಕೊಳ್ಳುವುದಕ್ಕೆ ಸಾಧ್ಯತೆ ಇದೆ. ಇದೇ ರೀತಿಯಲ್ಲಿ ಬೇರೆ ಜಿಲ್ಲೆಗಳಲ್ಲಿರತಕ್ಕಂಥ ಅಧಿಕಾರಿಗಳು ಕೂಡ ಈ ಕೃಷಿ ಕೈಗಾರಿಕಾ ನಿಗಮ ಎನ್ನತಕ್ಕಂಥದ್ದು ಸರ್ಕಾರ ಸ್ವಾಮ್ಯಕ್ಕೆ ಒಳಪಟ್ಟ ನಿಗಮ. ಇದನ್ನು ಬೆಳೆಸುವುದರ ಮೂಲಕ ಹೆಚ್ಚಿನ ಅಭಿವೃದ್ಧಿಗೆ ಸಹಾಯವಾಗುತ್ತದೆ. ಎನ್ನುವ ದೃಷ್ಟಿಕೋನವನ್ನು ಇಟ್ಟುಕೊಂಡು ಹೆಚ್ಚು ನಮಗೆ ವ್ಯಾಪಾರವನ್ನು ಕೊಡುವ ಮೂಲಕ ಒಂದು ಒಳ್ಳೆಯ ಪರಿಪಾಠವನ್ನು ಹಾಕಲಿಕ್ಕೆ ಸಾಧ್ಯವಾಗುತ್ತದೆ. ಮತ್ತು ಕೃಷಿ ಕೈಗಾರಿಕಾ ನಿಗಮ ಒಳ್ಳೆಯ ಕೆಲಸವನ್ನು ಕೂಡ ಮಾಡುವುದಕ್ಕೆ ಸಾಧ್ಯತೆಯಾಗುತ್ತದೆ. ಇಲ್ಲಿಯವರೆಗೂ ನಾವು ಉಪಕರಣಗಳನ್ನು ಕೊಡತಕ್ಕಂಥ ವಿಚಾರದಲ್ಲಿ ಕೃಷಿ ಕೈಗಾರಿಕಾ ನಿಗಮ ತನ್ನ ಮಾತನ್ನು ಉಳಿಸಿಕೊಳ್ಳಲಿಕ್ಕೆ ಸಾಧ್ಯವಾಗಲಿಲ್ಲ. ಮುಂದೆ ಇದನ್ನು ಬದಲಾವಣೆ ಮಾಡಿ ಅಲ್ಲಿರತಕ್ಕಂತಹ ಇಂಜನಿಯರ್ ವಿಭಾಗದಲ್ಲಿ ಕೃಷಿ ಕೈಗಾರಿಕಾ ನಿಗಮದ ಉಪಕರಣಗಳನ್ನು ತಯಾರು ಮಾಡತಕ್ಕಂಥವರಿಗೆ ಏನು ನಮ್ಮ ಇಲಾಖೆಯಿಂದ ಕೊಟ್ಟಿರತಕ್ಕಂಥದ್ದು ಇದೆ, ಆ ಇಲಾಖೆಯ ಬೇಡಿಕೆ ಏನು ಇದೆ ಅವುಗಳನ್ನು ನಿಗದಿತ ಸಮಯದಲ್ಲಿ ಪೂರೈಸಬೇಕು ಎನ್ನುವ ನಿರ್ಧಾರದ ಜೊತೆಗೆ ಇದನ್ನು ವಿಕೇಂದ್ರೀಕರಣ ಕೂಡ ಮಾಡಿದ್ದೇವೆ. ಬೇರೆ ಬೇರೆ ಜಿಲ್ಲೆಗಳಲ್ಲಿ ಬೇರೆ ಬೇರೆ ತರಹವಾದ ಕೃಷಿ ಉಪಕರಣಗಳ ಬೇಡಿಕೆಗಳು ಏನು ಇವೆ, ಅವುಗಳನ್ನು ಪೂರೈಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪ್ರಧಾನ ಕೃಷಿ ಅಧಿಕಾರಿಯನ್ನು ಒಬ್ಬ ಕಾರ್ಯದರ್ಶಿಯನ್ನಾಗಿ ಮಾಡಿ ಅಲ್ಲಿರತಕ್ಕಂತ ಕೃಷಿಕರ ಅಧ್ಯಕ್ಷರು ಮತ್ತು ಬೇರೆ ಇಲಾಖೆಗೆ ಸಂಬಂಧಪಟ್ಟಿರತಕ್ಕಂಥವರನ್ನು ಕೂಡ ಇದರಲ್ಲಿ ಸದಸ್ಯರನ್ನಾಗಿ ತೆಗೆದುಕೊಂಡು ಅಲ್ಲಿರತಕ್ಕಂಥ ಉಪಕರಣಗಳನ್ನು ಪ್ರಾದೇಶಿಕವಾಗಿ ನೋಡಿ, ಜಿಲ್ಲಾವಾರು ಬೇಡಿಕೆಗಳಿಗೆ ಅನುಗುಣವಾಗಿ ಕೃಷಿ ಉಪಕರಣಗಳನ್ನು ಅಲ್ಲಿಗೆ ಕೊಡಬೇಕು ಎನ್ನುವ ನಿರ್ಣಯ ಮಾಡಿರುವ ಮೂಲಕ ಕೃಷಿ ಕೈಗಾರಿಗೆ ನಿಗಮದವರು ಮಾತನ್ನು ತಪ್ಪಿದ್ದಾರೆ ಎನ್ನುವ ಅಪವಾದದಿಂದ ದೂರಾಗಿದ್ದೇವೆ. ಇದರ ಜೊತೆಗೆ ವಿಕೇಂದ್ರೀಕರಣವಾಗಿರುವುದರಿಂದ ರೈತರಿಗೆ ಕಡಿಮೆ ಬೆಲೆಯಲ್ಲಿ ಹೆಚ್ಚಿನ ಮತ್ತು ಇನ್ನೂ ಒಳ್ಳೆಯ ಉಪಕರಣಗಳನ್ನು ಒದಗಿಸಲಿಕ್ಕೆ ಸಾಧ್ಯವಾಗಿದೆ.

ಶ್ರೀಮಾನ್ ಭೂಪತಿಯವರು ಮಾತನಾಡುತ್ತಾ ಕೃಷಿ ಮಹಿಳೆಯರಿಗೆ ನ್ಯಾಯವಾಗಿ ತರಬೇತಿಯನ್ನು ಕೊಡುತ್ತಿಲ್ಲವೆಂದು ಹೇಳಿದ್ದಾರೆ ಇದು ನಿಜ. ಯುವಕರಿಗೆ ಮತ್ತು ಮಹಿಳೆಯರಿಗೆ ತರಬೇತಿಯನ್ನು ಕೊಡತಕ್ಕಂಥ ಸಂಸ್ಥೆಗಳನ್ನು ಇತ್ತೀಚೆಗೆ ರಚನೆ ಮಾಡಿದ್ದೇವೆ ಆದರೆ ಈ ಸಂಸ್ಥೆಗಳು ಬಹಳ ವ್ಯಾಪಕವಾಗಿ ಕೆಲಸ ಮಾಡಬೇಕಾಗುತ್ತದೆ. ೧೦೦ಕ್ಕೆ ೫೦ಕ್ಕಿಂತಲೂ ಹೆಚ್ಚಿಗೆ ಮಹಿಳೆಯರು ಇರತಕ್ಕಂಥ ಈ ದೇಶದಲ್ಲಿ ಅದರಲ್ಲೂ ಗಂಡಸರಿಗೆ ಸಮಾನವಾಗಿ ದುಡಿಯತಕ್ಕಂಥ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಹೆಂಗೆಳೆಯರು ಬದಲಾವಣೆಯನ್ನು ಹೊಂದಿರತಕ್ಕಂಥ ತಾಂತ್ರಿಕಜ್ಞಾನದಲ್ಲಿ, ವೈಜ್ಞಾನಿಕವಾಗಿರತಕ್ಕಂಥ ವಿಚಾರದಲ್ಲಿ ಅವರು ಬಹಳ ಹಿಂದುಳಿದವರಾಗಿದ್ದಾರೆ. ಅವರು ಗಂಡಸರ ಹಿಂಬಾಲಕರಾಗಿ ಮಾತ್ರ ಕೆಲಸ ಮಾಡಬೇಕಾಗಿರತಕ್ಕಂಥ ಅಗತ್ಯವಿಲ್ಲ. ಆದರೆ ಇಂದು ಇಂಥ ಅನಿವಾರ್ಯ ಪರಿಸ್ಥಿತಿ ಅವರಿಗೆ ಇದೆ. ಈ ದೃಷ್ಟಿಯಿಂದ ನಾಯಕತ್ವ ಮಟ್ಟದಲ್ಲಿ ತರಬೇತಿ ಕೊಡಬೇಕೆಂಬ ಒಳ್ಳೆಯ ಉದ್ದೇಶದ ಮೂಲಕವಾಗಿ ಹತ್ತು ದಿವಸಗಳ ತರಬೇತಿ ಕೇಂದ್ರಗಳನ್ನು ಮಾಡಿದ್ದೇವೆ. ಆದರೆ ಈ

ವರ್ಷ ಬಹಳ ವ್ಯಾಪಕವಾಗಿ ಹೆಚ್ಚು ಕ್ರಿಯಾತ್ಮಕವಾಗಿ ಕೆಲಸ ಮಾಡಬೇಕು ಎನ್ನುವ ಮಾತನ್ನೂ ಕೂಡ ನಾನು ಒಪ್ಪಿಕೊಳ್ಳುತ್ತೇನೆ. ಸುಮಾರು ೨,೨೦೦ ಕ್ಕಿಂತಲೂ ಹೆಚ್ಚು ಕೃಷಿ ಸಹಾಯಕರ ಹುದ್ದೆಗಳು ಖಾಲಿ ಇವೆ. ಇದು ರಾಷ್ಟ್ರೀಯ ಕೃಷಿ ರಂಗದಲ್ಲಿರುವಂಥ ಎರಡನೇ ಘಟಕಗಳನ್ನು ಮುಟ್ಟಲಿಕ್ಕೆ ಬಂದಿದ್ದೇವೆ. ಈ ವಿಸ್ತರಣಾ ಯೋಜನೆಯ ಕೆಳಗೆ ನಾವು ವಿಕಾಸ ಯೋಜನೆಯನ್ನೂ ಕೂಡ ಮಾಡಬೇಕಾಗಿದೆ. ನಿಮ್ಮ ಪ್ರಯೋಗಾಲಯದಲ್ಲಿ ಆಗಿರತಕ್ಕಂಥ ಕ್ರಾಂತಿಕಾರಕ ಬದಲಾವಣೆಗಳು ಭೂಮಿಯನ್ನು ಮುಟ್ಟಬೇಕಾದರೆ, ಈ ಬದಲಾವಣೆಗಳನ್ನು ಕೃಷಿಕರಿಗೂ ಕೂಡ ನಾವು ಮುಟ್ಟಿಸಬೇಕಾಗಿದ್ದರೆ. ಅದಕ್ಕೆ ಕೃಷಿಕರ ಜೊತೆಗೆ ನೇರವಾಗಿ ಕೆಲಸ ಮಾಡತಕ್ಕಂಥ ಈ ಕೃಷಿ ಸಹಾಯಕರನ್ನು ನೀಡಲು ನಮಗೆ ಆಗಿಲ್ಲ. ಆದರೆ ಟಾಪ್‌ನಲ್ಲಿ ಇರತಕ್ಕಂಥ ಅಧಿಕಾರಿಗಳು ಏನು ಇದ್ದಾರೆ, ಅದು Top heavy ಆಗಿದೆ ಎಂದು ಹೇಳಿದ ಮಾತನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಆದರೆ ಇಲ್ಲಿರತಕ್ಕಂಥ ಹುದ್ದೆಗಳನ್ನು ಬೇರೆ ಬೇರೆ ಕಾರಣಗಳಿಂದ ತುಂಬದೆ ಬಿಟ್ಟಿದ್ದೇವೆ. ಕಳೆದ ಮೂರು ತಿಂಗಳ ಹಿಂದೆ ೭೫೦ ಹುದ್ದೆಗಳನ್ನು ನಾವು ತುಂಬಿದ್ದೇವೆ. ಮಾರ್ಚ್ ೨೦ನೇ ತಾರೀಖಿಗೆ ಅಂತಿಮವಾಗಿ ಎಲ್ಲರನ್ನು ತುಂಬಲು ಎಸ್. ಎಸ್. ಎಲ್. ಸಿ. ಉತ್ತೀರ್ಣರಾಗಿರತಕ್ಕಂಥ ವಿದ್ಯಾರ್ಥಿಗಳು ಯಾರು ಇದ್ದಾರೋ ಅವರು ಕೃಷಿ ಸಹಕಾರ ಹುದ್ದೆಗೆ ಅರ್ಜಿಯನ್ನು ಕೊಡಬೇಕೆಂದು ಈಗಾಗಲೇ ನಾವು ಪ್ರಾದೇಶಿಕ ಪತ್ರಿಕೆಗಳಲ್ಲಿ ಇದರ ಬಗ್ಗೆ ಪ್ರಕಟಣೆಯನ್ನು ಕೊಟ್ಟಿದ್ದೇವೆ. ಗೆಜೆಟ್‌ನಲ್ಲೂ ಕೂಡ ಪ್ರಕಟಣೆಯನ್ನು ಕೊಡಲಾಗಿದೆ. ಸುಮಾರು ೭೫೦ ಕ್ಕಿಂತ ಹೆಚ್ಚು ಜನರನ್ನು ಈ ಕೂಡಲೇ ತೆಗೆದುಕೊಳ್ಳುತ್ತೇವೆ. ಇದಲ್ಲದೆ ೧೫೦೦ ಜನ ಕೃಷಿಕರನ್ನು ಭರ್ತಿ ಮಾಡುತ್ತೇವೆಂದು ತಮ್ಮ ಮುಂದೆ ಅರಿಕೆ ಮಾಡಿಕೊಳ್ಳುತ್ತೇನೆ. ಇದಕ್ಕಿಂತಲೂ ಹೆಚ್ಚಿನ ಜನರನ್ನು ಈ ಹುದ್ದೆಗೆ ಭರ್ತಿ ಮಾಡಿಕೊಳ್ಳುವ ಸಾಧ್ಯತೆ ಇತ್ತು. ಆದರೆ ಎಸ್. ಎಸ್. ಎಲ್. ಸಿ. ಓದಿರತಕ್ಕಂಥ ವಿದ್ಯಾರ್ಥಿಗಳಿಗೆ ಒಂದು ವರ್ಷದ ತರಬೇತಿಯನ್ನು ಕೊಡುವುದರ ಮೂಲಕವಾಗಿ ಅವರು ಕೃಷಿ ಸಹಾಯಕರಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡಬೇಕಾಗುತ್ತದೆ. ನಮ್ಮಲ್ಲಿರತಕ್ಕಂಥ ಕೃಷಿ ತರಬೇತಿ ಶಾಲೆಗಳು ಏನು ಇವೆ ಆ ಶಾಲೆಗಳಲ್ಲಿ ಏಳನೂರು ಎಂಟನೂರು ವಿದ್ಯಾರ್ಥಿಗಳಿಗಿಂತಲೂ ಹೆಚ್ಚು ಜನರನ್ನು ತೆಗೆದುಕೊಳ್ಳುವುದಕ್ಕೆ ಸ್ಥಳಾವಕಾಶ ಇಲ್ಲದಿರುವ ಕಾರಣಕ್ಕಾಗಿ ಈಗ ಹಂತ ಹಂತವಾಗಿ ತುಂಬತಕ್ಕಂಥ ಪ್ರಯತ್ನ ಮಾಡಿದ್ದೇವೆ. ನಾವು ಇದೇ ವರ್ಷದಲ್ಲಿ ೧೦೦ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ. ಮಾರ್ಚ್ ೨೦ರಲ್ಲಿ ೭೫೦ ಜನರಿಗೆ ಹುದ್ದೆಗಳನ್ನು ಕೊಡುತ್ತೇವೆ ಎನ್ನುವ ಮಾತನ್ನು ಕೂಡ ಹೇಳುತ್ತೇನೆ. ಶ್ರೀಮತಿ ನಾಗರತ್ನಮ್ಮನವರು ಈಗ ನೀವು ಕೊಟ್ಟಿರತಕ್ಕಂಥ ೭೧೦ ಲಕ್ಷ ರೂಪಾಯಿ ಕೊಟ್ಟರೆ ಕೃಷಿ ವಿಶ್ವವಿದ್ಯಾನಿಲಯಕ್ಕೆ ಯಾವ ರೀತಿಯ ಉಪಯೋಗವಾಗುತ್ತದೆ ಮತ್ತು ಇದರಲ್ಲಿ ೧೦೦ಕ್ಕೆ ೮೦-೯೦ರಷ್ಟು ಬರೀ ನಿಮ್ಮ ಸಂಬಳ ಸಾರಿಗೆಗೆ ಖರ್ಚಾಗುತ್ತಿರುವುದರಿಂದ ನೀವು ಸಂಶೋಧನೆ ಮಾಡತಕ್ಕಂಥದ್ದು ಯಾವಾಗ ಎನ್ನುವ ಮಾತನ್ನು ಹೇಳಿದ್ದಾರೆ. ಇದು ಬಹಳ ಪ್ರಾಮಾಣಿಕವಾಗಿರತಕ್ಕಂಥ ಅನಿಸಿಕೆಯಾಗಿದೆ. ನಿಜವಾಗಿಯೂ ಸಂಶೋಧನೆಗೆ ಕೊಡಬೇಕಾಗಿರತಕ್ಕಂಥ ಹಣವನ್ನು ಕೊಡಲಿಕ್ಕೆ ಸಾಧ್ಯತೆ ಆಗಿಲ್ಲ. ಆದರೂ ಕೂಡ ಸಂಪನ್ಮೂಲಗಳ ಇತಿಮಿತಿಯಲ್ಲಿ ಕಳೆದ ವರ್ಷದಿಂದ ಹೆಚ್ಚು ಹಣವನ್ನು ನಾವು ಕೊಟ್ಟುಕೊಂಡು ಬಂದಿದ್ದೇವೆ. ಆದರೂ ಇದು ಸರಿಯಾಗಿದೆ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಆದರೆ ಹೆಚ್ಚು ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ. ಅವರು ಹೇಳಿದಂತೆ ನಮ್ಮಲ್ಲಿ ಕೃಷಿ ವಿಜ್ಞಾನಿಗಳಾರತಕ್ಕಂಥವರು ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ರಾಷ್ಟ್ರಮಟ್ಟದಲ್ಲಿ ಹೆಸರು ಪಡೆದಿರತಕ್ಕಂಥವರಾಗಿದ್ದಾರೆ. ಹಸಿದವರಿಗೆ ಅನ್ನವನ್ನು ಕೊಟ್ಟಿರತಕ್ಕಂಥ ಲಕ್ಷ್ಮೀನಾರಾಯಣರಾವ್‌ರವರಾಗಿರಬಹುದು, ಬೆತ್ತಲೆಯಾಗಿರತಕ್ಕಂಥ ಈ ದೇಶದ ಮನುಷ್ಯರಿಗೆ ಹತ್ತಿಯನ್ನು ಕೊಟ್ಟಿರತಕ್ಕಂಥ ಡಾ. ಖಾತರ್ಕಿಯವರಾಗಿರಬಹುದು, ಅಥವಾ ಮಹದೇವಪ್ಪನವರಾಗಿರಬಹುದು. ಈ ದೇಶದಲ್ಲಿರತಕ್ಕಂಥ ಕರ್ನಾಟಕ ರಾಜ್ಯದ ಕೃಷಿ ವಿಜ್ಞಾನಿಗಳು ಏನು ಇದ್ದಾರೆ ಅವರು ಕಂಡು ಹಿಡಿದಿರತಕ್ಕಂಥದ್ದು ಈವತ್ತು ರಾಷ್ಟ್ರಮಟ್ಟದಲ್ಲಿ ದೊಡ್ಡ ಕ್ರಾಂತಿಯನ್ನು ಪಡೆದಿರತಕ್ಕಂಥದ್ದಾಗಿರುತ್ತದೆ. ಇದರ ಬಗ್ಗೆ ಅನೇಕ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಆದರೆ ಈ ಟೀಕೆ ಟಿಪ್ಪಣಿಗಳ ಜೊತೆಗೂ ಕೂಡ ಒಳ್ಳೆಯ ಕೆಲಸಗಳನ್ನು ಮಾಡಿರತಕ್ಕಂಥದ್ದನ್ನು ನಾವು ಸ್ಮರಿಸಬೇಕಾಗಿದೆ. ಇನ್ನೂ ಮಾಡಬೇಕಾಗಿರತಕ್ಕಂಥ ಕೆಲಸಗಳು ಜಾಸ್ತಿ ಇದೆ ಎನ್ನುವ ಮಾತನ್ನೂ ಕೂಡ ನಾನು ಒಪ್ಪಿಕೊಳ್ಳುತ್ತಿದ್ದೇನೆ. ಈ ಮಾತನ್ನು ಹೇಳುವುದರ ಜೊತೆಗೆ ಎರಡನೆಯ ಕೃಷಿ ವಿಶ್ವವಿದ್ಯಾನಿಲಯವನ್ನು ಇದೇ ಡಿಸೆಂಬರ್ ಶೈಕ್ಷಣಿಕ ವರ್ಷದಲ್ಲಿಯೇ ಧಾರವಾಡದಲ್ಲಿ ಪ್ರಾರಂಭ ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತಾ ಅದಕ್ಕಾಗಿ ಈ ಸದನ ಮುಗಿಯುವುದರೊಳಗಾಗಿ ಒಂದು ತಿದ್ದುಪಡಿ ಮಸೂದೆಯನ್ನೂ ಕೂಡ ತರುತ್ತೇನೆಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ......

ಅಧ್ಯಕ್ಷರು.—ಮಾನ್ಯ ಪಾಟೀಲರೆ ತಾವು ದಯವಿಟ್ಟು ಕುಳಿತುಕೊಳ್ಳಿ ಮಸೂದೆಗೆ ಸಂಬಂಧಪಟ್ಟ ಹಾಗೆ ಅತಿಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡುತ್ತಿರುತ್ತಾರೆ. ಅವರದು ತಡೆರಹಿತ Express ಬಸ್ ಮಧ್ಯೆ ಯಾರು ಡಿಸ್ಟರ್‌ಬೆನ್ಸ್ ಮಾಡುವುದು ಬೇಡ.

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ ಇದು ತಡೆರಹಿತ ಬಸ್ ಆಗಿದ್ದರೂ ಕೂಡ ಅಪಾಯಕ್ಕೆ ಸಿಲುಕದ ರೀತಿಯಲ್ಲಿ ನಾನು ಹೋಗಬೇಕಾಗಿದೆ. ಈಗ ಕೃಷಿ ವಿಶ್ವವಿದ್ಯಾನಿಲಯಕ್ಕೆ ಕೊಟ್ಟಿರತಕ್ಕಂಥ ಹಣ ಏನು ಇದೆ ಅದು ಕಡಿಮೆ ಎನ್ನುವುದನ್ನು ಒಪ್ಪಿಕೊಳ್ಳುವುದಾದರೂ ಇನ್ನೂ ಹೆಚ್ಚಿನ ಹಣವನ್ನು ಒದಗಿಸಲಿಕ್ಕೆ ಪ್ರಯತ್ನವನ್ನು ನಾವೂ ಮಾಡಬೇಕಾಗಿದೆ.

ಸನ್ಮಾನ್ಯ ಅಧ್ಯಕ್ಷರೇ ಇತ್ತೀಚೆಗೆ ಆಯವ್ಯಯದಲ್ಲಿ ಸನ್ಮಾನ್ಯ ಪಿ.ಡಬ್ಲ್ಯು.ಡಿ. ಸಚಿವರಿಗೆ ಹೆಚ್ಚು ಹಣವನ್ನು ಕೊಟ್ಟಿದ್ದಾರೆ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆದ್ದರಿಂದ ನಮ್ಮ ಯೋಜನೆಯ ಪ್ರಗತಿಯ ಕೆಲಸ ಏನು ಇದೆ, ನಮ್ಮ ಸರ್ಕಾರದ ಮಾನ್ಯ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ಬಡವರ ತಡೆರಹಿತ ಬಸ್ ಆಗಿ ಯಾವ ಅಪಾಯಕ್ಕೂ ಸಿಲುಕದ ರೀತಿಯಲ್ಲಿ ಜನರಿಗೆ ಕೊಟ್ಟ ಆಭಿವಚನವನ್ನು ಸಂಪೂರ್ಣವಾಗಿ ನೆರವೇರಿಸುತ್ತೇವೆ ಎನ್ನುವ ಭರವಸೆಯನ್ನೂ ಕೂಡ ಈ ಸದನದಲ್ಲಿ ತಮ್ಮ ಮೂಲಕ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

೧೦-೦೦ ಎ. ಎಂ.

ಸನ್ಮಾನ್ಯ ಅಧ್ಯಕ್ಷರೇ. ನಾನು ಬೇರೆ ಬೇರೆ ವಿಚಾರಗಳ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡದೆ, ಅತ್ಯಂತ ಮುಖ್ಯವಾಗಿರುವಂತಹ ಕೆಲವು ವಿಚಾರಗಳನ್ನು ಅಂದರೆ ಈ ವರ್ಷದಲ್ಲಿ ನಾವು ಜಾರಿಗೆ ತರಬೇಕೆಂದು ಹಾಕಿಕೊಂಡಿರುವಂತಹ ಕಾರ್ಯಕ್ರಮಗಳ ಬಗ್ಗೆ ಮಾತ್ರ ಈಗ ಪ್ರಸ್ತಾಪ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಈಗ ನಾಲ್ಕು ಕಂದಾಯ ವಿಭಾಗಗಳು ಇವೆ, ಆ ನಾಲ್ಕು ವಿಭಾಗಗಳಲ್ಲಿ ಒಂದೊಂದು ಕೃಷಿ ಪಾಲಿಟೆಕ್ನಿಕ್‌ಗಳನ್ನು ಈ ವರ್ಷದಲ್ಲಿ ಪ್ರಾರಂಭ ಮಾಡುತ್ತೇವೆ. ಶ್ರೀ ಜಿ.ವಿ.ಕೆ. ರಾವ್ ಅವರು ತಮ್ಮ ವರದಿಯಲ್ಲಿ ಈಗಿರುವಂತಹ ಕೃಷಿ ಶಾಲೆಗಳನ್ನು ಕೃಷಿ ಪಾಲಿಟೆಕ್ನಿಕ್‌ಗಳನ್ನಾಗಿ ಪರಿವರ್ತಿಸಬೇಕೆಂದು ಸಲಹೆ ಮಾಡಿದ್ದಾರೆ. ಅದರ ಒಂದು ಆಧಾರದ ಮೇಲೆ ಇದಕ್ಕೆ ಸಂಬಂಧಪಟ್ಟಂತೆ ಪಠ್ಯಕ್ರಮಗಳನ್ನು ರೂಪಿಸಿ ಈ ಸಲ ಒಂದೊಂದು ಕಂದಾಯ ವಿಭಾಗದಲ್ಲಿ ಒಂದೊಂದು ಕೃಷಿ ಪಾಲಿಟೆಕ್ನಿಕ್‌ನ್ನು ಪ್ರಾರಂಭ ಮಾಡುತ್ತೇವೆ. ಧಾರವಾಡದಲ್ಲಿ ಬೀಜ ಪರೀಕ್ಷಣಾ ಪ್ರಯೋಗಾಲಯವನ್ನು ಈ ವರ್ಷದಲ್ಲಿ ಪ್ರಾರಂಭ ಮಾಡುತ್ತೇವೆ. ಆದೇ ರೀತಿ ಉತ್ತರ ಕರ್ನಾಟಕದಲ್ಲಿ ಒಂದು ಕ್ರಿಮಿನಾಶಕ ಕೀಟನಾಶಕವನ್ನು ಪರೀಕ್ಷೆ ಮಾಡುವ ಪ್ರಯೋಗಾಲಯವನ್ನು ಈ ವರ್ಷ ಪ್ರಾರಂಭ ಮಾಡುತ್ತೇವೆ. ಈ ರೀತಿಯ ಪ್ರಯೋಗಾಲಯ ಇದುವರೆಗೆ ಬೆಂಗಳೂರಿನಲ್ಲಿ ಮಾತ್ರ ಇತ್ತು. ಈಗ ಸಲ ಹೈದರಾಬಾದ್ ಮತ್ತು ಮುಂಬೈ ಕರ್ನಾಟಕ ಭಾಗದಲ್ಲಿ ಒಂದೊಂದು ಕೇಂದ್ರವನ್ನು ತೆರೆಯುವ ಪ್ರಯತ್ನ ಮಾಡುತ್ತೇವೆ.

ಇನ್ನು ಕರ್ನಾಟಕ ಕೃಷಿ ಕೈಗಾರಿಕಾ ನಿಗಮದಲ್ಲಿರುವಂತಹ ಮಿಷಿನರಿಗಳನ್ನು ಬದಲಾವಣೆ ಮಾಡುವುದರ ಮೂಲಕ, ಅಲ್ಲಿ ಪುನರ್‌ರಚನೆ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಇದನ್ನು ನವೀಕರಣಗೊಳಿಸಬೇಕು ಮತ್ತು ಅದು ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ಹೊಸ ದೃಷ್ಟಿಕೋನವನ್ನು ಕೊಟ್ಟು ಈ ನಿಗಮವನ್ನು ಪುನರ್‌ರಚಿಸಬೇಕೆಂದಿದ್ದೇವೆ.

ಇನ್ನು ಇಡೀ ರಾಜ್ಯದಲ್ಲಿ ಭೂಸಂರಕ್ಷಣಾ ಇಲಾಖೆಗೆ ಕೊಟ್ಟಿರುವ ಹಣ ಮತ್ತು ಒಣ ಬೇಸಾಯ ಮಂಡಲಿಗಳಿಗೆ ಕೊಟ್ಟಿರುವ ಹಣ ಏನಿದೆ, ಇದು ದುರುಪಯೋಗವಾದಂತೆ ನೋಡಿಕೊಳ್ಳಬೇಕಾಗಿದೆ. ಇದು ನಮ್ಮ ಪ್ರಾಥಮಿಕ ಕರ್ತವ್ಯವಾಗಿದೆ. ಅಲ್ಲಿ ನಮ್ಮ ನಿಯಮಗಳಿಗನುಸಾರವಾಗಿ ಕೆಲಸಗಳು ಆಗುತ್ತಿವೆಯೋ ಅಥವಾ ಇಲ್ಲವೇ ಎಂಬುದನ್ನು ಪರೀಕ್ಷೆ ಮಾಡುವ ಸಲುವಾಗಿ ತಜ್ಞರ ಒಂದು ಸಮಿತಿಯನ್ನು ನೇಮಕ ಮಾಡುತ್ತಿದ್ದೇವೆ. ದಕ್ಷರಾದಂಥ ೩-೪ ಜನ ಅಧಿಕಾರಿಗಳು ಇರುವಂತಹ ಒಂದು ಜಾಗೃತ ಆಯೋಗವನ್ನು ರಚನೆ ಮಾಡಿ, ಎಲ್ಲ ಕಡೆ ಕೆಲಸ ಪ್ರಾಮಾಣಿಕವಾಗಿ ನಡೆಯುತ್ತಿದೆಯೋ ಅಥವಾ ಇಲ್ಲವೇ ಎಂಬ ಬಗ್ಗೆ ನಿಗಾ ಇಡಬೇಕೆಂದು ಅವರಿಗೆ ಹೇಳುತ್ತೇವೆ.

ಇನ್ನು ನಮ್ಮ ಕೃಷಿ ಇಲಾಖೆಗೆ ಈಗ ಏನು ಒಂದು ಸ್ಥಾನಮಾನ ಇದೆ, ಇದು ಬಹಳ ಮುಖ್ಯ ವಾಗಿರುವಂತಹದ್ದು, ಇವೊತ್ತಿನ ದಿವಸ ಈ ಇಲಾಖೆಯ ಮೂಲಕ ಒಂದು ದೊಡ್ಡ ರೀತಿಯಲ್ಲಿ ಕ್ರಾಂತಿಕಾರಕವಾದಂಥ ಬದಲಾವಣೆಯನ್ನು ಕೃಷಿ ರಂಗದಲ್ಲಿ ಮಾಡಬೇಕಾಗಿದೆ. ಒಣ ಬೇಸಾಯಕ್ಕೆ ಸಂಬಂಧಪಟ್ಟಂತೆ ನಾವು ವ್ಯಾಪಕವಾದಂಥ ಕೆಲಸ ಮಾಡಬೇಕಾಗಿದೆ. ನಾವು ಈ ವ್ಯವಸಾಯಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕೆಂಬ ತತ್ವವನ್ನು ಸದಾ ಕಾಲ ಹೇಳುತ್ತಿರುತ್ತೇವೆ. ಸದಾ ಕಾಲ ಈ ಒಂದು ವೇದಾಂತವನ್ನು ಹೇಳುವುದರ ಮೂಲಕ ಜನರು ಮೈಮರೆಯುವಂತಹ ಕೆಲಸವನ್ನು ಮಾಡಿದ್ದೇವೆ. ಕೃಷಿಕನ ಅಭಿವೃದ್ಧಿ ಬಗ್ಗೆ ಇಲ್ಲಿ ಮಾತ್ರವಲ್ಲ, ಹೊರಗಡೆಯೂ ಸಹ ಸಾಕಷ್ಟು ಭಾಷಣ ಮಾಡುತ್ತೇವೆ. ಆದರೆ ಅವರ ಸಮಸ್ಯೆಯನ್ನು ಮಾತ್ರ ಸಂಪೂರ್ಣವಾಗಿ ಬಗೆಹರಿಸುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಇವರ ಸಮಸ್ಯೆಗಳನ್ನು ಬಗೆಹರಿಸಬೇಕಾದರೆ ನ್ಯಾಯಯುತವಾಗಿರುವಂತಹ ಕೆಲವು ಕಾರ್ಯಕ್ರಮಗಳನ್ನು ನಾವು ಕೈಕೊಳ್ಳಬೇಕಾಗಿದೆ. ಇವೊತ್ತು ಚೈನಾ ದೇಶದಲ್ಲಿ ಕೃಷಿಕನಿಗೆ ಕೊಟ್ಟಿರುವಂತಹ ಒಂದು ಗೌರವವನ್ನು ನಾವು ಇಲ್ಲಿಯೂ ಕೊಡಬೇಕಾಗಿದೆ. ಬೇರೆ ದೇಶಗಳಲ್ಲಿ ಇಂತಹ ಮಾತುಗಳು ಕೇಳಿಬರದಿದ್ದರೂ ಸಹ ಇಲ್ಲಿ ಮಾತ್ರ ನಾವು ಈ ಕೃಷಿಯನ್ನು ಒಂದು ಆಕರ್ಷಣೀಯವಾಗಿರುವಂತಹ ಉದ್ಯೋಗವನ್ನಾಗಿ ಮಾರ್ಪಾಡು ಮಾಡಬೇಕಾಗಿದೆ. ಈ ದೇಶ ಅಭಿವೃದ್ಧಿಯಾಗಬೇಕಾದರೆ ವ್ಯವಸಾಯಕ್ಕೆ ನಾವು ಅತ್ಯಂತ ಹೆಚ್ಚಿನ ಪ್ರಾಮುಖ್ಯತೆ ಕೊಡಲೇಬೇಕಾಗುತ್ತದೆ. ಇದೇ ಸಂದರ್ಭದಲ್ಲಿ ನಾನು ಮತ್ತೊಂದು ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿದೆ. ಅದೇನೆಂದರೆ. ಶ್ರೀ ಕೆ. ಎಚ್. ಪಾಟೀಲ್ ಅವರು ಹೇಳಿದ ಪ್ರಕಾರ ಹತ್ತಿ ಮತ್ತು ಹತ್ತಿ ಬೀಜಗಳಿಗೆ ಸಂಬಂಧಪಟ್ಟಂತೆ ಈಗ ಏನು ವಲಯಗಳ ನಿರ್ಬಂಧವಿದೆ, ಅದನ್ನು ತೆಗೆದುಹಾಕಬೇಕೆಂದು ನಾವು ಯೋಚನೆ ಮಾಡಿದ್ದೇವೆ. ಈಗ ಈ ಒಂದು ನಿರ್ಬಂಧವಿರುವುದರಿಂದ ಒಂದು ಕಡೆಯಿಂದ ಮತ್ತೊಂದು ಕಡೆಗೆ ತೆಗೆದುಕೊಂಡು ಹೋಗುವುದು ಕಷ್ಟವಾಗಿದೆ. ಆದ್ದರಿಂದ ಈ ಬಗ್ಗೆ ನಾವು ಕಾನೂನು ಇಲಾಖೆಯ ಜೊತೆ ಮಾತನಾಡಿ ಇದಕ್ಕೆ ಸೂಕ್ತ ತಿದ್ದುಪಡಿಯನ್ನು ತರುವುದರ ಮೂಲಕ ಇಡೀ ಕರ್ನಾಟಕ ರಾಜ್ಯದಲ್ಲಿ ಒಂದೇ ರೀತಿಯ ವ್ಯವಸ್ಥೆ ಇರುವಂತೆ ಮಾಡುತ್ತೇವೆ ಮತ್ತು ಈಗಿರುವಂತಹ ನಿರ್ಬಂಧವನ್ನು ತೆಗೆದುಹಾಕುತ್ತೇವೆ. ಮತ್ತೆ ಇದಕ್ಕೆ ಸಂಬಂಧಪಟ್ಟಂತೆ ೧೯೭೫ರ ಕಾಟನ್ ಜಿನ್ನಿಂಗ್ ಅಂಡ್ ಪ್ರೆಸ್ಸಿಂಗ್ ಫ್ಯಾಕ್ಟರೀಸ್‌ನ ನಿಯಮವನ್ನು ಇದಕ್ಕೂ ಅನ್ವಯಗೊಳಿಸುವುದರ ಮೂಲಕ ಏಕ ರೂಪವಾದಂಥ ದರವನ್ನು ಹಾಕುವ ಕಾರ್ಯಕ್ರಮವನ್ನು ಸಹ ನಾವು ಹಾಕಿಕೊಂಡಿದ್ದೇವೆ. ಅದೇ ರೀತಿಯಲ್ಲಿ ರಾಷ್ಟ್ರೀಯ ಎಣ್ಣೆ ಬೀಜ ನಿಗಮಕ್ಕೆ ಆನೇಕಲ್ ತಾಲ್ಲೂಕ್‌ನಲ್ಲಿರುವ ಕ್ಯಾತಗಾನಹಳ್ಳಿ ಎಣ್ಣೆಕಾಳು ಉತ್ಪನ್ನ ಸಹಕಾರ ಸಂಘದ ಫಾರಂನ್ನೂ ಧಾರವಾಡ. ಜಿಲ್ಲೆಯಲ್ಲಿರುವ ಒಂದು. ಫಾರಂನ್ನೂ ಮತ್ತು ರಾಯಚೂರು ಜಿಲ್ಲೆಯಲ್ಲಿರುವ ಒಂದು ಫಾರಂನ್ನೂ ವಹಿಸಿಕೊಡುವುದರ ಮೂಲಕ ಅಲ್ಲಿ ಎಣ್ಣೆಕಾಳುಗಳ ಬಗ್ಗೆ ಸಂಶೋಧನೆ ಮಾಡಲು, ಸುಧಾರಿತ ತಳಿಯನ್ನು ಉತ್ಪಾದನೆ ಮಾಡುವ ಬಗ್ಗೆ ಹಾಗೂ ಫೌಂಡೇಷನ್ ಸೀಡನ್ನು ಬೆಳೆಯುವ ಬಗ್ಗೆ ಕೆಲವೊಂದು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇದರ ಜೊತೆಗೆ ನಮ್ಮ ಬೀಜ ನಿಗಮದಲ್ಲಿ ೧೯೮೪-೮೫ರಲ್ಲಿ ತೆಗೆದುಕೊಂಡ ಒಂದು ನಿರ್ಣಯದ ಪ್ರಕಾರ ಈಗ ೫೪೦೦ ಕ್ವಿಂಟಾಲ್‌ಗೂ ಹೆಚ್ಚು ಹತ್ತಿ ಬೀಜ ಸಂಗ್ರಹವಾಗಿದೆ. ಕಳೆದ ವರ್ಷ ನಮ್ಮ ರಾಜ್ಯದಲ್ಲಿ ಬರಗಾಲ ಬಂದಿದ್ದರಿಂದ ಕೇವಲ ೧೯ ನೂರು ಕ್ವಿಂಟಾಲ್‌ನಷ್ಟು ಮಾತ್ರ ಬೀಜವನ್ನು ಖರ್ಚು ಮಾಡುವುದಕ್ಕೆ ನಮಗೆ ಸಾಧ್ಯವಾಯಿತು. ಈ ಸಲ ಒಳ್ಳೆಯ ಮಳೆ ಬರುತ್ತದೆಂದು ನಾವು ನಿರೀಕ್ಷೆ ಮಾಡಿದ್ದೇವೆ. ಆದರೂ ಸಹ ನಮ್ಮಲ್ಲಿರುವ ಎಲ್ಲ ನೀರಾವರಿ ಪ್ರದೇಶಗಳಿಗೆ ಇದನ್ನು ಕೊಟ್ಟರೂ ಸಹ ಎರಡು ಸಾವಿರ ಕ್ವಿಂಟಾಲ್‌ಗಿಂತ ಹೆಚ್ಚು ಬೀಜವನ್ನು ಮಾರಾಟ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ನಾವು ಹತ್ತಿ ಬೀಜ ಉತ್ಪಾದಕರಿಂದ ಕೆ.ಜಿ.ಗೆ ೧೦೦ ರೂಪಾಯಿಗಳ ಪ್ರಕಾರ ಕೊಂಡುಕೊಂಡಿದ್ದೇವೆ. ಇದನ್ನು ನಾವು ಕೆ.ಜಿ ಗೆ ೧೩೫ ರೂಪಾಯಿಗಳ ಪ್ರಕಾರ ರೈತರಿಗೆ ಮಾರಾಟ ಮಾಡುತ್ತೇವೆ. ಇದು ೨೦ ತಿಂಗಳವರೆಗೆ ಖರ್ಚಾಗದೆ ಉಳಿದರೆ. ಇದನ್ನು ಗೊಬ್ಬರವನ್ನಾಗಿ ಪರಿವರ್ತನೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಮಾನ್ಯ ಮೊಹಿನುದ್ದೀನ್ ಅವರು ಹೇಳಿದ ಪ್ರಕಾರ ಇದನ್ನು ದನಕರುಗಳಿಗೆ ಪೌಷ್ಟಿಕ ಆಹಾರವನ್ನಾಗಿ ಪರಿವರ್ತನೆ ಮಾಡಬೇಕಾಗುತ್ತದೆ. ಈಗ ಬೇರೆ ರಾಜ್ಯದಲ್ಲಿ ಕೆ.ಜಿ ಗೆ. ೫೫-೬೦ ರೂಪಾಯಿಗಳ ಪ್ರಕಾರ ಇದು ಮಾರಾಟವಾಗುತ್ತಿದೆ. ಆದ್ದರಿಂದ ಮಾರಾಟ ದರವನ್ನು ಕಡಿಮೆ ಮಾಡುವ ಬಗ್ಗೆ ಇಲ್ಲಿಯೂ ಸಹ ನಾವು ಒಂದು ನಿರ್ಣಯವನ್ನು ಕೈಕೊಳ್ಳಬೇಕಾಗಿದೆ. ನಾವು ನೂರು ರೂಪಾಯಿಗಳ ಪ್ರಕಾರ ಕೊಂಡಿರುವ ಬೀಜವನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿದರೆ, ಇದರಲ್ಲಿ ಏನಾದರೂ ರಾಜಕೀಯ ಭ್ರಷ್ಟಾಚಾರ ಅಡಗಿದೆಯೋ ಎಂಬ ಅಪಾದನೆ ಈ ಸದನದಲ್ಲಿ ಬರಬಾರದೆಂದು ಇದನ್ನೆಲ್ಲಾ ಹೇಳುತ್ತಿದ್ದೇನೆ. ಈಗ

ಇದರಲ್ಲಿ ಎರಡು ವಿಚಾರಗಳು ಅಡಕವಾಗಿವೆ. ಮೊದಲನೆಯದಾಗಿ ಇದನ್ನು ಕಡಿಮೆ ಬೆಲೆಗೆ ಮಾರಾಟ ಮಾಡುವ ಬಗ್ಗೆ ಒಂದು ಅಪ್ರಿಯವಾದಂಥ ನಿರ್ಧಾರವನ್ನು ಕೈಕೊಳ್ಳುವುದು, ಎರಡನೆಯದಾಗಿ ಇದನ್ನು ಗೊಬ್ಬರವನ್ನಾಗಿ ಮಾರ್ಪಾಡು ಮಾಡುವುದು. ಇದನ್ನು ಗೊಬ್ಬರವನ್ನಾಗಿ ಮಾಡಿ ಹಾಳು ಮಾಡುವುದಕ್ಕಿಂತ ಕಡಿಮೆ ದರದಲ್ಲಿ ಮಾರಾಟ ಮಾಡುವುದು ಸೂಕ್ತವಾಗಿದ್ದರೆ ಆ ಬಗ್ಗೆ ಬೀಜ ನಿಗಮದವರು ತಮ್ಮ ಆಡಳಿತ ಮಂಡಲಿಯವರ ಜೊತೆ ಚರ್ಚೆ ಮಾಡಿ ಒಂದು ನಿರ್ಣಯ ಕೈಕೊಳ್ಳಬೇಕಾಗುತ್ತದೆ. ಇದಕ್ಕೆ ಸಾಕಷ್ಟು ಪ್ರಚಾರವನ್ನು ಸಹ ಅವರು ಕೊಡಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ನೀತಿ ಸಂಹಿತೆಯನ್ನು ರೂಪಿಸುವುದರ ಮೂಲಕ ಮುಂದೆ ಇದು ಆಪಾದನೆಗಳಿಂದ ಮುಕ್ತವಾಗಿರುವಂತೆ ಅವರು ನೋಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಆದಷ್ಟು ಹೆಚ್ಚಿನ ನಷ್ಟವಾಗದ ರೀತಿಯಲ್ಲಿ ಒಂದು ನಿರ್ಧಾರ ಕೈಕೊಳ್ಳಬೇಕೆಂದು ನಾವು ಆದೇಶ ಕೊಟ್ಟಿದ್ದೇವೆ. ಮುಖ್ಯವಾಗಿ ಈ ಕೃಷಿ ಇಲಾಖೆಯಲ್ಲಿ ಎಲ್ಲವೂ ಸರಿಯಾಗಿದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಮಾಡಬೇಕಾಗಿರುವಂಥಾದ್ದು ಇನ್ನೂ ಬೇಕಾದಷ್ಟು ಇದೆ. ನಾವು ಹೋಗಬೇಕಾದ ದಾರಿ ಬಹಳಷ್ಟು ಇದೆ. ಕಳೆದ ಒಂದು ವರ್ಷದಲ್ಲಿ ನಾವು ಮಾಡಿರುವಂತಹ ಕೆಲಸಗಳಲ್ಲಿ ಎಲ್ಲವೂ ಚೆನ್ನಾಗಿದೆ ಎಂದು ಹೇಳುವುದಿಲ್ಲ. ಆದರೂ ಕೆಲವು ಕೆಲಸಗಳು ಚೆನ್ನಾಗಿ ನಡೆದಿವೆ ಮಾನ್ಯ ಹಿರಿಯ ಸದಸ್ಯರಾದ ಶ್ರೀ ಪಾಟೀಲ್ ಅವರು ಸೇವಾ ಜೇಷ್ಠತಾ ಪಟ್ಟಿಯನ್ನು ಇನ್ನೂ ತಯಾರು ಮಾಡಿಲ್ಲ. ಹೈಕೋರ್ಟಿನವರ ಆದೇಶವಿದ್ದರೂ ಸಹ ಕೆಲವರಿಗೆ ಪ್ರಮೋಷನ್ ಕೊಟ್ಟಿಲ್ಲ ಎಂಬ ಮಾತನ್ನು ಹೇಳುವಾಗ ಒಬ್ಬ ಅಧಿಕಾರಿ ಹೆಸರನ್ನು ಹೇಳಿದರು, ಈ ವಿಚಾರದಲ್ಲಿ ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ಸರ್ಕಾರ ಒಂದು ನಿರ್ಧಾರ ತೆಗೆದುಕೊಳ್ಳುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ, ಕೃಷಿ ಕೈಗಾರಿಕಾ ನಿಗಮದಲ್ಲಿ ಭ್ರಷ್ಟಾಚಾರದಲ್ಲಿ ನಿರತರಾಗಿರುವ ಅಧಿಕಾರಿಗಳು ಯಾರಿದ್ದಾರೆ, ಅಂತಹವರ ಬಗ್ಗೆ ಸಂಜೀವ ಕಮಿಷನ್ ಅವರು ಕೊಟ್ಟಿರುವ ತೀರ್ಮಾನದ ಪ್ರಕಾರ ಕ್ರಮ ಕೈಗೊಳ್ಳುತ್ತೇವೆ. ಈ ಬಗ್ಗೆ ಸರ್ಕಾರದವರು ಒಂದು ನಿರ್ಧಾರ ತೆಗೆದುಕೊಂಡಿದ್ದಾರೆ. ಸಂಜೀವ ಕಮೀಷನ್‌ನ ವರದಿಯಲ್ಲಿ ಯಾರು ಯಾರನ್ನು ಗುರುತು ಮಾಡಿದ್ದಾರೋ ಮತ್ತು ಅಪರಾಧ ಮಾಡಿದ್ದಾರೆಂದು ಮೇಲ್ನೋಟಕ್ಕೆ ಸಾಬೀತಾಗಿದೆಯೋ, ಅಂತಹವರ ಮೇಲೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಕೊಳ್ಳಬೇಕೆಂದು, ಅವರು ಮಾಡಿರುವಂತಹ ಗುರುತರವಾದಂಥ ಆಪಾದನೆಗಳಿಗೆ ಸಮನ್ವಯವಾಗುವಂತಹ ರೀತಿಯಲ್ಲಿ ಕ್ರಮಗಳನ್ನು ಕೈಕೊಳ್ಳಬೇಕೆಂದು ಅಲ್ಲಿನ ವ್ಯವಸ್ಥಾಪಕ ನಿರ್ದೇಶಕರಿಗೆ ಆದೇಶ ಕೊಟ್ಟಿದ್ದೇವೆ. ಈ ವರದಿ ನಮಗೆ ಬಂದು ಐದಾರು ತಿಂಗಳಾದವು. ಈ ಆಯೋಗ ರಚನೆಯಾಗಿದ್ದು ೫ ವರ್ಷಗಳ ಹಿಂದೆ. ಇದಕ್ಕೆ ೧೧ ಲಕ್ಷ ರೂಪಾಯಿಗಳು ಖರ್ಚಾಗಿದೆ. ಆದರೂ ಸಹ ಮಾನ್ಯ ವೆಂಕಟರಾಮಯ್ಯನವರು ಕಳೆದ ೫ ವರ್ಷಗಳಿಂದ ಏನು ಕೆಲಸ ಮಾಡಿದ್ದೀರಿ ಎಂದು ಕೇಳಿದರು ? ಇದಕ್ಕಾಗಿ ನಿಮಗೆ ನಾಚಿಕೆಯಾಗಬೇಕು ಎಂದು ಹೇಳಿದರು, ಇದರಲ್ಲಿ ನಾವು ನಾಚಿಕೆ ಪಡುವುದೂ ಏನೂ ಇಲ್ಲ. ಇವರು ಕಮ್ಯೂನಿಸ್ಟ್ ಪಕ್ಷದ ಸದಸ್ಯರಾಗಿದ್ದುಕೊಂಡು ಅಸಂಘಟಿತ ಕೃಷಿ ಕಾರ್ಮಿಕರನ್ನು ಮತ್ತು ರೈತರನ್ನು ಸಂಘಟಿತರನ್ನಾಗಿ ಮಾಡಲು ಏನು ಕೆಲಸ ಮಾಡಿದ್ದಾರೆ! ಇದಕ್ಕಾಗಿ ಅವರು ನಾಚಿಕೆ ಪಡಬೇಕು ?

ಶ್ರೀ ಆರ್. ವೆಂಕಟರಾಮಯ್ಯ— ಈ ಬಗ್ಗೆ ನಾವು ಹೋರಾಟ ಮಾಡುತ್ತಿದ್ದೇವೆ.

ಅಧ್ಯಕ್ಷರು— ತಾವು ಕುಳಿತುಕೊಳ್ಳಿ.

ಶ್ರೀ ಎಂ. ಪಿ. ಪ್ರಕಾಶ್— ಅವರು ಹೋರಾಟ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಈ ಕೆಲಸವನ್ನು ಅವರು ಮಾಡಿಲ್ಲವೆಂದು ಹೇಳಿ ನಮ್ಮ ಇಲಾಖೆಯ ಈ ಬೇಡಿಕೆಯನ್ನು ದಯಮಾಡಿ ಒಪ್ಪಿಕೊಳ್ಳಬೇಕೆಂದು ಮಾನ್ಯ ಸದಸ್ಯರಲ್ಲಿ ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಕೆ. ಹೆಚ್. ಪಾಟೀಲ್ (ಗದಗ್) —ಮಾನ್ಯ ಸಚಿವರು ಧಾರವಾಡದಲ್ಲಿ ಪ್ರಾರಂಭ ಮಾಡುತ್ತಿರುವ ಕೃಷಿ ವಿಶ್ವವಿದ್ಯಾನಿಲಯದ ಬಗ್ಗೆ ಸರಿಯಾಗಿ ಹೇಳಬೇಕು. ಮಾನ್ಯ ಸದಸ್ಯಣಿಯವರಾದ ಶ್ರೀಮತಿ ನಾಗರತ್ನಮ್ಮನವರು, ಬೆಂಗಳೂರಿನಲ್ಲಿರುವ ಕೃಷಿ ವಿಶ್ವವಿದ್ಯಾನಿಲಯವನ್ನು ಧಾರವಾಡಕ್ಕೆ ಎಲ್ಲಿ ಹಾಕುತ್ತಾರೋ ಎಂದು ಸಂಶಯವನ್ನು ವ್ಯಕ್ತಪಡಿಸಿದ್ದಾರೆ. ಧಾರವಾಡದಲ್ಲೂ ಕೃಷಿ ವಿಶ್ವ

---

† ಈ ಚಿಹ್ನೆಯು ಸಂಭಂದ ಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವಿದ್ಯಾನಿಲಯಕ್ಕೆ ಬೇಕಾಗುವ ಸವಲತ್ತುಗಳು ಸಿಗುತ್ತವೆ, ಅದನ್ನು ಬೆಂಗಳೂರಿನಿಂದ ತೆಗೆದುಕೊಂಡು ಹೋಗಬೇಕಾದ ಅವಶ್ಯಕತೆ ಇರುವುದಿಲ್ಲವೆಂದು ಮಾನ್ಯ ಸಚಿವರು ತಮ್ಮ ಬಾಯಿನಿಂದಲೇ ಹೇಳಿದರೆ ಮಾನ್ಯ ಸದಸ್ಯಣಿಯವರಿಗೆ ಸಮಾಧಾನವಾಗುತ್ತದೆ. ನಾನು ಮಾನ್ಯ ಸಚಿವರಲ್ಲಿ ಇನ್ನೊಂದು ವಿಷಯವನ್ನು ಹೇಳುವುದೇನೆಂದರೆ, ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವ ಬಗ್ಗೆ ಇನ್ನೂ ಫೈನಾನ್ಷಿಯಲ್ ಸ್ಟೇಟ್‌ಮೆಂಟ್ ಆಗಿಲ್ಲ. ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡಬೇಕೆಂದು ತೀರ್ಮಾನ ಮಾಡಿರುವ ನಿಮ್ಮನ್ನು ಮತ್ತು ಮುಖ್ಯ ಮಂತ್ರಿಯವರನ್ನೂ ನಾನು ಶ್ಲಾಘಿಸುತ್ತೇನೆ, ಆದರೆ ಯಾವತ್ತು ಈ ಕೃಷಿ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುತ್ತೀರಿ ಎಂಬ ಬಗ್ಗೆ ಇನ್ನೂ ನಿಶ್ಚಿತ ತಾರೀಖನ್ನು ಹೇಳಿಲ್ಲ. ಅದನ್ನು ಹೇಳಿದರೆ ಬಹಳ ಉತ್ತಮವಾಗುತ್ತದೆ. ಯಾವ ತಾರೀಖು ಇದನ್ನು ಪ್ರಾರಂಭ ಮಾಡುತ್ತೀರಿ ಎಂದು ತಾವು ಹೇಳಬೇಕು.

ಇನ್ನು ಎರಡನೆಯದಾಗಿ ಹೇಳುವುದಾದರೆ, ಸಾಯಿಲ್ ಟೆಸ್ಟಿಂಗ್ ವಿಚಾರ. ಜಿಲ್ಲಾ ಮಟ್ಟದಲ್ಲಿ ಸಾಯಿಲ್ ಟೆಸ್ಟಿಂಗ್ ಕೇಂದ್ರಗಳನ್ನು ಇಟ್ಟಿರುವುದರಿಂದ ರೈತರಿಗೆ ಅನುಕೂಲವಾಗುವುದಿಲ್ಲ. ಹಳ್ಳಿಯಲ್ಲಿರುವ ರೈತನು ಸಾಯಿಲ್ ಟೆಸ್ಟ್ ಮಾಡಿಸುವುದಕ್ಕೆ ಜಿಲ್ಲೆಗೆ ಬಂದು ಟೆಸ್ಟ್ ಮಾಡಿಸಿಕೊಂಡು ಹೋಗುವುದಕ್ಕಾಗುವುದಿಲ್ಲ. ಆದ್ದರಿಂದ ಎಲ್ಲಾ ತಾಲ್ಲೂಕು ಮಟ್ಟಗಳಲ್ಲೂ ಸಾಯಿಲ್ ಟೆಸ್ಟಿಂಗ್ ಕೇಂದ್ರಗಳನ್ನು ತೆರೆಯಬೇಕು. ಇದರ ಜೊತೆಗೆ ಮೊಬೈಲ್ ಸಾಯಿಲ್ ಟೆಸ್ಟಿಂಗ್ ವ್ಯಾನ್‌ಗಳನ್ನು ಪ್ರತಿ ಹಳ್ಳಿಗಳಿಗೂ ಕಳುಹಿಸಬೇಕು. ೧೯೭೨ನೇ ಇಸವಿಯಲ್ಲೇ ಈ ಮೊಬೈಲ್ ಸಾಯಿಲ್ ಟೆಸ್ಟಿಂಗ್ ವ್ಯಾನ್‌ಗಳನ್ನು ಕೊಡುವುದಕ್ಕೆ ಏರ್ಪಾಡಾಗಿತ್ತು. ಆದರೆ ಇದುವರೆಗೆ ಅದು ನಿರೀಕ್ಷಿತ ಮಟ್ಟದಲ್ಲಿ ನಡೆಯಲಿಲ್ಲ. ವ್ಯವಸಾಯವೇ ನಮ್ಮ ಪ್ರಾಧಾನ ಕಸುಬಾಗಿರುವುದರಿಂದ ಅದರ ಕಡೆ ಹೆಚ್ಚು ಲಕ್ಷ್ಯಕೊಡಬೇಕು. ಇಲ್ಲದಿದ್ದರೆ ವ್ಯವಸಾಯದಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕಾಗುವುದಿಲ್ಲ. ಆಮೇಲೆ ವ್ಯವಸಾಯ ಇಲಾಖೆಗೆ ಈ ವರ್ಷ ಬಜೆಟ್‌ನಲ್ಲಿ ಕೊಟ್ಟಿರುವ ಹಣ ಸಾಲದು. ಇಷ್ಟು ಕಡಿಮೆ ಹಣದಿಂದ ಯಾವುದೇ ರೀತಿಯಲ್ಲಿ ವ್ಯವಸಾಯದಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕಾಗುವುದಿಲ್ಲ. ಬೇರೆ ಇಲಾಖೆಗಳಿಗೆ ಹಣ ಕೊಟ್ಟಿರುವುದನ್ನೂ ಮತ್ತು ವ್ಯವಸಾಯ ಇಲಾಖೆಗೆ ಕೊಟ್ಟಿರುವ ಹಣವನ್ನೂ ತುಲನೆ ಮಾಡಿ ನೋಡಿದರೆ ಈ ಇಲಾಖೆಗೆ ಬಹಳ ಕಡಿಮೆ ಹಣವನ್ನು ಕೊಟ್ಟಿರುವಿರೆಂದು ಗೊತ್ತಾಗುತ್ತದೆ. ವ್ಯವಸಾಯ ಇಲಾಖೆಯಲ್ಲಿ ಸಾಕಷ್ಟು ಹಣ ಇಲ್ಲದೇ ಇರುವುದರಿಂದ, ಅವಶ್ಯಕತೆ ಇದ್ದರೂ ಸಹ ಹುದ್ದೆಗಳನ್ನು ಭರ್ತಿ ಮಾಡಿಕೊಂಡಿರುವುದಿಲ್ಲವೆಂದು ತಿಳಿದು ಬಂದಿದೆ. ವ್ಯವಸಾಯ ನಮ್ಮ ದೇಶದ ಬೆನ್ನೆಲುಬು ಇದ್ದಂತೆ. ಈ ಇಲಾಖೆಗೆ ಬೇಕಾಗುವ ಸಿಬ್ಬಂಧಿಯನ್ನು ತಕ್ಷಣ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಬೇಕು. ಹುದ್ದೆಗಳನ್ನು ತುಂಬಲಿಕ್ಕೆ ಹಣ ಇಲ್ಲ ಎಂದರೆ, ನಿಜವಾಗಿ ಸರ್ಕಾರ ತಲೆ ತಗ್ಗಿಸಬೇಕಾಗುತ್ತದೆ. ಇದರ ಬಗ್ಗೆ ತಾವು ಉತ್ತರ ಕೊಡುವಾಗ ನಮಗೆ ಹೇಳಬೇಕು. ಇನ್ನು ಆಗ್ರೋ ಇಂಡಸ್ಟ್ರೀಗಳು ನಷ್ಟದಲ್ಲಿ ನಡೆಯುತ್ತಿವೆ ಎಂದು ನಿಮ್ಮ ವರದಿಯಲ್ಲಿ ತಿಳಿಸಿದ್ದೀರಿ. ಈ ಆಗ್ರೋ ಇಂಡಸ್ಟ್ರೀಗಳು ಲಾಭ ಮಾಡದೇ ಇದ್ದರೂ ಚಿಂತೆ ಇಲ್ಲ. ಇವುಗಳು ರೈತನ ಏಳಿಗೆಗೆ ಮತ್ತು ವ್ಯವಸಾಯದ ಪ್ರಗತಿಗೆ ಅನುಕೂಲವನ್ನು ಮಾಡಿಕೊಟ್ಟರೆ ಸಾಕು. ಆಗ್ರೋ ಇಂಡಸ್ಟ್ರೀಗಳಲ್ಲಿ ನಾವು ಲಾಭವನ್ನು ನಿರೀಕ್ಷೆ ಮಾಡುವುದು ತಪ್ಪಾಗುತ್ತದೆ. ರೈತನಿಗೆ ಬೇಕಾದ ಅಗತ್ಯ ಸೇವೆಗಳನ್ನು ಈ ಆಗ್ರೋ ಇಂಡಸ್ಟ್ರೀಗಳು ಕೊಡಬೇಕು. ಈ ದಿಸೆಯಲ್ಲಿ ಈ ಕಾರ್ಪೊರೇಷನ್ ಸ್ವಲ್ಪ ನಷ್ಟ ಅನುಭವಿಸಿದರೂ ಚಿಂತೆ ಇಲ್ಲ. ಲಾಭ ಮಾಡುವುದು ಸರ್ಕಾರದ ಗುರಿಯಲ್ಲ. ರೈತನಿಗೆ ಸಹಾಯ ಮಾಡುವುದೇ ನಮ್ಮ ಗುರಿ ಎಂದು ಸರ್ಕಾರ ತಿಳಿದುಕೊಳ್ಳಬೇಕು. ಕೇಂದ್ರ ಸರ್ಕಾರದವರು ಈ ಆಗ್ರೋ ಇಂಡಸ್ಟ್ರೀಗಳಿಗೆ ಹೇರಳವಾಗಿ ಧನ ಸಹಾಯವನ್ನು ಮಾಡಿವೆ, ರೈತನಿಗೆ ಸರಿಯಾದ ಸೌಲಭ್ಯಗಳನ್ನು ಕೊಡಲಿ ಎನ್ನುವ ಉದ್ದೇಶದಿಂದಲೇ ಕೇಂದ್ರ ಸರ್ಕಾರದವರು ಹಣವನ್ನು ಕೊಟ್ಟಿರುವುದು. ಈ ಇಂಡಸ್ಟ್ರೀಗಳಲ್ಲಿ ಅವ್ಯವಹಾರಗಳು ಏನಾದರು ನಡೆದು ನಷ್ಟಕ್ಕೆ ಕಾರಣವಾದರೆ, ಯಾರು ಇದಕ್ಕೆ ಕಾರಣವಾಗಿರುತ್ತಾರೋ ಅಂತಹವರ ಮೇಲೆ ಉಗ್ರವಾದ ಕ್ರಮಗಳನ್ನು ಕೈಗೊಳ್ಳಬೇಕು. ಯಾರು ನಷ್ಟಕ್ಕೆ ಹೊಣೆಗಾರರು ಇದ್ದಾರೋ ಅವರುಗಳನ್ನು ತಕ್ಷಣ ಸಸ್‌ಪೆಂಡ್ ಮಾಡಿ ವಿಚಾರಣೆ ಮಾಡಬೇಕು. ನಾನು ಹೋದ ಸಾರಿ ಯಾವುದೋ ಒಂದು ಇಲಾಖೆಯಲ್ಲಿ ಇಂತಹ ಅವ್ಯವಹಾರಗಳನ್ನು ಮಾಡಿದ್ದಾನೆಂದು, ಅವನು ಕೊಟ್ಟಿದ್ದ ಡೂಪ್ಲಿಕೇಟ್ ರಶೀತಿಯನ್ನು ಸಹ ನಿಮಗೆ ಕೊಟ್ಟು ಕ್ರಮ ತೆಗೆದುಕೊಳ್ಳಿ ಎಂದು ಕೇಳಿಕೊಂಡಿದ್ದೆ. ಆದರೆ ನೀವು ಅದರ ಬಗ್ಗೆ ಏನು ಕ್ರಮತೆಗೆದುಕೊಂಡಿಲ್ಲ. ಹೀಗೆ ನೀವು ಮಾಡಿದರೆ ಯಾವ ಸಂಸ್ಥೆಗಳು ನಷ್ಟ ಆಗದೇ ಇರುತ್ತವೆ ? ನೀವೇ ಹೇಳಿ ! ಯಾವುದೇ ಪಕ್ಷದವರಾಗಿರಲಿ, ಅವರು ಏನಾದರೂ

ತಪ್ಪು ಮಾಡಿದರೆ ತಕ್ಷಣ ಅವರ ಮೇಲೆ ಉಗ್ರವಾದ ಕ್ರಮಗಳನ್ನು ಕೈಗೊಳ್ಳಬೇಕು. ಆಮೇಲೆ ಯಾವುದೋ ರಾಜ್ಯದವನಿಗೆ ೧೪ ಕೋಟಿ ರೂಪಾಯಿಗಳನ್ನು ಸಹಾಯಧನ ಕೊಟ್ಟು ಬೀಜ ಕೇಂದ್ರವನ್ನು ಸ್ಥಾಪನೆ ಮಾಡಿಸಿದ್ದೀರಿ. ಏಕೆ ನಮ್ಮ ರಾಜ್ಯದಲ್ಲಿರುವ ಯಾರೂ ಸಹ ಬೀಜಗಳನ್ನು ತಯಾರು ಮಾಡುವ ಕೇಂದ್ರವನ್ನು ಸ್ಥಾಪನೆ ಮಾಡುವ ಶಕ್ತಿವುಳ್ಳವರು ಇಲ್ಲವೇ ? ಹಿತ್ತಲ ಗಿಡ ಮದ್ದಲ್ಲ ಎನ್ನುವುದು ಇಲ್ಲಿ ಸಾಬೀತಾಗುತ್ತದೆ ಎನ್ನುವುದನ್ನು ತಾವು ತೋರಿಸಿಕೊಟ್ಟಿದ್ದೀರಿ. ರಾಯಚೂರಿನಲ್ಲಿ, ದಾವಣಗೆರೆಯಲ್ಲಿ ಇರುವ ಹತ್ತಿ ಬೀಜದ ಎಣ್ಣೆ ಸಂಸ್ಥೆ ಸರ್ಕಾರದಿಂದ ೧೦ ಲಕ್ಷ ರೂಪಾಯಿಗಳನ್ನು ಸಾಲ ಕೇಳಿದರೆ ನೀವು ಕೊಡಲಿಲ್ಲ. ಹೊರಗಿನವರಿಗೆ ಮಾತ್ರ ನೀವು ಕೊಡುತ್ತೀರಿ, ಏಕೆ ಈ ತಾರತಮ್ಯವನ್ನು ನೀವು ಮಾಡುತ್ತೀರಿ ಎಂಬುದು ನಮಗೆ ಗೊತ್ತಾಗುವುದಿಲ್ಲ. ನೀವು ೧೪ ಕೋಟಿ ರೂಪಾಯಿಗಳನ್ನು ಅವರಿಗೆ ಕೊಟ್ಟಿದ್ದೀರಿ, ಆದರೆ ಅವರು ನಮ್ಮ ರಾಜ್ಯದಲ್ಲಿ ೩ ಕೋಟಿ ರೂಪಾಯಿ ಬೆಲೆ ಬಾಳುವ ಬೀಜಗಳನ್ನೂ ಸಹ ಕೊಳ್ಳಲಿಲ್ಲ. ಅದೂ ಅಲ್ಲದೇ ನೀವು ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಹತ್ತಿ ಬೀಜಗಳನ್ನು ಸಾಗಿಸುವುದಕ್ಕೂ ಸಹ ಪರವಾನಿಗೆಯನ್ನು ಕೊಟ್ಟಿರುವುದಿಲ್ಲ. ಇದರಿಂದ ರೈತರುಗಳಿಗೆ ಬಹಳ ನಷ್ಟವಾಗುತ್ತಿದೆ. ತಾವು ಈ ಎಣ್ಣೆ ಬೀಜಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸರಬರಾಜು ಮಾಡುವುದಕ್ಕೆ ಪರವಾನಿಗೆಯನ್ನು ಕೊಡಬೇಕೆಂದು ಮಾನ್ಯ ಮಂತ್ರಿವರ್ಯರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಹಿರಿಯ ಸದಸ್ಯರಾದ ಮಾನ್ಯ ಕೆ. ಹೆಚ್. ಪಾಟೀಲರು ಹತ್ತಿ ಬೀಜಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವುದಕ್ಕೆ ಪರವಾನಿಗೆಯನ್ನು ಕೊಡಬೇಕೆಂದು ಹೇಳಿದ್ದಾರೆ. ಪ್ರಾದೇಶಿಕ ತಳಿಗಳ ಹತ್ತಿ ಬೀಜಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಣೆ ಮಾಡುವುದಕ್ಕೆ ಬಿಟ್ಟರೆ ಹತ್ತಿಯ ಬೀಜದ ತಳಿಗಳಲ್ಲಿ ಹೆಚ್ಚು ಕಡಿಮೆ ಆಗುತ್ತದೆ ಎನ್ನುವ ಉದ್ದೇಶದಿಂದ ನಿರ್ಬಂಧವನ್ನು ಹಾಕಿದ್ದೆವು. ಈಗ ಜಯಲಕ್ಷ್ಮಿ, ವರಲಕ್ಷ್ಮೀ ಹತ್ತಿಯನ್ನು ರಾಜ್ಯದ ಎಲ್ಲಾ ಕಡೆಗಳಲ್ಲೂ ಬೆಳೆಯುತ್ತಿರುವುದರಿಂದ, ಹತ್ತಿಯ ಗುಣಮಟ್ಟದಲ್ಲಿ ಯಾವುದೇ ರೀತಿಯ ಏರುಪೇರು ಆಗುವುದಿಲ್ಲ ಎನ್ನುವ ಉದ್ದೇಶದಿಂದ ಈಗಿರುವ ಸಾಗಾಣಿಗೆ ನಿರ್ಬಂಧವನ್ನು ತೆಗೆದುಹಾಕಬೇಕೆಂದು, ಮೊದಲಿದ್ದ ಸಾಗಾಣಿಕೆ ನಿರ್ಬಂಧದ ಕಾನೂನಿಗೆ ತಿದ್ದುಪಡಿಯನ್ನು ಸೂಚಿಸಿ ಅದನ್ನು ಕಾನೂನು ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆ. ಅದು ಕಾನೂನು ಇಲಾಖೆಯಿಂದ ಬಂದ ತಕ್ಷಣ ಮಸೂದೆಯನ್ನು ಮಾಡಿ, ಎಣ್ಣೆ ಬೀಜದ ಸಾಗಾಣಿಕೆಗೆ ಅವಕಾಶ ಮಾಡಿಕೊಡುತ್ತೇವೆ. ಇನ್ನು ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡಿಲ್ಲವೆಂದು ಹೇಳಿದ್ದಾರೆ. ೧೯೮೬ನೇ ಇಸವಿಯಲ್ಲಿ ಈ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡಬೇಕೆಂದು ತಾವುಗಳು ಏನು ನಿರ್ಧಾರ ಮಾಡಿದ್ದೀರೋ ಅದಕ್ಕೆ ತಕ್ಕಂತೆ ನಾವು ಆ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುವ ಸುಯೋಗ ಬಂದಿದೆ ಎಂದು ನಾನು ಸಂತೋಷದಿಂದ ಹೇಳುತ್ತಿದ್ದೇನೆ. ಬೆಂಗಳೂರಿನಲ್ಲಿರುವ ಕೃಷಿ ವಿಶ್ವವಿದ್ಯಾನಿಲಯದಲ್ಲಿರುವ ಸಲಕರಣೆಗಳನ್ನು ಧಾರವಾಡಕ್ಕೆ ತೆಗೆದುಕೊಂಡು ಹೋಗುತ್ತಾರೆ ಎನ್ನುವ ಭಾವನೆ ನಿರಾಧಾರವಾದುದೆಂದು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಆಯವ್ಯಯದಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ಪ್ರತ್ಯೇಕವಾಗಿ ೧ ಕೋಟಿ ೫೫ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್.—ಯೋಜನೇತರ ವೆಚ್ಚಕ್ಕಾಗಿ ಕೃಷಿ ವಿಶ್ವ ವಿದ್ಯಾಲಯ ಬೆಂಗಳೂರಿಗೆ, ೭ ಕೋಟಿ, ೮೯ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಕೃಷಿ ವಿಶ್ವವಿದ್ಯಾನಿಲಯ ಧಾರವಾಡಕ್ಕೆ ೧ ಕೋಟಿ, ೧೨ ಲಕ್ಷ ೪೫ ಸಾವಿರ ರೂ. ಗಳನ್ನು ಇಟ್ಟಿದ್ದೇವೆ. ಆದುದರಿಂದ ಒಂದು ಕಂರ್ಚಿಯಲ್ಲಿನ ಎರಡು ಕಾಲನ್ನು ಆ ಕಡೆಗೆ ತೆಗೆದುಕೊಂಡು ಹೋಗಿ, ಎರಡು ಕಾಲನ್ನು ಈ ಕಡಗೆ ಇಡುತ್ತಾರೆ ಎನ್ನುವಂತಹ ಮಾತು ಏನಿದೆ ಅದು ನಿರಾಧಾರವಾದುದು ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಇನ್ನು ಕೃಷಿ ಕೈಗಾರಿಕೆ ವಿಷಯದಲ್ಲಿ ಹೇಳುವುದಾದರೆ, ಇದರಲ್ಲಿ ಲಾಭ ಮುಖ್ಯವಾದುದು ಅಲ್ಲ. ಇದರ ಬೆಳವಣಿಗೆಯ ಮೂಲ ಉದ್ದೇಶವನ್ನು ನೇರವೇರಿಸುವುದರಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗಿದೀರಿ ಎಂದು ಹೇಳಿದ್ದಾರೆ. ಇವೊತ್ತು ಒಂದು ವ್ಯವಹಾರಿಕವಾದ ಸಂಸ್ಥೆಯಾಗಿ ಸ್ಥಾಪನೆ ಮಾಡುವಾಗ ಕೃಷಿ ವಿಶ್ವವಿದ್ಯಾನಿಲಯಕ್ಕೆ ಪೂರಕವಾಗಿರತಕ್ಕಂತಹ, ಸಮಗ್ರ ಅಭಿವೃದ್ಧಿಗೆ ಇದು ಬಹಳ ಗುರುತರವಾಗಿತಕ್ಕಂತಹ ಪಾತ್ರವನ್ನು ವಹಿಸುತ್ತದೆ ಎಂದು ಹೇಳುವ ಸಂಧರ್ಭದಲ್ಲಿ, ಇದನ್ನು ಲಾಭದಾಯಕವಾಗಿ ಪರಿವರ್ತನೆ ಮಾಡದೇ ಹೋದರೂ ಕೂಡ, ನಷ್ಟವನ್ನು ಅನುಭವಿಸಬಾರದು ಎನ್ನೆ

ತಕ್ಕಂಥದ್ದನ್ನು ಎಲ್ಲರೂ ಒಪ್ಪತಕ್ಕಂಥಾದ್ದಾಗಿದೆ. ಆದುದರಿಂದ ಕಳೆದ ೧೧ ವರ್ಷಗಳಿಂದ ಇಲ್ಲಿ ಕ್ರೋಢೀಕೃತವಾಗಿರತಕ್ಕಂತಹ ನಷ್ಟ ೧೨½ ಕೋಟಿ ರೂಪಾಯಿಗಳು ಆಗಿತ್ತು. ಈ ಕೃಷಿ ಕೈಗಾರಿಕಾ ನಿಗಮಕ್ಕೆ. ಈ ೧೨½ ಕೋಟಿ ರೂಪಾಯಿಗಳಲ್ಲಿ, ಕಳೆದ ವರ್ಷ ಸುಮಾರು ೯೧ ಲಕ್ಷಕ್ಕಿಂತಲೂ ಹೆಚ್ಚು ನಷ್ಟವಾಗಿರತಕ್ಕಂತಹ ಈ ನಿಗಮವನ್ನು, ಆ ಉದ್ದೇಶಿತ ಗುರಿಯನ್ನು ಮುಟ್ಟುವ ದಿಸೆಯಲ್ಲಿ ನಾವು ಈಗ ಸುಮಾರು ಲಾಭವನ್ನು ಮಾಡಿಕೊಡತಕ್ಕಂತಹ ಮಟ್ಟಕ್ಕೆ ಬಂದಿದ್ದೇವೆ. ಇದರ ಬಗ್ಗೆ ಮಾನ್ಯ ಕೆ.ಹೆಚ್. ಪಾಟೀಲರು ನಮಗೆ ಶಹಬಾಶ್‌ಗಿರಿಯನ್ನು ಕೊಡುತ್ತಾರೆ ಎಂದು ಭಾವಿಸುತ್ತೇನೆ. ಇದರ ಜೊತೆಯಲ್ಲಿ ರಾಯಚೂರಿನಲ್ಲಿರತಕ್ಕಂತಹ ಕ್ರಿಮಿನಾಶಕಗಳನ್ನು ತಯಾರು ಮಾಡತಕ್ಕಂತಹ ಘಟಕ ಬಹಳ ವರ್ಷಗಳಿಂದ ಮುಚ್ಚಲ್ಪಟ್ಟಿತ್ತು. ಅದನ್ನು ವಹಿಸಿಕೊಂಡು ೧೨ ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಿ, ಪ್ರಾರಂಭ ಮಾಡುವ ಹಂತದಲ್ಲಿ ಅದಕ್ಕೆ ಲೈಸನ್ಸ್ ಕೊಡುವುದಕ್ಕೆ ಒಂದು ವರ್ಷ ಕಾಲ ಹಿಡಿಯಿತು. ಅದಾದನಂತರ ಕೂಡಲೇ ಪ್ರಾರಂಭ ಮಾಡುವುದರ ಜೊತೆಗೆ, ಅದು ಕೂಡ ಲಾಭದಾಯ ಸಂಸ್ಥೆಯಾಗಿ ಕೆಲಸ ಮಾಡತಕ್ಕಂತಹ ಪ್ರಯತ್ನವನ್ನೂ ಮಾಡಿದ್ದೇವೆ ಎಣ್ಣೆಕಾಳು ಸಹಕಾರ ಸಂಘ ಏನಿದೆ, ಇದಕ್ಕೆ ೧೪.೮೫ ಕೋಟಿ ರೂಪಾಯಿಗಳನ್ನು ಪರಿಹಾರವನ್ನು ಕೇಂದ್ರಕ್ಕೆ ನಾವು ಕೊಡಬೇಕು ಎಂಬ ತಪ್ಪು ಅಭಿಪ್ರಾಯವನ್ನು ತಾವು ತಿಳಿದುಕೊಂಡಿದ್ದೀರಿ. ಆ ರೀತಿಯಾಗಿ ೧೪.೮೫ ಕೋಟಿ ರೂಪಾಯಿಗಳನ್ನು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿಯವರು ನಮಗೆ ಕೊಟ್ಟಿದ್ದಾರೆ ಇದರಲ್ಲಿ ಸಮಗ್ರವಾಗಿರತಕ್ಕಂತಹ ಬೀಜಗಳನ್ನು ಮಾಡತಕ್ಕಂತಹ, ಪ್ಲಾಂಟೇಶನ್‌ಗಳನ್ನು ಸೀಡ್‌ಗಳನ್ನು ಬೆಳೆಯತಕ್ಕಂತಹ ಸಹಕಾರಿ ಸಂಘಗಳಲ್ಲಿ ಅಲ್ಲಿರತಕ್ಕಂತಹ, ಮತ್ತು ಅಲ್ಲಿ ಕೆಲಸ ಮಾಡತಕ್ಕಂತಹ ಸದಸ್ಯರಿಗೆ, ಹೆಚ್ಚು ಹಣವನ್ನು ಕೊಡುವುದರ ಮೂಲಕ, ಬಂದಿರುವ ಲಾಭಾಂಶನ್ನೂ ಕೂಡ ಅವರಿಗೆ ಹಂಚುವ ಪ್ರಯತ್ನವನ್ನು ಮಾಡಿ ಕಳೆದ ವರ್ಷ ತೆಗೆದುಕೊಂಡಿರತಕ್ಕಂತಹ ಮೊತ್ತಕ್ಕಿಂತಲೂ ಒಂದು ಕ್ವಿಂಟಾಲಿಗೆ ಬೆಲೆಯನ್ನು ಕೊಡುವುದರ ಜೊತೆಗೆ, ಬಂದ ಲಾಭದ ಮೇಲೆ ಅಲ್ಲಿರುವಂತಹ ಸದಸ್ಯರಿಗೆ ಹಂಚಿ ಹಾಕಿದ ನಂತರ ಪ್ರತಿ ಕ್ವಿಂಟಾಲಿಗೆ ೨೦ ರೂಪಾಯಿಗಳಷ್ಟು ಹೆಚ್ಚು ಹಣ ರೈತನಿಗೆ ಬಂದಿದೆ ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಇದರಲ್ಲಿ ೮ ಕೋಟಿ ರೂಪಾಯಿಗಳನ್ನು ಮಾತ್ರ ಪರಿಷ್ಕರಣ ಕೇಂದ್ರಕ್ಕೆ ಖರ್ಚು ಮಾಡಿದ್ದೇವೆ ನಾನು ಈ ಇಲಾಖೆಯ ಅಧಿಕಾರವನ್ನು ವಹಿಸಿಕೊಳ್ಳುವುದಕ್ಕಿಂತ ಪೂರ್ವದಲ್ಲಿ ರಾಯಚೂರಿನಲ್ಲಿರತಕ್ಕಂತಹ ಎಣ್ಣೆಯ ಘಟಕವನ್ನು ಈ ಕೃಷಿ ಹೈನುಗಾರಿಕಾ ನಿಗಮಕ್ಕೆ ಖರೀದಿ ಮಾಡಬೇಕೆನ್ನುವ ಪ್ರಸ್ತಾವನೆ ಇತ್ತು. ಆದಕ್ಕೆ ನಾನು ಒಪ್ಪಿಗೆ ಕೊಡಲಿಲ್ಲ. ಮಾನ್ಯ ಕೆ.ಹೆಚ್. ಪಾಟೀಲರು ಹೇಳಿದಂತೆ ಮತ್ತೊಂದು ಸ್ವಾಮ್ಯತ್ವಕ್ಕೆ ಒಳಪಟ್ಟಿರತಕ್ಕಂತಹ ಒಂದು ಘಟಕವನ್ನು ಮತ್ತೊಂದು ಸಂಸ್ಥೆಯವರು ಖರೀದಿ ಮಾಡುವಾಗ, ಅದಕ್ಕೆ ಕಾಯಕಲ್ಪ ಕೊಡಬೇಕು. ಅದನ್ನು ಪುನಶ್ಚೇತನಗೊಳಿಸಬೇಕು, ಅದನ್ನು ಕೊಡುವುದರ ಜೊತೆಗೆ ಅದಕ್ಕಾಗಿ ನಬಾರ್ಡ್‌ನಿಂದ ೯೫ ಲಕ್ಷ ರೂಪಾಯಿಗಳನ್ನು ಸಾಲವನ್ನು ತೆಗೆದುಕೊಂಡಿದ್ದೇವೆ ಆದಕ್ಕಾಗಿ ಒಂದು ಪ್ರತ್ಯೇಕವಾದ ವ್ಯವಸ್ಥೆಯನ್ನು ಮಾಡಿ ಕೆಲಸ ಮಾಡುವುದರ ಜೊತೆಗೆ ಇಲ್ಲಿ ಒಂದು ೮ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮತ್ತೊಂದು ಕಾರ್ಖಾನೆಯನ್ನು ಮಾಡುವ ಪ್ರಯತ್ನವನ್ನು ಮಾಡುತ್ತೇವೆ. ಮಾನ್ಯರು ಪ್ರಸ್ತಾಪ ಮಾಡಿದಂತೆ ಧಾರವಾಡ ಜಿಲ್ಲೆಯ ಬಿಂಕದ ಕಟ್ಟೆಯ ಆ ಕಾರ್ಖಾನೆಯವರಿಗೆ ಹಣಕಾಸಿನ ಸಹಕಾರ ಬೇಕಾದರೆ ಅವರು ಇಂತಹ ಒಂದು ಪ್ರಾಥಮಿಕವಾದಂತಹ ಸಹಕಾರ ಸಂಸ್ಥೆಯನ್ನು ಅದೇ ರೀತಿ ಕಟ್ಟಬೇಕು. ಧಾರವಾಡ ಅದರ ವ್ಯಾಪ್ತಿಯಲ್ಲಿ ಬರುವುದರಿಂದ ಅವರು ಕೊಡತಕ್ಕಂತಹ ಯಾವುದಾದರೂ ಕಾರ್ಖಾನೆಗಳಿಗೆ ನಾವು ಸಹಾಯವನ್ನು ಕೊಡುವುದಾದರೆ ಆ ಚೌಕಟ್ಟಿನ ಅಡಿಯಲ್ಲಿ ನಮ್ಮ ಸಹಕಾರ ಹಸ್ತವನ್ನು ಕೊಡಲಿಕ್ಕೆ ಸಾಧ್ಯವಾಗುತ್ತವೆ ಎಂದು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರು.

ಶ್ರೀಮತಿ ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಎಕ್ಸ್‌ಪ್ಲೈನ್ ಮಾಡಿದ ವಿಚಾರ ನನಗೆ ತಿಳಿಯಲಿಲ್ಲ; ಕಾರಣ ನಾನು ಸ್ವಲ್ಪ ತಡವಾಗಿ ಬಂದೆ. ಈ ಪೆಸ್ಟಿಸೈಡ್‌ನಿಂದ ಬಾಧೆಯನ್ನು ಪಡತಕ್ಕಂತಹ ಜನಗಳಿಗೆ ಎಕ್ಸ್‌ಪ್ಲನೇಶನ್ ಬಹಳ ಅಗತ್ಯ. ಯೂನಿವರ್ಸಿಟಿಗಳಲ್ಲಿ ಏನು ಆಗುತ್ತದೆ, ಅಷ್ಟಕ್ಕೇ ಅದು ನಿಂತು ಹೋಗುತ್ತದೆ. ಅದಕ್ಕೆ ಬದಲಾಗಿ ಅದನ್ನು ಡಿಪಾರ್ಟ್‌ಮೆಂಟ್‌ನವರು ಮುಂದಕ್ಕೆ ತೆಗೆದುಕೊಂಡು ಹೋಗಬೇಕಾಗುತ್ತದೆ. ಇವರ ಕೆಳಗೆ ಸಾಕಷ್ಟು ಸಿಬ್ಬಂದಿಯನ್ನು ಕೊಟ್ಟು, ಅದನ್ನು ಮಾಡಬೇಕಾದ ಅವಶ್ಯಕತೆ ಇದೆ. ಯೂನಿವರ್ಸಿಟಿ ಬಗ್ಗೆ ನಾವು ರಿಪೋರ್ಟ್ ಕೊಡಬೇಕಾಗುತ್ತದೆ. ಅದರಲ್ಲಿ ನಾವು ಅದಕ್ಕೆ ಬರತಕ್ಕಂತಹ ಉತ್ಪತ್ತಿಯನ್ನು ನೀವು

ಗ್ರಾಂಟ್ ಕೊಡುವಾಗ ಇದನ್ನು ಸೇರಿಸಬೇಡಿ. ಅದನ್ನು ಬಿಟ್ಟು ನೀವು ಗ್ರಾಂಟ್ ಕೊಡಬೇಕೆಂದು ಹಿಂದಿನಿಂದಲೂ ಬೇಡಿಕೆ ಇದೆ. ಈಗಲೂ ಹೇಳುತ್ತಿದ್ದೇನೆ, ದಯವಿಟ್ಟು ಅದನ್ನು ಕನ್ಸಿಡರ್ ಮಾಡಬೇಕು.

ಶ್ರೀ ಎಂ. ಪಿ. ಪ್ರಕಾಶ್.—ಹಿರಿಯ ಸದಸ್ಯಣಿಯಾದವರಾದಂತಹ ಶ್ರೀಮತಿ ನಾಗರತ್ನಮ್ಮನವರು ಬಹಳ ಉತ್ತಮವಾದಂತಹ ಸಲಹೆಗಳನ್ನು ಕೊಟ್ಟಿದ್ದಾರೆ. ಹಿಂದಿನ ಸಚಿವರಾದಂತಹ ಮಾನ್ಯ ಶ್ರೀಕಂಠಯ್ಯನವರೂ ಕೂಡ ಇದೇ ಸದನದಲ್ಲಿ ಇಂತಹ ಅಭಿವಚನವನ್ನು ಕೊಟ್ಟರು. ಕೃಷಿ ವಿಶ್ವವಿದ್ಯಾನಿಲಯದ ಉತ್ಪಾದನೆಯನ್ನು ಅವರೇ ಬಳಸಿಕೊಳ್ಳತಕ್ಕಂಥಾದ್ದು ಅದನ್ನು ನಾವು ತೆಗೆದುಕೊಳ್ಳಬಾರದು ಎಂದು ಹೇಳಿದ್ದಾರೆ. ಆ ಉತ್ಪಾದನೆಯ ಹಣವನ್ನು ಮಂಜೂರು ಮಾಡುವಾಗ ಗಣನೆಗೆ ತೆಗೆದುಕೊಳ್ಳಬಾರದು ಎಂದು ಹೇಳಿದ್ದಾರೆ. ಆ ಕುರಿತು ನಾವೂ ಕೂಡಾ ಯೋಚನೆ ಮಾಡಿದ್ದೇವೆ: ಈ ಕುರಿತು ಒಂದು ನಿರ್ಣಯವನ್ನು ಶೀಘ್ರವಾಗಿ ತೆಗೆದುಕೊಳ್ಳುತ್ತೇವೆ. ಇದರ ಜೊತೆಗೆ ಕೇಂದ್ರ ಸರಕಾರದ ವ್ಯಾಪ್ತಿಯಲ್ಲಿರತಕ್ಕಂತಹ ಫಾರಂಗಳು ಏನಿವೆ, ಜಾವಳಗೇರಿಯ ೭ ವರೆ ಸಾವಿರ ಎಕರೆ ನೀರಾವರಿ ಇರತಕ್ಕಂತಹ ಪ್ರದೇಶವನ್ನು ಪಂಪ ವಿಶ್ವವಿದ್ಯಾನಿಯದ ರೀತಿಯಲ್ಲಿ ಧಾರವಾಡದ ಕೃಷಿವಿಶ್ವವಿದ್ಯಾಲಯಕ್ಕೆ ಕೊಡಬೇಕು, ಕೊಡುವಾಗ ಅದನ್ನು ಅಭಿವೃದ್ಧಿಪಡಿಸಿ ಅದರಲ್ಲಿ ಸಂಪನ್ಮೂಲಗಳು ಏನು ಬರುತ್ತವೆ ಅದನ್ನು ಅಲ್ಲಿಯೇ, ಮತ್ತು ಕೃಷಿವಿದ್ಯಾಲಯಕ್ಕೆ ಖರ್ಚು ಮಾಡಬೇಕೆನ್ನುವ ಯೋಚನೆಯನ್ನು ಕೂಡ ಮಾಡಿದ್ದೇವೆ, ಇತ್ತೀಚೆಗೆ ಕೇಂದ್ರ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಸಚಿವರಾದಂತಹ ಮಾನ್ಯ ಬೂಟಾಸಿಂಗ್‌ರವರು, ನಾವು ಕೇಳಿದಷ್ಟು ಧಾನ್ಯವನ್ನು ಕೊಡುತ್ತೇವೆ ಎನ್ನತಕ್ಕಂತಹ ಮಾತನ್ನು ಕೊಟ್ಟಿರುವುದರಿಂದ, ಇದರ ಬಗ್ಗೆ ವಿವರಗಳನ್ನು ಪಡೆದುಕೊಂಡು. ಕೇಂದ್ರ ಸರಕಾರದವರು ಹೇಳಿದ ಹಾಗೆ ಧಾನ್ಯವನ್ನು ಕೊಡುವುದಾದರೆ, ನಾವು ಧಾನ್ಯ ಸಾಲವನ್ನು ಕೊಡುತ್ತೇವೆ. ನಮ್ಮ ಕಡೆಗೆ ಇದನ್ನು ವಾತ ಎಂದು ಕರೆಯುತ್ತಾರೆ. ಆ ರೀತಿಯಾಗಿ ಕನಿಷ್ಟ ಒಂದು ಕುಟುಂಬಕ್ಕೆ ೩ ರಿಂದ ೫ ಕ್ವಿಂಟಾಲ್ ಧಾನ್ಯವನ್ನು ಕೊಟ್ಟು, ಬರಗಾಲ ಪರಿಸ್ಥಿತಿಯಲ್ಲಿ ಅವರಿಗೆ ನಾವು ಇಷ್ಟನ್ನು ಕೊಟ್ಟರೆ ೧,೫೦೦-ರೂಪಾಯಿಗಳಷ್ಟು ಬೆಳೆ ಬೆಳೆದ ಹಾಗೆ ಅವರಿಗೆ ಸಹಾಯಕಾರಿಯಾಗುತ್ತದೆ ಇದನ್ನು ಕೊಡುವುದರ ಮೂಲಕ ಅವರು ಕನಿಷ್ಟ ೩ ರಿಂದ ೫ ವರ್ಷಗಳತನಕ ಕಂತಿನಲ್ಲಿ ನಗದು ಅಥವಾ ಧಾನ್ಯ ರೂಪದಲ್ಲಿ ಹಿಂದಿರುಗಿಸಬಹುದಾಗಿದೆ. ಇದಕ್ಕೆ ಯಾವುದೇ ರೀತಿಯ ಬಡ್ಡಿ ಇರುವುದಿಲ್ಲ. ಮಳಿಗೆಗಳಲ್ಲಿ ಕೊಳೆಯುತ್ತಾ ಇರತಕ್ಕಂತಹ ಆಹಾರ ಧಾನ್ಯಗಳನ್ನು ಕನಿಷ್ಟ ೭೫ ರೂ. ಕ್ವಿಂಟಾಲ್‌ಗೆ ಕೊಡದಿರತಕ್ಕಂತಹ ರೀತಿಯಲ್ಲಿ. ಆ ಸ್ಥಿತಿಯಲ್ಲಿ ದಾಸ್ತಾನು ಮಳಿಗೆಯಲ್ಲಿಇಟ್ಟಿದ್ದಾರೆ. ಅಂತಹದನ್ನು ಈ ಯೋಜನೆ ಮಾಡುವುದರ ಮೂಲಕ ಕಡಿಮೆ ಮಾಡಬಹುದು. ಆದುದರಿಂದ ಧಾನ್ಯ ಸಾಲ ಯೋಜನೆಯನ್ನು ಕೂಡ ಈ ವರ್ಷ ಪ್ರಾರಂಭ ಮಾಡುತ್ತೇವೆ.

ಶ್ರೀ ಡಿ. ಜಿ ಬಸವನಗೌಡರು.—ಮಾನ್ಯ ಸಚಿವರು ಉತ್ತರವನ್ನು ಕೊಡುವಾಗ ವಿಜ್ಞಾನಿಗಳು ಮಾತನಾಡಿದರು. ಉದಾಹರಣೆಗೆ, ಹತ್ತಿಯ ಬಗ್ಗೆ ಮಾನ್ಯ ಕಾತರಕಿಯವರು, ರಾಗಿಯ ಬಗ್ಗೆ ಮಾನ್ಯ ಲಕ್ಷ್ಮಣಅಯ್ಯಂಗಾರ್‌ರವರು ಎಂದು. ನಾನು ಸಲಹೆ ಕೊಡುವುದು ಏನೆಂದರೆ ಆ ಮಾನ್ಯರು ಈಗಾಗಲೇ ನಿವೃತ್ತರಾಗಿದ್ದಾರೆ. ನಮ್ಮ ರಾಜ್ಯದಲ್ಲಿ ವಿಜ್ಞಾನಿಗಳು ಸಿಗುವುದೇ ಅಪರೂಪ. ಅವರ ಸೇವೆಯನ್ನು ಅಜೀವ ಪರ್ಯಂತ ಪಡೆದುಕೊಳ್ಳುವುದು ಉತ್ತಮ. ವಿಶ್ವವಿದ್ಯಾಲಯದವರೇ ಆಗಲಿ, ಸರಕಾರದವರೇ ಆಗಲಿ, ಸದ್ಯಕ್ಕೆ ಮಾನ್ಯ ಕಾತರಿಕಿ ಮತ್ತು ಮಾನ್ಯ ಲಕ್ಷ್ಮಣಅಯ್ಯಂಗಾರ್‌ರವರ ಸೇವೆಯನ್ನು ವಾಪಸ್ಸು ಪಡೆದುಕೊಳ್ಳಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಹಾಗೆಯೆ ನಮ್ಮ ಮಾನ್ಯ ಮುಖ್ಯಮಂತ್ರಿಯವರು ರಾಜ್ಯದಲ್ಲಿ ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್‌ನ್ನು ಅಸ್ತಿತ್ವಕ್ಕೆ ತಂದಿದ್ದಾರೆ. ಹಾಗೆಯೇ ಅನೇಕ ಭೂ ಸುಧಾರಣಾ ಯೋಜನೆಯ ಕೆಲಸಗಳು ಏನಿವೆ ಅದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಹಿರೇಹಳ್ಳ ಜಲಾಶಯದ ಯೋಜನೆ ಏನಿದೆ ಅದಕ್ಕೆ ೧೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದಾರೆ. ಇದಕ್ಕೆ ನನ್ನ ಸಲಹೆ ಇಷ್ಟೆ, ಇದನ್ನು ಕೃಷಿ ಇಲಾಖೆಯ ಅಧಿಕಾರಿಗಳು ಮಾಡತ್ತಾ ಇದ್ದಾರೆ. ಅದರ ಮೇಲ್ವಿಚಾರಣೆಗಾಗಿ ವಿಜಿಲೆನ್ಸ್ ಸ್ಕ್ವಾಡ್ ಮಾಡುತ್ತಾ ಇದ್ದೇವೆ ಎಂದು ಹೇಳಿದ್ದೀರಿ. ಇದರ ಬಗ್ಗೆ ಎಂಜಿನೀಯರಿಂಗ್ ವಿಭಾಗದವರು ಪಿ.ಡಬ್ಲ್ಯೂ.ಡಿ. ಇಲಾಖೆಯವರ

ನೆರವನ್ನು ಪಡೆದು ಒಂದು ಚೆಕಿಂಗ್ ವ್ಯವಸ್ಥೆಯನ್ನು ಮತ್ತು ಸೂಪರ್‌ವೈಸಿಂಗ್ ವ್ಯವಸ್ಥೆಯನ್ನು ಸುವ್ಯವಸ್ಥಿತ ರೀತಿಯಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ನಮ್ಮ ಇಲಾಖೆಯಲ್ಲಿ ತಗಲತಕ್ಕಂತಹ ವೆಚ್ಚಕ್ಕೂ ಲೋಕೋಪಯೋಗಿ ಇಲಾಖೆಯಲ್ಲಿ ಯೋಜನೆಗಳಿಗೆ ತಗಲತಕ್ಕಂಥ ವೆಚ್ಚಕ್ಕೂ ವ್ಯತ್ಯಾಸ ಇದೆ. ಅಂದರೆ ಭೂ ಸುಧಾರಣೆ ವೆಚ್ಚ ಮತ್ತು ಲೋಕೋಪಯೋಗಿ ಯೋಜನೆಯ ವೆಚ್ಚ ಇವುಗಳಲ್ಲಿ ಅಂತರ ಇದೆ. ಸುಮಾರು ಇವರ ನಿರ್ಧಾರ ಮಾಡತಕ್ಕಂತಹ ಮೊತ್ತದ ಮೂರನೆ ಒಂದು ಅಂಶದಲ್ಲಿಯೆ ನಾವು ಇಂತಹ ಒಂದು ಗಲಿಪ್ಲಗಿಂಗ್ ಮತ್ತು ನಾಲಬಂದ್ ಮಾಡತಕ್ಕಂತಹ ಕಾರ್ಯಕ್ರಮ ಇರುವುದರಿಂದ, ನಮ್ಮಲ್ಲಿರತಕ್ಕಂತಹ ದಕ್ಷರಾದಂತಹ ಅಧಿಕಾರಿಗಳ ಮೂಲಕ ಒಂದು ಜಾಗ್ರತ ಮಂಡಳಿಯನ್ನು ಮಾಡಿ, ಇವರು ನಿಯಮಕ್ಕೆ ಅನುಗುಣವಾಗಿ ಮತ್ತು ಸ್ಪೆಸಿಫಿಕೇಶನ್‌ಗೆ ಅನುಸರಿಸ ಅಲ್ಲಿ ಕೆಲಸ ನಿರ್ವಹಣೆ ಮಾಡಿದ್ದಾರೆ. ಹಣ ದುರುಪಯೋಗದ ಬಗ್ಗೆ ಶೀಘ್ರವಾಗಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಆ ರೀತಿಯಲ್ಲಿ ಮಾಡುವುದಕ್ಕೆ ಯೋಚನೆಯನ್ನು ಮಾಡಿದ್ದೀವೆ ಹಾಗೆಯೇ ಮಾನ್ಯ ಕೆ. ಹೆಚ್. ಪಾಟೀಲ್‌ರವರು ಗೋಕಾಕ್‌ನಲ್ಲಿಯು ಆ ಅಧಿಕಾರಿಯ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಹೇಳಿದರು. ಈ ಕುರಿತು ಆಗಲೇ ಉತ್ತರವನ್ನು ಕೊಟ್ಟಿದ್ದೇನೆ. ಅವರನ್ನು ಆ ಕೂಡಲೇ ಅಮಾನತ್ತಿನಲ್ಲಿ ಇಟ್ಟಿದ್ದೇವೆ. ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಇದೇ ರೀತಿಯಲ್ಲಿ ಹತ್ತಾರು ಅಧಿಕಾರಿಗಳ ಮೇಲೆ ಕ್ರಮತೆಗೆದುಕೊಂಡಿದ್ದೇವೆ. ಯಾರ್ಯಾರು ತಪಿತಸ್ಥರು ಇದ್ದಾರೋ ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಮಾತನಾಡುವಾಗ ಶ್ರೀಮಾನ್ ಲಕ್ಷ್ಮಣಯ್ಯ ಹಾಗೂ ಶ್ರೀ ಕಾರ್ತಿಯನ್‌ರವರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆ ಬಗ್ಗೆ ನಾನು ಪರ್ಯಾಲೋಚನೆ ಮಾಡುತ್ತೇನೆ.

೧೦–೩೦ ಎ.ಎಂ

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ಕೃಷಿಕರಿಗೆ ಸಂಬಂಧಪಟ್ಟಂತಹ ಒಂದು ವಿಚಾರದಲ್ಲಿ ನೇರವಾಗಿ ಇಲಾಖೆಯವರು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಾನು ನೇರವಾಗಿ ಮಾನ್ಯ ಕೃಷಿ ಸಚಿವರಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಬೆಳೆ ವಿಮೆ ಪದ್ಧತಿಯನ್ನು ಜಾರಿಗೆ ತಂದಿದ್ದೀರಿ. ಬೆಳೆಗೆ ಯಾರು ಸಾಲವನ್ನು ತೆಗೆದುಕೊಂಡಿರುತ್ತಾರೋ ಅವರ ಬೆಳೆ ಚೆನ್ನಾಗಿ ಆದರೆ ಆಗ ಮಾತ್ರ ತಾವು ತಮಗೆ ಬರಬೇಕಾದಂಥ ಪ್ರೀಮಿಯಂ ಹಣವನ್ನು ಮುರಿದುಕೊಳ್ಳುತ್ತೀರಿ. ಬೆಳೆ ಏನಾದರೂ ನಷ್ಟವಾದಾಗ, ಬೆಳೆ ನಷ್ಟವಾಗಿದೆ ಎಂದು ತಾಲ್ಲೂಕು ಘಟ್ಟದಲ್ಲಿ ಪೂರ್ತಿಯಾಗಿ ಬೆಳೆ ನಷ್ಟವಾಗಿದ್ದರೆ ಮಾತ್ರ ಆಗ ವಿಮೆಯ ಸೌಲಭ್ಯ ಸಿಗುತ್ತದೆ. ಇದರಿಂದ ಈಗ ಇರತಕ್ಕಂಥ ಬೆಳೆ ವಿಮೆ ಪದ್ಧತಿ ನಿರರ್ಥಕ. ಆದ್ದರಿಂದ ತಾವು ಕೊನೆಯ ಪಕ್ಷ ಗ್ರಾಮ ಘಟಕವೆಂದು ಮಾಡಿದರೂ ಸ್ವಲ್ಪ ಮಟ್ಟಿಗೆ ಪ್ರಯೋಜನವಾಗುತ್ತದೆಂದು ನನ್ನ ಭಾವನೆ. ಗ್ರಾಮ ಘಟಕವೆಂದು ಮಾಡಿದರೆ ಆಗ ಅಲ್ಲಿ ತಮ್ಮ ಇಲಾಖೆಯ ಅಧಿಕಾರಿಗಳು ಪರಿಶೀಲನೆ ಮಾಡಿ ವರದಿ ಕೊಡಬಹುದು. ತಾಲ್ಲೂಕು ಘಟಕವೆಂದು ಮಾಡಿದರೆ ಕಷ್ಟವಾಗುತ್ತದೆ. ಆದ್ದರಿಂದ ಗ್ರಾಮ ಘಟಕವೆಂದು ಮಾಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಸ್ವಾಮಿ ನಾನು ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಗ್ರಾಮ ಘಟಕ ಮಾಡುವುದಕ್ಕಿಂತ ವ್ಯಕ್ತಿಯ ಭೂಮಿ ಮೇಲೆ ನಿರ್ಧಾರ ಮಾಡತಕ್ಕಂಥಾದ್ದು ಒಳ್ಳೆಯದು...

ಶ್ರೀ ಕೆ. ಹೆಚ್. ಶ್ರೀನಿವಾಸ್.—ಕ್ರಾಪ್ ಕಟಿಂಗ್ ಮಾಡುವಾಗ ತಾಲ್ಲೂಕು ಘಟಕದಲ್ಲಿ ಸರಿಯಾದ ವ್ಯತ್ಯಾಸ ಗೊತ್ತಾಗುವುದಿಲ್ಲ. ಇದರಿಂದ ತಾವು ಗ್ರಾಮ ಘಟಕಗಳೆಂದು ಮಾಡಿದರೆ ಸ್ವಲ್ಪ ಪ್ರಯೋಜನವಾಗಬಹುದು. ಈಗ ಗ್ರಾಮ ಘಟಕಗಳು ಮಾಡುವುದೇ ಕಷ್ಟವಿರುವಾಗ ಇನ್ನು ವ್ಯಕ್ತಿ ಜಮೀನು ಮೇಲೆ ನಿರ್ಧಾರ ಮಾಡುವುದಕ್ಕೆ ಆಗುವುದಿಲ್ಲವೆಂದೆ ನಾನು ಈ ಪ್ರಶ್ನೆ ಕೇಳಿದೆ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ದೃಷ್ಟಿಯಲ್ಲಿ ಇರುವುದು ಏನೆಂದರೆ ತಾಲ್ಲೂಕು ಮಟ್ಟದಲ್ಲಿಯೇ ಸಾಕಷ್ಟು ಸಿಬ್ಬಂದಿ ಇಲ್ಲದಿರುವಾಗ ಇನ್ನು ಗ್ರಾಮ ಘಟಕಗಳಾಗಿ ವಿಂಗಡಣೆ ಮಾಡಿ ಕಡಿಮೆ ಸಿಬ್ಬಂದಿ ವರ್ಗದಲ್ಲಿ ಈ ರೀತಿ ಕೆಲಸ ಮಾಡಬಹುದು ಆದರೆ ನನ್ನ ಆಸೆ ಏನೆಂದರೆ ವ್ಯಕ್ತಿ ಜಮೀನಿನ ಮೇಲೆ ನಿರ್ಧಾರ ಮಾಡಿದರೆ ಇನ್ನು ಹೆಚ್ಚು

ಅನುಕೂಲ ಆದ್ದರಿಂದ ನಾನು ಈ ಬಗ್ಗೆ ಕೇಂದ್ರ ಸರ್ಕಾರದ ಜೊತೆಯಲ್ಲಿ ಸಮಾಲೋಚನೆ ಮಾಡುತ್ತೇನೆ. ಮತ್ತು ಸಾಧ್ಯವಾದರೆ ಪತ್ರವನ್ನು ಸಹ ಬರೆದು ನೋಡುತ್ತೇನೆ. ಮಾನ್ಯ ಸದಸ್ಯರಾದಂಥ ಶ್ರೀಮಾನ್ ಕೆ. ಎಚ್. ಶ್ರೀನಿವಾಸ್‌ರವರ ಸಲಹೆ ಬಹಳ ಉತ್ತಮವಾಗಿದೆ. ಅದನ್ನು ಸಹ ಕೇಂದ್ರ ಸರ್ಕಾರದ ಜೊತೆ ಸಮಾಲೋಚನೆ ಮಾಡಿ ನಿರ್ಧಾರ ಮಾಡೋಣ.

ಶ್ರೀ ಎಂ. ಮಲ್ಲಪ್ಪ:---ಮಾನ್ಯ ಕೃಷಿ ಸಚಿವರು ರಾಜ್ಯದಲ್ಲಿರತಕ್ಕಂಥ ಎಲ್ಲಾ ಕೃಷಿ ಶಾಲೆಗಳನ್ನು ತಾಂತ್ರಿಕ ಶಾಲೆಗಳನ್ನಾಗಿ ಮಾಡುತ್ತೇವೆಂದು ಹೇಳಿದರು. ಆದರೆ ನಮ್ಮ ಧಾರವಾಡ ಜಿಲ್ಲೆಯ ಕಡಚ ಕೃಷಿ ಶಾಲೆ ಇದೆ. ಇಲ್ಲಿ ಕೃಷಿ ವಿಶ್ವವಿದ್ಯಾನಿಲಯವನ್ನು ಮಾಡುವುದಕ್ಕೆ ತಮಗೆ ಎಲ್ಲಾ ಸೌಲಭ್ಯಗಳು ಇರುವುದರಿಂದ ಈ ಕೃಷಿ ಶಾಲೆಯನ್ನು ಕೃಷಿ ವಿಶ್ವವಿದ್ಯಾನಿಲಯವನ್ನಾಗಿ ಪರಿವರ್ತನೆ ಮಾಡುತ್ತೀರಾ ? ಇದರಿಂದ ಬಳ್ಳಾರಿ, ಶಿವಮೊಗ್ಗ ಹಾಗೂ ಚಿತ್ರದುರ್ಗದಿಂದ ಬರತಕ್ಕ ರೈತ ಮಕ್ಕಳಿಗೆ ತರಬೇತಿ ಕೊಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ ಕೃಷಿ ಶಾಲೆಯನ್ನು ಕೃಷಿ ವಿಶ್ವವಿದ್ಯಾನಿಲಯವನ್ನಾಗಿ ಪರಿವರ್ತನೆ ಮಾಡುವುದು ಸಾಧ್ಯವಿಲ್ಲದ ಮಾತು. ಆದರೆ ಕೃಷಿ ಶಾಲೆಗಳನ್ನು ತಾಂತ್ರಿಕ ಶಾಲೆಗಳನ್ನಾಗಿ ಮಾಡಬೇಕೆನ್ನುವ ಸಲಹೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದೆ. ಅವರು ಒಪ್ಪಿ ಕಳುಹಿಸಿದ ತಕ್ಷಣ ತಾಂತ್ರಿಕ ಶಾಲೆಗಳನ್ನಾಗಿ ಪರಿವರ್ತನೆ ಮಾಡುತ್ತೇವೆ.

ಶ್ರೀ ಎಂ. ವೀರಯ್ಯ ಸ್ವಾಮಿ.—ಮಾನ್ಯ ಮಂತ್ರಿಗಳು ನಾನು ಪ್ರಸ್ತಾಪ ಮಾಡಿದಂಥ ಯಾವುದೇ ವಿಷಯಗಳಿಗೆ ಉತ್ತರ ಕೊಡಲಿಲ್ಲ. ಇವತ್ತಿನ ದಿವಸ ಗ್ರಾಮ ಸಹಾಯಕರೆಂದು ವ್ಯವಸಾಯ ಇಲಾಖೆಯಲ್ಲಿ ಇದ್ದಾರೆ. ಅವರ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಆದ್ದರಿಂದ ಅವರಿಗೆ ತರಬೇತಿ ಕೊಡುವಂತಹ ಕೆಲಸ ಮಾಡಬೇಕು. ಇನ್ನು ಕೃಷಿ ಕಾಲೇಜುಗಳಲ್ಲಿ ನಮ್ಮ ರೈತಾಪಿ ವರ್ಗದ ಮಕ್ಕಳು ಸೇರಲು ಹೋದಾಗ ಅವರಿಗೆ ಅಲ್ಲಿ ಅವಕಾಶ ಸಿಗುವುದಿಲ್ಲ. ಕಾರಣವೇನೆಂದರೆ ಪಟ್ಟಣಗಳಲ್ಲಿ ವ್ಯಾಸಂಗ ಮಾಡಿದಂತಹ ಮಕ್ಕಳು ರ್‍ಯಾಂಕ್ ಬಂದಿರುತ್ತಾರೆ. ನಮ್ಮ ಹಳ್ಳಿಯ ಮಕ್ಕಳು ವ್ಯಾಸಂಗ ಮಾಡುವುದಕ್ಕೆ ಬಹಳ ಕಷ್ಟಪಡುತ್ತಾರೆ ಇದರಿಂದ ಹಳ್ಳಿಗಾಡು ಮಕ್ಕಳಿಗೆ ಇಂತಿಷ್ಟು ಸೀಟುಗಳನ್ನು ಕಾದಿರಿಸಬೇಕು. ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಎಂ. ಪಿ. ಪ್ರಕಾಶ್.---ಈಗ ಕೃಷಿ ಶಾಲೆಗಳಲ್ಲಿ ಸ್ವಯಂ ಉದ್ಯೋಗವನ್ನು ಮಾಡಿಕೊಳ್ಳುವ ಸಲುವಾಗಿ ಸುಮಾರು ೨೧ ಕೃಷಿ ಶಾಲೆಗಳಲ್ಲಿ ನಾವು ತರಬೇತಿಯನ್ನು ಕೊಡುತ್ತಿದ್ದೇವೆ. ಈ ತರಬೇತಿ ಕಾಲದಲ್ಲಿ ೧೦ ತಿಂಗಳ ಕಾಲ ಸುಮಾರು ೧೫೦ ರೂಪಾಯಿಗಳ ಸ್ಟೈಪಂಡ್ ಸಹ ಕೊಡುತ್ತೇವೆ. ಒಂದು ಶಾಲೆಯಲ್ಲಿ ಸುಮಾರು ೫೦ ವಿದ್ಯಾರ್ಥಿಗಳಿಗೆ ತರಬೇತಿಯನ್ನು ಕೊಡುತ್ತೇವೆ. ಇನ್ನು ಡೈರೆಕ್ಟ್ ಆಗಿ ನೇಮಕಗೊಂಡಂತಹ ಗ್ರಾಮ ಸಹಾಯಕರಿಗೆ ಸುಮಾರು ಒಂದು ವರ್ಷ ಕಾಲ ಇಲಾಖೆಯ ಸೇವೆಯಲ್ಲಿದ್ದಾಗಲೇ ತರಬೇತಿಯನ್ನು ಕೊಡುತ್ತೇವೆ. ಇನ್ನು ಪ್ರತಿ ತಿಂಗಳು ೧೫ ದಿವಸಗಳ ಕಾಲ ಅವರು ಬೇರೆ ಬೇರೆ ವಿಜ್ಞಾನಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ವಿಚಾರಗಳನ್ನು ತಿಳಿದುಕೊಳ್ಳುತ್ತಾರೆ. ಇನ್ನು ಎರಡನೆಯದಾಗಿ ಮಾನ್ಯ ಸದಸ್ಯರಾದಂಥ ಶ್ರೀ ವೀರಯ್ಯನವರು ಹೇಳಿದ ಹಾಗೆ ಹಿಂದುಳಿದ ವರ್ಗದ ಜನರ ಮಕ್ಕಳು ಹಾಗೂ ಗ್ರಾಮಾಂತರ ಪ್ರದೇಶಗಳಿಂದ ಬಂದಂಥ ಮಕ್ಕಳು ಹೆಚ್ಚು ಅಂಕಗಳನ್ನು ಪಡೆಯುವುದಕ್ಕೆ ಆಗುವುದಿಲ್ಲ, ಆದ್ದರಿಂದ ಬೀದರ್ ಹಾಗೂ ಹೈದ್ರಾಬಾದ್ ಕರ್ನಾಟಕ ಭಾಗದಿಂದ ಬಂದಂಥ ವಿದ್ಯಾರ್ಥಿಗಳಿಗೆ ಸರಿಯಾದ ಪ್ರಾತಿನಿಧ್ಯ ನೀಡುವ ಸಲುವಾಗಿ ನಾವು ಗ್ರಾಮಾಂತರ ಪ್ರದೇಶಗಳಿಂದ ಬಂದಂಥ ಮಕ್ಕಳಿಗೆ ೧೦ ಮಾರ್ಕ್ಸ್ ಹೆಚ್ಚು ಕೊಡುವುದು ಮತ್ತು ಶೇಕಡ ೧೫ ಪರ್ಸೆಂಟ್ ಸೀಟುಗಳನ್ನು ಮೀಸಲಾಗಿಡುವ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ. ಈಗ ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾನಿಲಯವಾದಾಗ ಅಲ್ಲಿನ ೮ ಜಿಲ್ಲೆಗಳಿಗೂ ಸೀಮಿತವಾದ ಅನುಕೂಲ ಮಾಡಿಕೊಡುವ ನಿರ್ಧಾರವನ್ನು ತೆಗೆದುಕೊಳ್ಳಬಹುದು.

ಶ್ರೀ ಮಹಮದ್ ಮೊಯಿನುದ್ದೀನ್.---ಮಾನ್ಯ ಅಧ್ಯಕ್ಷರೇ ಮಾನ್ಯ ಕೃಷಿ ಸಚಿವರು ಪಾಮೋಲೀನ್ ಡೆವಲಪ್‌ಮೆಂಟ್ ಬಗ್ಗೆ ತಿಳಿಸಲಿಲ್ಲ, ಶುಗರ್ ಡೆವಲಪ್‌ಮೆಂಟ್ ಫಂಡ್ ಬಗ್ಗೆ ತಿಳಿಸಲಿಲ್ಲ, ಮತ್ತು ಎನ್.ಎ.ಇ.ಪಿ. ಇವ್ಯಾಲ್ಯುಯೇಷನ್ ಬಗ್ಗೆ ನಾನು ಕೇಳಿದ್ದೆ, ಅದಕ್ಕೆ ಅವರು ಉತ್ತರ ಹೇಳಲಿಲ್ಲ. ಮತ್ತೆ ೧೯೮೪ನೇ ಇಸವಿಯಲ್ಲಿ ಟ್ರ್ಯಾಕ್ಟರ್ ವಿಚಾರದಲ್ಲಿ ಎ. ಜಿ. ಯಿಂದ ಒಂದು ವರದಿ

ಸರ್ಕಾರಕ್ಕೆ ಬಂದಿದೆ. ಆ ಬಗ್ಗೆ ಏನು ಕ್ರಮ ಕೈಗೊಂಡಿದ್ದಾರೆ ? ಈ ಎಲ್ಲಾ ವಿವರಗಳನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ ಪಾಮೋಲೀನ್ ಡೆವಲಪ್‌ಮೆಂಟ್ ಬಗೆ ನಿನ್ನೆಯ ದಿವಸ ತೋಟಗಾರಿಕಾ ಇಲಾಖೆಯ ಮಂತ್ರಿಗಳು ತಿಳಿಸಿದ್ದಾರೆ. ಈ ಪಾಮೋಲೀನ್ ಡೆವೆಲಪ್‌ಮೆಂಟ್ ಅನ್ನು ಅಂಡಮಾನ್ ಮತ್ತು ನಿಕೋಬಾರ್‌ಗಳಲ್ಲಿ ಯಾವ ರೀತಿಯಲ್ಲಿ ತಯಾರು ಮಾಡುತ್ತಿದ್ದಾರೋ ಅದೇ ರೀತಿಯಲ್ಲಿ ಪ್ರಾಯೋಗಿಕವಾಗಿ ನಮ್ಮಲ್ಲಿ ಕೂಡ ತರಲು ಪ್ರಯತ್ನ ಮಾಡುತ್ತಿದ್ದೇವೆ. ಇನ್ನು ಶುಗರ್ ಡೆವೆಲಪ್‌ಮೆಂಟ್‌ಗೆ ಕೇಂದ್ರ ಸರ್ಕಾರದಿಂದ ಸುಮಾರು ೨೫೦ ಕೋಟಿ ರೂಪಾಯಿಗಳು ಬಂದಿದೆ ಇದನ್ನು ತಾವು ಉಪಯೋಗಿಸಿಕೊಳ್ಳುವುದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ ಎಂದು ಮಾನ್ಯ ಸದಸ್ಯರು ಕೇಳಿದರು. ದಿನಾಂಕ ೧೨-೩-೮೭ಕ್ಕೆ ಡೈರೆಕ್ಟರ್ ಆಫ್ ಶುಗರ್ ರವರ ಬಳಿಗೆ ಕೋ ಅಪರೇಟಿವ್ ಸಕ್ಕರೆ ಕಾರ್ಖಾನೆಯಿಂದ ೧೮ ಅರ್ಜಿಗಳು, ಸಾರ್ವಜನಿಕರಿಂದ ಎರಡು ಅರ್ಜಿಗಳು, ಒಟ್ಟು ೨೦ ಅರ್ಜಿಗಳು ಬಂದಿವೆ. ಇವುಗಳನ್ನು ನಾವು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟು ಆ ೨೫೦ ಕೋಟಿ ರೂಪಾಯಿಗಳನ್ನು ಉಪಯೋಗಿಸಿಕೊಳ್ಳತಕ್ಕಂಥ ಪ್ರಯತ್ನ ಮಾಡೋಣ. ಇನ್ನು ಇವ್ಯಾಲ್ಯುಯೇಷನ್ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಈ ಇವ್ಯಾಲ್ಯುಯೇಷನ್ ಮಾಡತಕ್ಕಂಥ ಸಂದರ್ಭ ಏನಿದೆ ಇದು ನಮಗೆ ಬರತಕ್ಕಂಥ ವರದಿಗಳಲ್ಲಿಯೇ ಇವ್ಯಾಲ್ಯುಯೇಷನ್ ಆಗಿ ಬರುತ್ತದೆ. ಇನ್ನು ಎನ್.ಎ.ಇ.ಪಿ. ಪ್ರಾಜೆಕ್ಟ್ ಬಗ್ಗೆ ಹೇಳುವುದಾದರೆ ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಇವ್ಯಾಲ್ಯುಯೇಷನ್ ಮಾಡಿ ಜಾರಿಗೆ ತರುತ್ತೇವೆ. ಇನ್ನು ನಮಗೆ ಸುಮಾರು ೧೯ ರಿಪೋರ್ಟ್‌ಗಳು ಬಂದಿವೆ. ಆ ವರದಿಗಳ ಆಧಾರದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಬುಲ್ಡೋಜರ್ ಇವೆ, ಅವು ಭೂಮಿಮೇಲೆ ಓಡಾಡುವುದಿಲ್ಲ, ರಿಗ್ಸ್ ಸರಿಯಾಗಿ ಕೆಲಸ ಮಾಡಂತಿಲ್ಲ. ಬ್ಲಾಸ್ಟಿಂಗ್ ಯೂನಿಟ್ಸ್ ಸರಿಪಡಿಸಿ, ನಮ್ಮ ರೈತರಿಗೆ ಅನುಕೂಲ ಮಾಡಿಕೊಡಬೇಕು. ಯಂತ್ರಗಳ ಅವಶ್ಯಕತೆ ಇದ್ದರೆ, ಹೊಸದಾಗಿ ಕೊಂಡುಕೊಂಡು ರೈತರಿಗೆ ಅನುಕೂಲ ಮಾಡಬೇಕು, ಆಮೇಲೆ ತಮ್ಮದೇ ಆದ ರಿಪೋರ್ಟ್ ಇದೆ. ಬಂಗಾರಪ್ಪ ರಿಪೋರ್ಟ್, ಶಂಕರಿಕೊಪ್ಪ ರಿಪೋರ್ಟ್ ಇದೆ. ಇವುಗಳನ್ನು ಆದಷ್ಟು ಬೇಗ ಕ್ಯಾಬಿನೆಟ್ ಮುಂದೆ ಇಟ್ಟು ತೀರ್ಮಾನ ತೆಗೆದುಕೊಳ್ಳಬೇಕು. ರೈತರ ಬೆಳೆಗೆ ನ್ಯಾಯವಾದ ಬೆಲೆ ಕೊಡಬೇಕು. ಇನ್‌ಷೂರೆನ್ಸ್ ಯೋಜನೆಯನ್ನು ಇನ್‌ಡಿವಿಜುಯಲ್ ಆಗಿ ಜಾರಿಗೆ ತರಬೇಕು ಆಮೇಲೆ ನಮ್ಮ ಜಿಲ್ಲೆಯ ಲಕ್ಷ್ಮಯ್ಯ ಎಂಬುವರು ಇಂಡಾಫ್ ಬಗ್ಗೆ ಒಳ್ಳೆಯ ತಳಿ ಕೊಟ್ಟಿದ್ದಾರೆ. ಅವರಿಗೆ ಏನಾದರೂ ಬಹುಮಾನ ಕೊಡಿ.

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವೆಂಕಟರಾಮಯ್ಯನವರು ಹೇಳಿದಂತೆ ಬುಲ್ಡೋಜರ್‌ಗಳು ಹಿಂದೆ ಏನಾದರೂ ಆ ರೀತಿ ಇದ್ದವೇನೋ ಗೊತ್ತಿಲ್ಲ. ಈಗ ಅವು ಚೆನ್ನಾಗಿ ಕೆಲಸ ಮಾಡುತ್ತಿವೆ. ಇದರಿಂದ ಕೃಷಿ ಕೈಗಾರಿಕೆಗೆ ಹೆಚ್ಚು ಲಾಭ ಕೂಡ ಆಗಿದೆ. ನಾನು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಹೇಳಿದೆ, ಆಗ ಮಾನ್ಯ ವೆಂಕಟರಾಮಯ್ಯನವರು ಇರಲಿಲ್ಲ, ಬೆಳೆ ವಿಮೆ ಬಗ್ಗೆ ಕೇಂದ್ರಸರ್ಕಾರದವರು ಮಾಡಿರತಕ್ಕ ನೀತಿಗನುಗುಣವಾಗಿ ನಾವು ಮಾಡಬೇಕಾಗಿರುವುದರಿಂದ ಇದರ ಬಗ್ಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಇನ್ನು ಬೆಲೆ ಕೊಡತಕ್ಕ ವಿಚಾರದಲ್ಲಿ ನನ್ನ ಪ್ರಾರಂಭಿಕ ಭಾಷಣದ ಮೊದಲನೇ ಹಂತದಲ್ಲಿಯೇ ಹೇಳಿದ್ದೇನೆ.

ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಹಾಗೂ ಕ್ರೀಡಾ ರಾಜ್ಯ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ. ಸುಮಾರು ೬ ಚಿಕ್ಕ ಇಲಾಖೆಗಳ ಜವಾಬ್ದಾರಿ ಹೊತ್ತಿರುವ ನಾನು ಇಲಾಖೆಗಳ ಸಾಧಕ ಬಾಧಕಗಳ ಬಗ್ಗೆ ಹೇಳುವುದಾದರೆ ಬಹಳಷ್ಟು ಹೊತ್ತು ಮಾತನಾಡಬೇಕಾಗುತ್ತದೆ. ಆದ್ದರಿಂದ ಅಷ್ಟು ವಿವರವಾಗಿ ಹೇಳದೇ ನಿನ್ನೆ ಸಭೆಯಲ್ಲಿ ನಡೆದ ಕೆಲವಾರು ಟೀಕೆಗಳ ಬಗ್ಗೆ ಹಲವಾರು ಸಲಹೆಗಳ ಮಾತ್ರ ಉತ್ತರ ಕೊಡಲು ಬಯಸುತ್ತೇನೆ. ಮಾನ್ಯ ಮಿತ್ರರಾದ ಉಮರಬ್ಬನವರು ನನ್ನ ಸಹಪಾಠಿ, ಜೊತೆಗಾರರು ನಮ್ಮದು ಹಳೆಯ ಮಿತ್ರತ್ವ. ಈಗ ಅವರ ದೇಹ ಮಾತ್ರ ಅಲ್ಲಿದೆ, ಆತ್ಮ ಇಲ್ಲಿದೆ ಎಂದು ನನಗನಿಸುತ್ತದೆ ಅವರು ಮಾತನಾಡುವಾಗ "ನಿಂತ ನೀರ ಕದಡಬೇಡಿ ಕಲ್ಲುಗಳೇ" ಎಂಬ ಒಂದು ಕವನ ನನಗೆ ಜ್ಞಾಪಕ

ಬಂತು. ಹಾಗೆಯೇ ಮಾನ್ಯ ಲಕ್ಷ್ಮೀಸಾಗರ್ ಅವರು ಹೇಳಿದಂಥ ಒಂದು ದಾಸರ ಪದವೂ ಜ್ಞಾಪಕಕ್ಕೆ ಬಂತು. ''ನಿಂದಕರಿರಬೇಕು, ಹೇಗೆಂದರೆ, ಹಂದಿ ಇದ್ದರೆ ಕೇರಿ ಹಂಗೆ ಸ್ವಚ್ಛವೋ ಹಂಗೆ ನಿಂದಕರಿರಬೇಕು'' ಎಂಬ ಮಾತನ್ನು ಹೇಳುತ್ತಾ, ನಿನ್ನೆ ಷೇಕ್ಸ್‌ಪಿಯರ್ ಬಗ್ಗೆ ಮಾನ್ಯ ಉಮರಬ್ಬನವರು ವ್ಯಾಖ್ಯಾನ ಮಾಡಿದರು. ಕನ್ನಡದ ಬಗ್ಗೆ ಅತ್ಯಂತ ಹೆಚ್ಚಿನ ಅಭಿಮಾನ ಇರತಕ್ಕಂಥ ಉಮರಬ್ಬನವರು ಎಂ. ವಿ. ಕಾಮತ್‌ರವರ ''ಚೆಲುವು ಕನ್ನಡ ನಾಡು'' ಪುಸ್ತಕದಲ್ಲಿರುವ ಷೇಕ್ಸ್‌ಪಿಯರ್ ಕವಿಯ ಎರಡು ವಾಕ್ಯಗಳನ್ನು ಕಟುವಾಗಿ ಟೀಕೆ ಮಾಡಿದ್ದು ಮತ್ತು ಷೇಕ್ಸ್‌ಪಿಯರ್ ಅವರನ್ನೇ ಉದಾಹರಿಸಿದ್ದು ಎಂಥ ವಿಪರ್ಯಾಸ.

ಶ್ರೀ ಬಿ. ಎ. ಉಮರಬ್ಬ.—ಮುಳ್ಳನ್ನು ಮುಳ್ಳಿನಿಂದಲೇ ತೆಗೆದು ತೋರಿಸಿದೆ.

ಶ್ರೀ ಜೀವರಾಜ ಆಳ್ವ.—ಎಂ. ವಿ. ಕಾಮತ್‌ರವರು, ಚೆಲುವ ಕನ್ನಡ ನಾಡು ಪುಸ್ತಕದಲ್ಲಿ ಏನೇನು ಹೇಳಿದ್ದಾರೆ, ರಾಷ್ಟ್ರಕವಿ ಕುವೆಂಪು ಅವರು ಇಂಗ್ಲಿಷ್ ಕವನಗಳಿಂದ ಸ್ಫೂರ್ತಿಯನ್ನು ಪಡೆದುಕೊಂಡರು ಎಂಬುದಾಗಿ ಹೇಳಿದ್ದಾರೆ, ಈ ವಿಚಾರವನ್ನು ಅವರ ಆತ್ಮೀಯ ಮಿತ್ರರಾದ ದೇ. ಜ. ಗೌಡರು ತಮ್ಮ ಈ ಒಂದು ಗ್ರಂಥದಲ್ಲಿ ೩೮ ರಿಂದ ೫೬ನೇ ಪುಟದವರೆಗೆ ಬರೆದಿದ್ದಾರೆ. ಸಾಹಿತ್ಯದ ಸಂಪೂರ್ಣ ಉತ್ಪತ್ತಿ ಅವರಿಗೆ ಲಭ್ಯವಾದುದು ಆಂಗ್ಲಭಾಷೆಯ ಮೂಲಕ ಎಂಬುದು ನೂರಕ್ಕೆ ನೂರು ಸತ್ಯ ಎಂಬುದನ್ನು ಅವರ ಅತ್ಯಂತ ಹತ್ತಿರದ ಶಿಷ್ಯರೂ ಮತ್ತು ಮಿತ್ರರೂ ಆದ ದೇ. ಜ. ಗೌಡರು ಬರೆದು ತೋರಿಸಿದ್ದಾರೆ. ಇದು ಹಿಂದೆಯೇ ಕಾಂಗ್ರೆಸ್ ಸರ್ಕಾರ ಇದ್ದ ಸಮಯದಲ್ಲಿ ಆದಂಥ ಒಂದು ಗ್ರಂಥ. ಈಗ ನಾವು ೨೦೦ ರೂಪಾಯಿಗೆ ಇದನ್ನು ಮಾರಿದ್ದೇವೆ. ಇದು ೧೦ ವರ್ಷದ ಹಿಂದೆ ೧೫೦ ರೂಪಾಯಿಗೆ ಬಿಕರಿಯಾದ ಗ್ರಂಥ. ಇದರ ಬಗ್ಗೆ, ಇದು ಜನತಾ ಸರ್ಕಾರದ ಮುಖವಾಣಿ ಎನ್ನುವ ಮಾತನ್ನು ಹೇಳಿದರು. We do not belong to a regimented Society We cannot dictate terms, "What to write and What not to write" ಈ ಗ್ರಂಥವನ್ನು ಬರೆಯಲು ಅವರಿಗೆ ಮುಕ್ತ ವಾತಾವರಣವನ್ನು ನಿರ್ಮಾಣ ಮಾಡಿದ್ದೇವೆ. ಸಾಹಿತಿಗಳಿಗೆ, ಕಥೆಗಾರರಿಗೆ, ಬರಹಗಾರರಿಗೆ ಪ್ರೋತ್ಸಾಹ ಕೊಟ್ಟಿದ್ದೇವೆ.

ಮೊನ್ನೆ ಮಾನ್ಯ ಬಸವಲಿಂಗಪ್ಪನವರು ಬೂಸ ಸಾಹಿತ್ಯ ಎಂದು ಮಾತನಾಡಿದರು. ಅವರು ಹಿರಿಯರು ಎಂದು ನಾನು ಉತ್ತರ ಕೊಡುವುದಕ್ಕೆ ಹೋಗಲಿಲ್ಲ. ಅಲ್ಲದೆ ಅವರು. ಬೆಸ್ತರ ವಿಷಯ. ಶ್ರೀಗಂಧದ ವಿಷಯ, ಕನ್ನಡ ಚಿತ್ರರಂಗದ ಬಗ್ಗೆ, ಹೀಗೆ ಹಲವಾರು ವಿಚಾರಗಳ ಬಗ್ಗೆ ಮಾತನಾಡಿದರು. ಇದರಲ್ಲಿ ಡಾ॥ ರಾಜ್‌ಕುಮಾರ್ ಅವರ ಬಗ್ಗೆಯೂ ವಿಶ್ಲೇಷಣೆ ಇದೆ. ಅವರು ಪ್ರಪ್ರಥಮವಾಗಿ ಬೇಡರ ಕಣ್ಣಪ್ಪ ಚಿತ್ರದಲ್ಲಿ ಪಾತ್ರ ವಹಿಸಿದ್ದಾರೆ ಎಂಬ ಉಲ್ಲೇಖವೂ ಇದೆ. ಇದು ಒಂದು ಚಿಕ್ಕ ಪುಸ್ತಕ ಇದು ಒಂದು ಐತಿಹಾಸಿಕ ದಾಖಲೆ ಏನೂ ಅಲ್ಲ. ಇದೊಂದು ಚರಿತ್ರಾರ್ಹವಾದ ದಾಖಲೆ ಏನೂ ಅಲ್ಲ. ಕರ್ನಾಟಕದ ಬಗ್ಗೆ ಗೆಜೆಟಿಯರ್ ಇದೆ, ರಾಜ್ಯದ ಮಟ್ಟಿಗೆ ಹೆಚ್ಚು ವಿಚಾರಗಳು ಇವೆ...

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಏನೇನು ಹೇಳಿದರು, ಅದಕ್ಕೆ ಸ್ಪಷ್ಟೀಕರಣ ಕೊಡುವುದಕ್ಕೆ ನನಗೆ ಅವಕಾಶ ಕೊಡಬೇಕು...

ಅಧ್ಯಕ್ಷರು.—ಆಮೇಲೆ ತಮಗೆ ಅವಕಾಶ ಕೊಡುತ್ತೇನೆ.

ಡಾ॥ ಜೀವರಾಜ ಆಳ್ವ.—ಸ್ವಾಮಿ, ಹಿರಿಯ ಸಾಹಿತಿಗಳಾದ ಡಾ॥ ಹಾ. ಮಾ. ನಾಯಕ್ ಅವರ ಬಗ್ಗೆ ಟೀಕೆ ಮಾಡಿದ್ದಾರೆಂದು ಹೇಳಿದರು. ಶ್ರೇಷ್ಠ ಪತ್ರಕರ್ತ ಸಂತೋಷ್ ಕುಮಾರ್ ಗುಲ್ವಾಡಿ ಅವರು ಹೇಳುತ್ತಾರೆ, ಕನ್ನಡಿಗರಲ್ಲಿ ಇರತಕ್ಕ ಅಭಿಮಾನದ ಕಿಚ್ಚನ್ನು ಹೊತ್ತಿಸತಕ್ಕ ಪುಸ್ತಕ ಇದು ಎಂದು ಹೇಳಿರುತ್ತಾರೆ, ಇದು ಒಬ್ಬರಿಗೆ ಹಿಡಿಸಬಹುದು. ಇನ್ನೊಬ್ಬರಿಗೆ ಹಿಡಿಸದೇ ಇರಬಹುದು. ಇದು ೬೦ ಪುಟಗಳ ಒಂದು ಪುಸ್ತಕ. ಇದೇನೂ ಕರ್ನಾಟಕದ ಭವ್ಯ ಇತಿಹಾಸವನ್ನು ಪ್ರತಿಬಿಂಬಿಸುವ ದೊಡ್ಡ ಗ್ರಂಥ ಏನೂ ಇಲ್ಲ. ಒಂದು ಸಾಂಸ್ಕೃತಿಕ ಪರಂಪರೆಯನ್ನು ತೋರಿಸುವಂಥ ಹಾಗೂ ಹಲವಾರು ಒಳ್ಳೆಯ ಚಿತ್ರಗಳನ್ನು ತೋರಿಸುವಂತ ಪ್ರಯತ್ನವನ್ನು ನಾವು ಮಾಡಿದ್ದೇವೆ. ಮಾನ್ಯ ಬಸವಲಿಂಗಪ್ಪನವರು ಬೂಸ ಸಾಹಿತ್ಯ ಎಂದು ಕರೆದಿದ್ದಾರೆ, ಬೂಸಾ ಯಾರ ಕಣ್ಣಿಗೆ ಕಾಣಿಸುತ್ತದೆ,

ಅದು ದನಗಳಿಗೆ ಕಾಣಿಸುತ್ತದೆ. ನಾವು ಇದಕ್ಕೆ ವ್ಯತಿರಿಕ್ತವಾಗಿ ಕಾಣಬೇಕು. ಸಾಹಿತಿಗಳ ಬಗ್ಗೆ, ನಾಟಕಕಾರರ ಬಗ್ಗೆ ಈ ತರಹದ ಲಘು ಮಾತುಗಳು ಸಲ್ಲದೆಂದು ನನಗನಿಸುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.–ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಾತನಾಡುವಾಗ ''ಬೂಸ'' ಅನ್ನತಕ್ಕಂಥಾದ್ದು ದನಗಳ ಕಣ್ಣಿಗೆ ಕಾಣುವಂಥಾದ್ದು ಅಂತ ಹೇಳಿದರು. ನಾನು ಎಂದಿಗೂ ಅದನ್ನು ಇಲ್ಲ ಅಂತ ಹೇಳುವುದಿಲ್ಲ. ಆದರೆ ದನಗಳಿಗೆ ಬೇಕಾಗಿರತಕ್ಕಂಥ ಈ ಬೂಸಾ ಏನು ಇದೆ ಇದನ್ನು ಸಾಹಿತಿಗಳು ಬರೆದಿದ್ದಾರೆ ಅಂದರೆ, ಈ ದನಗಳಿಗೆ ಬೇಕಾಗಿರತಕ್ಕಂಥಾ ಈ ಬೂಸಾವನ್ನು ಆ ಸಾಹಿತ್ಯದಲ್ಲಿ ಕೊಡಬೇಡಿ ಅಂತ ಹೇಳಿದೆ. ಈ ಬೂಸ ಅನ್ನುವುದರಲ್ಲಿ ೩ ತರಹ ಅಭಿಪ್ರಾಯ ಬರುತ್ತದೆ. ಮೊದಲನೆ ಹಂತ ಅಭಿಪ್ರಾಯ, ಎರಡನೇ ಹಂತ ಸಾಹಿತ್ಯ, ಮೂರನೇ ಹಂತ ಭಾಷೆ. ಅಂದರೆ ನಾವು ಮಾತನಾಡುವ ಭಾಷೆ. ಮಂತ್ರಿಗಳು ಇದನ್ನು ಬಹಳ ಚೆನ್ನಾಗಿ ಹೇಳಿದರು. ನನ್ನನ್ನು ಅವರು ಈ ಬಗ್ಗೆ ಲಘುವಾಗಿ ಮಾತನಾಡಬಾರದು ಅಂತ ಹೇಳಿದರು. ನಾನು ಹೇಳುತ್ತೇನೆ, ನಾನು ಈ ಮಾತನ್ನು ಜವಾಬ್ದಾರಿಯಿಂದಲೇ ಹೇಳಿದ್ದೇನೆ. ಏತಕ್ಕೆಂದರೆ ನಾನು ಈ ದೇಶದಲ್ಲಿ ಹುಟ್ಟಿದ್ದೇನೆ. ಬೆಳೆದಿದ್ದೇನೆ, ಬಾಳುತ್ತಾ ಇದ್ದೇನೆ. ನಾನು ಯುವಕನಾಗಿದ್ದಾಗ ಈ ಸಮಾಜ ಬೆಳೆಯಬೇಕು, ಈ ಸಮಾಜಕ್ಕೆ ನ್ಯಾಯ ಸಿಕ್ಕಬೇಕು ಇವರ ಸಾಹಿತ್ಯ ಬೆಳೆಯಬೇಕು ಎಂದು ಆ ಬಗ್ಗೆ ಗಮನಕೊಡುತ್ತಿದ್ದನೇ ವಿನಾ ಈ ಹಿಂದುಳಿದ ವರ್ಗಕ್ಕೆ ಏನೋ ಒಂದು ಸೃಷ್ಟಿ ಮಾಡಿ ಅದರ ಬಗ್ಗೆ ಸಾಹಿತ್ಯ ಬರೆಯುವುದನ್ನು ದೂರ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದ. ಅವರಿಗೆ ಮೋಸ ಮಾಡಬಾರದು ಅಂತ ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಇಂದೂ ಹೇಳುತ್ತೇನೆ, ನಾಳೆಯೂ ಹೇಳುತ್ತೇನೆ. ಈ ಸಮಾಜವನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗದೇ ಇರುವಹಾಗೆ ಪ್ರಯತ್ನ ಮಾಡುತ್ತಿದೆ. ಈ ಸಮಾಜವನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗುವ ಹಾಗೆ ಬರೆಯುವಂಥಾ ಅಭಿಪ್ರಾಯದ ಸಾಹಿತ್ಯಕ್ಕೆ ನಾನು ಧಿಕ್ಕಾರ ಮಾಡಬೇಕಾಗಿದೆ. ಡಾಕ್ಟರ್ ಅವರು ನನಗೆ ಪ್ರಿಯರಾದವರೇ, ಅವರು ನಮ್ಮ ಪಕ್ಕದಲ್ಲಿ ಇದ್ದಂಥಾವರೇ, ಅವರಿಗೆ ನನ್ನನ್ನು ಕಂಡರೆ ಪ್ರೀತಿ ಇಟ್ಟುಕೊಂಡಿದ್ದರು. ಹೀಗಿರುವಾಗ ತಾವು ನನ್ನ ಬಗ್ಗೆ ಮಾತನಾಡುವಾಗ ಅಷ್ಟು ಹಗುರವಾಗಿ ಮಾತನಾಡಬೇಡಿ ಎಂದು ಹೇಳುತ್ತೇನೆ.

ಶ್ರೀ ಜೀವರಾಜ ಆಳ್ವ.—ಮಾನ್ಯ ಬಸವಲಿಂಗಪ್ಪನವರು ಹಿರಿಯ ಸದಸ್ಯರು, ಅವರ ಭಾವನೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಸಾಮಾಜಿಕ ಸಾಹಿತ್ಯದ ಬಗ್ಗೆ ಏನಾದರೂ ಟೀಕೆ ಇದ್ದರೆ, ಸಾಮಾಜಕ್ಕೆ ಕಳಂಕ ತರುವಂಥಾ ಯಾವುದಾದರೂ ವಿಚಾರ ಇದ್ದರೆ ತಾವು ಕಳುಹಿಸಿ ಅದನ್ನು ಒಪ್ಪಿಕೊಳ್ಳುತ್ತೇನೆ. ಹಾಗೆಯೇ ಮೊನ್ನೆ ದಿವಸ ಮಾನ್ಯ ವೀರಪ್ಪ ಮೊಯ್ಲಿ ಅವರು ಹಾ.ಮಾ. ನಾಯಕ್ ಅವರ ಬಗ್ಗೆ ಅವರ ಸಾಹಿತ್ಯದ ಬಗ್ಗೆ ಮಾತನಾಡುವಾಗ ಹೆಚ್ಚು ಮಾತನಾಡುವುದು ಬೇಡ ಎಂದು ಬರೆದು ಕಳುಹಿಸಿದ್ದರು. ಅದನ್ನು ನಾನು ಒಪ್ಪಿಕೊಂಡೆ, ನಾನೂ ಸಹ ಇದರ ಬಗ್ಗೆ ಅಧ್ಯಯನ ಮಾಡಿದ್ದೇನೆ. ಸಾಮಾನ್ಯವಾಗಿ ಹಿರಿಯ ಸಾಹಿತಿಗಳು ಎಲ್ಲರೂ ಒಂದೆಡೆ ಸೇರಿ ಇಂತಹ ಸಾಹಿತ್ಯದ ಬಗ್ಗೆ ಕೇಳುವ ಅವಕಾಶ ಇರುವುದಿಲ್ಲ. ಯಾವುದಾದರೂ ಸಮಾರಂಭಗಳಿಗೆ ಹೋದಾಗ ಅಲ್ಲಿ ಅವಕಾಶ ಸಿಕ್ಕಿದಾಗ ಅರಿತು ನುರಿತಂಥ ಸಾಹಿತಿಗಳು, ಹಿರಿಯರಾದಂಥಾ ಸಾಹಿತಿಗಳು ಇಂಥಾ ಸಾಹಿತ್ಯಗಳ ಬಗ್ಗೆ ಮಾತನಾಡಿದಾಗ ಅವರ ಅಭಿಪ್ರಾಯಗಳನ್ನು ಕೇಳುವುದಕ್ಕೆ ಚೆನ್ನಾಗಿರುತ್ತದೆ ಎಂದು ನನಗೆ ಅನಿಸುತ್ತದೆ.

ಹಾಗೆಯೇ ಮುಂದುವರೆದು ಹೇಳುವುದಾದರೆ ಶ್ರೀಮಾನ್ ಉಮರಬ್ಬರವರನ್ನು ಈ ಸಾಹಿತ್ಯದ ಬಗ್ಗೆ ಟೀಕೆ ಮಾಡಿದ್ದಾರೆ. When Jivaraj Alvaisprovoked probably he comes out with his best ಆ ದೃಷ್ಟಿಯಿಂದ ಟೀಕೆ ಮಾಡಿರಬಹುದು. ಅವರಿಗೆ ನನ್ನ ಭಾವನೆ ಏನು ಅನ್ನುವುದು ಗೊತ್ತು. ಮಾನ್ಯ ಸದಸ್ಯರು ಮಾತನಾಡುವಾಗ ಸಂಗೀತ, ನಾಟಕ ಅಕಾಡೆಮಿ ಮುಂತಾದವಕ್ಕೆ ಪ್ರೋತ್ಸಾಹ ಕೊಟ್ಟಿಲ್ಲ ಅಂತ ಹೇಳಿದರು. ತಮಗೆ ಹೇಳಬೇಕಾದರೆ ಅವರಿಗೆ ನಾವು ೨-೩ ಲಕ್ಷ ರೂಪಾಯಿ ಕೊಟ್ಟಿದ್ದೀರಿ ಎಂದು ಹೇಳಿದರು ಅಲ್ಲದೆ ಮಾನ್ಯ ಮುಖ್ಯಮಂತ್ರಿಗಳ ಆಶೀರ್ವಾದದಿಂದ ನನ್ನ ಇಲಾಖೆಗೆ ಅಂದರೆ ಕನ್ನಡ ಸಂಸ್ಕೃತಿ ಇಲಾಖೆಗೆ ೨೦೦-೩೦೦ ಕೋಟಿ ರೂಪಾಯಿ ಕೊಟ್ಟಿದ್ದಾರೆ.

ಶ್ರೀ ಬಿ. ಎ. ಉಮರಬ್ಬ.—ಇಷ್ಟು ಹಣ ಕೊಟ್ಟಿದ್ದರೂ ತಾವು ಯಾವ ಹೊಸ ಯೋಜನೆಯನ್ನು ತೆಗೆದುಕೊಂಡಿಲ್ಲವಲ್ಲಾ.

ಶ್ರೀ ಜೀವರಾಜ ಆಳ್ವ.—ಅವೆಲ್ಲದರ ಬಗ್ಗೆಯೂ ಹೇಳುತ್ತೇನೆ ಕೇಳಿ. ರಾಜ್ಯದಲ್ಲಿ ಕ್ರೀಡಾಂಗಣ ಕೆಲಸಗಳನ್ನು ಮೊದಲು ಏನು ತೆಗೆದುಕೊಂಡಿದ್ದರು ಅವೆಲ್ಲಾ ಅರ್ಧಮರ್ಧವಾಗಿ ಆ ಕೆಲಸಗಳು ಹಾಗೆಯೇ ಇತ್ತು. ಹೊಸ ಯೋಜನೆಗಳನ್ನು ತೆಗೆದುಕೊಂಡರೆ ಅವುಗಳು ಹಾಗೆಯೇ ಉಳಿಯುತ್ತವೆ ಎಂದು ಹಿಂದೆ ಅರ್ಧಮರ್ಧ ಆಗಿರುವ ಕೆಲಸಗಳನ್ನು ಮೊದಲು ಪೂರೈಸುವುದಕ್ಕೆ ಪ್ರಯತ್ನ ಮಾಡಿದ್ದೇವೆ ಆದುದರಿಂದ ಹೊಸ ಯೋಜನೆಗಳನ್ನು ತೆಗೆದುಕೊಂಡಿಲ್ಲ. ಅನಂತರ ಮಾನ್ಯ ಸದಸ್ಯರು ಏನು ಹೇಳಿದರು ಎಂದರೆ ಈ ಕ್ರೀಡಾಂಗಣ ಮತ್ತು ರಂಗ ಮಂದಿರದ ಬಗ್ಗೆ ಉದ್ದುದ್ದದ ಘೋಷಣೆ ಮಾಡಿದ್ದೀರಿ, ದೊಡ್ಡ ದೊಡ್ಡದಾಗಿ ಪ್ರಚಾರ ಮಾಡಿದ್ದೀರಿ ಆದರೆ ಕೆಲಸಗಳು ಸರಿಯಾಗಿ ನಡೆದಿಲ್ಲ ಅನ್ನುವ ಮಾತನ್ನು ಹೇಳಿದರು. ನಾನು ಇದರ ಬಗ್ಗೆ ಪುನಃ ಪುನಃ ಹೇಳುತ್ತೇನೆ. ಈ ಕ್ರೀಡಾಂಗಣ ಮತ್ತು ರಂಗಮಂದಿರಗಳು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ತೆಗೆದು ಕೊಂಡಿದ್ದು ಅವು ಮುಕ್ತಾಯದ ಹಂತದಲ್ಲಿವೆ. ಆದರೆ ಇನ್ನೊಂದನ್ನು ಮಾತ್ರ ತೆಗೆದುಕೊಳ್ಳುವುದಿಲ್ಲ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ನಾವು ಅಧಿಕಾರಕ್ಕೆ ಬರುವವರೆಗೆ ಯಾವ ಜಿಲ್ಲೆಯಲ್ಲೂ ಯಾವುದೇ ಕ್ರೀಡಾಂಗಣವೂ ಪೂರ್ತಿಯಾಗಿರಲಿಲ್ಲ. ನಾವು ಬಂದಮೇಲೆ ೧೯ ಜಿಲ್ಲಾ ಕೇಂದ್ರಗಳಲ್ಲೂ ಕ್ರೀಡಾಂಗಣ ಮಾಡಬೇಕು ಎಂದು ಮಾಡಿದ್ದೇವೆ. ಅದರಲ್ಲಿ ೧೩ ತಾಲ್ಲೂಕುಗಳಲ್ಲಿ ಈಗಾಗಲೇ ಕ್ರೀಡಾಂಗಣ ಮಾಡಿದ್ದೇವೆ ಹಾಗೆಯೇ ಗುರುನಾನಕ್ ಭವನ ಯವನಿಕಾ ಭವನ ಇವು ೧೭ ವರ್ಷ ದಿಂದಲೂ ಸ್ಥಗಿತವಾಗಿದ್ದವು ಈ ಕೆಲಸಗಳನ್ನು ತೆಗೆದುಕೊಂಡು ಪೂರ್ತಿ ಮಾಡಿದ್ದೇವೆ. ಈಗ ಗುರು ನಾನಕ್ ಭವನದ ಉದ್ಘಾಟನೆಯಾಗಿದೆ. ಅದರಲ್ಲಿ ಸಮಾರಂಭಗಳು ಆಗುತ್ತಾ ಇವೆ. ಒಟ್ಟಿನಲ್ಲಿ ಹೇಳಬೇಕಾದರೆ ಮುಖ್ಯ ಮಂತ್ರಿಗಳ ಆಶೀರ್ವಾದದಿಂದ ಈ ಇಲಾಖೆಗೆ ಹೆಚ್ಚು ಪ್ರೋತ್ಸಾಹ ಸಿಕ್ಕಿದೆ ಅನ್ನುವ ಮಾತನ್ನು ಹೇಳುತ್ತೇನೆ.

ಇನ್ನು ಸ್ಕೌಟ್ಸ್ ಬಗ್ಗೆ ಮತ್ತು ಎನ್. ಸಿ. ಸಿ. ಬಗ್ಗೆ ಹಲವಾರು ಕಾರ್ಯಕ್ರಮಗಳು ಬಾಕಿ ಇವೆ. ಅವನ್ನು ಯಾವರೀತಿ ಮಾಡಬೇಕೋ ಆ ರೀತಿ ಮಾಡುವುದಕ್ಕಾಗುತ್ತಾ ಇಲ್ಲ.

ಇನ್ನು ಶ್ರೀ ಉಮರಬ್ಬನವರು ಗ್ರಾಂಟ್ ಬಗ್ಗೆ ಮಾತನಾಡಿದರು. ಈ ವಿಚಾರದಲ್ಲಿ ಅವರ ಗಮನವನ್ನು ಸೆಳೆಯುತ್ತೇನೆ. Mountaineering Council ಗೆ 68,000 ಕೊಟ್ಟಿದ್ದೇವೆ olympic Association ಗೆ one lakh, ಕೊಟ್ಟಿದ್ದೇವೆ. Body Builders Association 56 000 ಅಟಿಯಾ ಪಾಟಿಯಾಕ್ಕೆ 46,000 and women Hockyಗೆ Rs. 20,000 ಕೊಟ್ಟಿದ್ದೇವೆ. ಇದಲ್ಲದೆ ಇನ್ನೂ ಅನೇಕ ಸಂಘ ಸಂಸ್ಥೆಗಳಿಗೂ ಕೊಟ್ಟಿದ್ದೇವೆ. ಅದನ್ನು ಹೇಳಬೇಕಾದರೆ ಹೊರನಾಡು ಕನ್ನಡಸಂಘಕ್ಕೆ, ಕಾಸರಗೋಡು ಕನ್ನಡ ಸಂಘಕ್ಕೆ ಎಂಥಾದ ಸಂಘ ಸಂಸ್ಥೆಗಳಿಗೂ ಧನಸಹಾಯ ಮಾಡಿದ್ದೇವೆ. ಅವರೇನೂ ನಮ್ಮ ಹತ್ತಿರದ ಕುಟುಂಬದವರಲ್ಲ ಸಂಬಂಧದವರೂ ಇಲ್ಲ ಹೊರನಾಡು ಕನ್ನಡ ಸಂಘಕ್ಕೆ ಪ್ರತಿ ವರ್ಷ ೩೫ ಲಕ್ಷ ರೂಪಾಯಿ ಕೊಟ್ಟಿದ್ದೀರಿ ದೇಶಾದ್ಯಂತ ಇರುವ ಅನೇಕ ಸಂಘ ಸಂಸ್ಥೆಗಳಿಗೆ ಕರ್ನಾಟಕ ರಾಜ್ಯ ಸರ್ಕಾರವು ಧನಸಹಾಯ ಮಾಡಿದೆ. ಕೆಲವು ಸಂಘಸಂಸ್ಥೆಗಳು ತಮ್ಮದೇ ಆದಂಥಾ ರಂಗಮಂದಿರವನ್ನು ಕಟ್ಟಿವೆ. ತಮ್ಮದೇ ಆದಂಥಾ ಸ್ಕೂಲುಗಳು ಇವೆ, ತಮ್ಮದೇ ಆದಂಥ ಕಟ್ಟಡಗಳನ್ನು ಹೊಂದಿವೆ. ನಾವು ಈ ೩ ವರ್ಷದಿಂದ ಇಷ್ಟೊಂದು ಮಹತ್ಸಾಧನೆ ಮಾಡಿದ್ದೇವೆ ಎನ್ನುವುದನ್ನು ನಾನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ.

ಇನ್ನು ಅಕಾಡೆಮಿ ಬಗ್ಗೆ ಹೇಳಿದ್ದಾರೆ. ಇದರ ಬಗೆ ಹೇಳುವುದಾದರೆ ಒಂದು ವರ್ಷದಲ್ಲಿ ಅವರಿಗೆ ೪೭ ಲಕ್ಷ ರೂಪಾಯಿ ಕೊಟ್ಟಿದೆ. ಪ್ರತಿಯೊಂದು ಅಕಾಡೆಮಿಗೂ ಸರಾಸರಿ ೯ ಲಕ್ಷದಂತೆ ಕೊಟ್ಟಿದ್ದೇವೆ. ನಾವು ಕೊಟ್ಟಿದ್ದರಲ್ಲಿ ಅವರು ಪ್ರತಿಯೊಂದು ಸಂಸ್ಥೆಗೂ 1-1½ ಲಕ್ಷ ಕೊಟ್ಟಿದ್ದಾರೆ, ಅಕಾಡೆಮಿ ಅಧ್ಯಕ್ಷರು ಇದನ್ನು ಒಪ್ಪಲಿ ಒಪ್ಪದೇ ಇರಲಿ ಅವರಿಗೆ ನಾವು ಇಷ್ಟು ಹಣ ಕೊಟ್ಟಿದ್ದೇವೆ. ಅಲ್ಲದೆ ಸಾಹಿತ್ಯ ಪರಿಷತ್ತಿಗೆ ೨೦ ಲಕ್ಷ ಕೊಟ್ಟಿದ್ದೇವೆ, ಇದಲ್ಲದೆ ಕೆಲವು ಸಾಹಿತಿಗಳಿಗೆ ಮಾಸಾಶನ ಗೌರವ ಧನ ಕೊಟ್ಟಿದ್ದೇವೆ. ಅದಕ್ಕಾಗಿ ಒಂದು ಕೋಟಿ ರೂಪಾಯಿಯನ್ನು ಖರ್ಚು ಮಾಡುತ್ತಿದ್ದೇವೆ, ಈರೀತಿಯಾಗಿ ಅನೇಕ ಸಂಘ ಸಂಸ್ಥೆಗಳಿಗೆ ಹಣ ಕೊಟ್ಟಿದ್ದೇವೆ. ಇನ್ನೊಂದು ವಿಷಯ ಹೇಳುತ್ತೇನೆ, ಕಾಸರಗೋಡಿನ ಕನ್ನಡ ಮಹಿಳಾ ಸಂಘಕ್ಕೆ ಮೊದಲಿನಿಂದಲೂ ಸಿಕ್ಕಿರಲಿಲ್ಲ ನಾವು ಬಂದಮೇಲೆ ಅವಕ್ಕೂ ಕೊಟ್ಟಿದ್ದೇವೆ. ಮಂಜೇಶ್ವರ ಪ್ರೌಢಶಾಲೆಗೆ ಕೊಟ್ಟಿದ್ದೇವೆ, ಲಲಿತಕಲಾ ಸಂಘಕ್ಕೆ ಕೊಟ್ಟಿದ್ದೇವೆ. ಅಲ್ಲದೆ ಕರ್ನಾಟಕ ಚಿತ್ರಕಲಾ ಪರಿಷತ್ ಏನು ಇದೆ ಈ ಸಂಸ್ಥೆಗೆ ಏನು ಮಾಡುತ್ತಾ ಇಲ್ಲ ಎಂದು

ಹೇಳಿದರು. ಶ್ರೀಮತಿ ನಾಗರತ್ನಮ್ಮ ಅವರು ಈಗ ಇದ್ದಿದ್ದರೆ ಅವರೇ ಆದಕ್ಕೆ ಉತ್ತರ ಹೇಳುತ್ತಿದ್ದರು. ಈ ಚಿತ್ರಕಲಾ ಪರಿಷತ್ತಿಗೆ ಎಷ್ಟುರೀತಿಯಲ್ಲಿ ಪ್ರೋತ್ಸಾಹ ಕೊಡಬೇಕೋ ಅಷ್ಟು ರೀತಿಯಲ್ಲಿ ಕೊಟ್ಟಿದ್ದೇವೆ. ನಾವು ಅವರೊಂದಿಗೆ ಸಹಕಾರ ಮಾಡಿದ್ದೇವೆ. ಇನ್ನು ಕನ್ನಡ ಪರಿಷತ್ ಗುಲ್ಬರ್ಗ ಫೈನ್ ಆರ್ಟ್‌ಸೊಸೈಟಿ ಇದಕ್ಕೂ ಸಹಾಯ ಮಾಡಿದ್ದೇವೆ. ಗುಲ್ಬರ್ಗದಲ್ಲಿ ವಿದ್ಯಾವರ್ಧಕ ಸಂಸ್ಥೆ ಏನು ಇದೆ ಇದು ೧೨ ವರ್ಷದಿಂದಲೂ ಇದೆ. ಇವುಗಳಿಗೆ ನಾವು ಬರುವವರೆಗೆ ಕೊಟ್ಟಿರತಕ್ಕಂಥಾದ್ದು ಕೇವಲ ೭೫ ಸಾವಿರ ರೂಪಾಯಿ, ನಾವು ಬಂದಮೇಲೆ ಅವರಿಗೆ ಕೊಟ್ಟಿರತಕ್ಕಂಥಾದ್ದು ಇಷ್ಟರವರೆಗೆ ೫ ಲಕ್ಷ, ಇನ್ನೂ ೫ ಲಕ್ಷ ರೂಪಾಯಿಯನ್ನು ಬಿಲ್ಡಿಂಗ್‌ಗೆ ಕೊಡುತ್ತೇವೆ. ೧೫-೨೦ ವರ್ಷದಿಂದಲೂ ಇದ್ದಂಥಾ ಸರ್ಕಾರ ಕೊಟ್ಟಿರುವುದನ್ನು ನಾವು ಈ ೩ ವರ್ಷದಲ್ಲಿ ಕೊಟ್ಟಿರುವ ಅನುದಾನವನ್ನು ನೋಡಿದರೆ, ನಾವು ಕೊಟ್ಟಷ್ಟು ಅನುದಾನವನ್ನು ಹಿಂದಿನವರು ಯಾರೂ ಕೊಟ್ಟಿಲ್ಲ. ನಾವು ಎಲ್ಲರಿಗಿಂತಲೂ ಹೆಚ್ಚಿನ ಅನುದಾನವನ್ನು ಈ ಸಂಘಸಂಸ್ಥೆಗಳಿಗೆ ಕೊಟ್ಟಿದ್ದೇವೆ. ಆದರೆ ಈ ಸಂಘಸಂಸ್ಥೆಗಳಲ್ಲಿ ನನಗೆ ಬೇಕಾದ ಜನ ಯಾರೂ ಇಲ್ಲ. ಈ ವಿದ್ಯಾವರ್ಧಕ ಸಂಸ್ಥೆಗಾಗಲಿ, ಸಾಹಿತ್ಯ ಸಂಸ್ಥೆಗಾಗಲಿ ಅಥವಾ ಕಲಾ ಸಂಘಕ್ಕಾಗಲಿ ನಾವೇನೂ ಮೆಂಬರ್ ಅಲ್ಲ. ಇಂಥಾ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡುವುದು ಅನುಚಿತ ಎಂದು ನನ್ನ ಭಾವನೆ. ನಾನು ಈ ಮಾತನ್ನು ಹೇಳಿದರೆ ತಪ್ಪಾಗಲಾರದು. This is not to be construed as an egonistic Boast ಇದುವರೆಗೆ ಈ ಕಲೆ ಮತ್ತು ಸಂಸ್ಕೃತಿ ಇಲಾಖೆ ಹಲವಾರು ಮುಖ್ಯಮಂತ್ರಿಗಳ ಖಾತೆಯಲ್ಲಿ ಇತ್ತು. ಆದರೆ ನಮ್ಮ ಮುಖ್ಯಮಂತ್ರಿಗಳ ಆಶೀರ್ವಾದದಿಂದ ಈ ಇಲಾಖೆಯಲ್ಲಿ ಇಷ್ಟರವರೆಗೆ ಯಾರೂ ಮಾಡದೇ ಇರತಕ್ಕಂಥ ಕೆಲಸವನ್ನು ಮತ್ತು ಹಣಕಾಸಿನ ವೆಚ್ಚವನ್ನು ನಾವು ಮಾಡಿದ್ದೇವೆ. ಮಾಡುತ್ತಲೂ ಇದ್ದೇವೆ ಅನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ವಿಶ್ವಕನ್ನಡ ಸಮ್ಮೇಳನದ ಬಗ್ಗೆ ಅನೇಕ ಟೀಕೆಗಳನ್ನು ಮಾಡಿದರು. ಹಿಂದೆ ಇಂಥ ಒಂದು ವಿಶ್ವ ಕನ್ನಡ ಸಮ್ಮೇಳನವನ್ನು ನಡೆಸಬೇಕೆಂದು ಮಾಡಿದರು. ಅದು ಆಗಲಿಲ್ಲ. ಆದನ್ನು ನಮ್ಮ ತಲೆಮೇಲೆ ಹಾಕಿ ಹೋದರು. ನಾವೇನೂ ಇದನ್ನು ಮಾಡಿ ಕಿರೀಟ ಹಾಕಿಸಿಕೊಳ್ಳಬೇಕು ಎನ್ನುವ ಆಸೆಯಿಂದ ಮಾಡುವುದಕ್ಕೆ ಹೋದದ್ದಲ್ಲ. ಹಿಂದೆ ಇವರು ವಿಶ್ವಕನ್ನಡ ಸಮ್ಮೇಳನ ಮಾಡಬೇಕು ಅಂತ ಏನು ಕೆಲಸ ಮಾಡಿದ್ದರೋ ಅದನ್ನು ಪ್ರಾಮಾಣಿಕವಾಗಿ ಮಾಡಿ ಮುಗಿಸಬೇಕು ಹೆಚ್ಚಿನ ಆಡಂಬರ ಇಲ್ಲದೆ ಮಾಡಬೇಕು ಅಂತ ಮಾಡಿದೆವು ಯಾರೂ ಕಿರೀಟ ಹಾಕಿಕೊಳ್ಳುವುದಕ್ಕೆ ಇದನ್ನು ಮಾಡಲಿಲ್ಲ. ಇದರಲ್ಲಿ ದೊಡ್ಡ ದೊಡ್ಡ ಕಲಾವಿದರು, ಸಾಹಿತಿಗಳು ಸೇರಿ ಈ ಸಮ್ಮೇಳನ ನಡೆಸಿದ್ದಾರೆ ಇದರ ಬಗ್ಗೆ ಮಾನ್ಯ ಸದಸ್ಯರು ಏನು ಟೀಕೆ ಮಾಡಿದ್ದಾರೆ ಎಂದರೆ ಈ ವಿಶ್ವಕನ್ನಡ ಸಮ್ಮೇಳನಕ್ಕೆ ೨೦ ಕೋಟಿ ರೂಪಾಯಿ ವೆಚ್ಚ ಮಾಡಿದ್ದಾರೆ ಎಂದು. ಈ ಸಂಬಂಧವಾಗಿ ಉತ್ತರ ಹೇಳಿದ ಮೇಲೂ ಪುನಃ ಪುನಃ ಕೇಳಿದ್ದಾರೆ. ನಾನು ಆಗಲೇ ಈ ಸಭೆಯಲ್ಲೂ ಮತ್ತು ವಿಧಾನಪರಿಷತ್ತಿನಲ್ಲೂ ಹೇಳಿದ್ದೇನೆ, ಈ ವಿಶ್ವಕನ್ನಡ ಸಮ್ಮೇಳನಕ್ಕೆ ೧ ಕೋಟಿ ೨೦ ಲಕ್ಷ ಕೊಟ್ಟಿದ್ದರಲ್ಲಿ ನಾನು ಇದರಲ್ಲಿ ತೆಗೆದುಕೊಂಡದ್ದು ಬರೇ ೬೭ ಲಕ್ಷ ಅಷ್ಟು ದುಡ್ಡಿನಲ್ಲೇ ನಾವು ಈ ವಿಶ್ವಕನ್ನಡ ಸಮ್ಮೇಳನವನ್ನು ಮಾಡಿ ಮುಗಿಸಿದ್ದೇವೆ

೧೧-೦೦ ಎ. ಎಂ.

ಆದರೆ ವಿಶ್ವಕನ್ನಡ ಸಮ್ಮೇಳನದ ಅಂಗವಾಗಿ ರಂಗಮಂದಿರಗಳ ಕಟ್ಟಡಗಳಿಗೆ ೫ ಕೋಟಿ ರೂಪಾಯಿ ಖರ್ಚಾಯಿತು. ಅದು ತಮ್ಮ ಪಾಪದ ಕೂಸು. ಅದು ತಾವು ಮಾಡಿದ್ದು. ಒಬ್ಬ ರಂಗತಜ್ಞನಾಗಿ ಥಿಯರಟಿಕಲ್ ಆಗಿ ಅದನ್ನು ಪೂರ್ಣವಾಗಿ ನಾನು ಒಪ್ಪುತ್ತೇನೆ. ಅದು ಬೃಹದಾಕಾರವಾಗಿ ಬೆಳೆದುಬಿಟ್ಟಿದೆ, ಇದೇ ೫ ಕೋಟಿ ರೂಪಾಯಿಗಳನ್ನು ಬೇರೆ ಕಡೆ ವೆಚ್ಚ ಮಾಡಿದ್ದರೆ ಹಲವಾರು ಶಾಸಕ ಮಿತ್ರರಿಗೆ ರಂಗಮಂದಿರಗಳನ್ನು ಕೊಡಬಹುದಾಗಿತ್ತು. ಒಂದು ಕೋಟಿ ೮ ಲಕ್ಷದಲ್ಲಿ ೪೦ ಲಕ್ಷ ರೂಪಾಯಿ ಉಳಿತಾಯಮಾಡಿ, ಬಯಲು ರಂಗಮಂದಿರ ಮಾಡಿದ್ದಾನೆ, ಯುವಕ ಒಳ್ಳೆಯ ಕೆಲಸ ಮಾಡಿದ್ದಾನೆ ಎಂದು ಶಹಭಾಸ್‌ಗಿರಿ ಕೊಡುವುದು ಬಿಟ್ಟು, ವಿಶ್ವ ಕನ್ನಡ ಸಮ್ಮೇಳನದಲ್ಲಿ ನಿಮನಿಮಗೆ ಬೇಕಾದವರಿಗೆ ಮಾಡಿದ್ದೀರಿ, ಕೃಷ್ಣರಾಜೇಂದ್ರದಲ್ಲಿ ಕೂಡಿಸಿ, ಫೋಟೋಗಳನ್ನು, ಟೇಪುಗಳನ್ನು, ಮಾಡಿಸಿರಿ ಬೇಕಾದರೆ ವಿಧಾನಸಭೆಯಲ್ಲಿ ಸೇಳಬಲ್ಲೆ ಎಂದು ಹೇಳಿದಿರಿ. ನಿಮಗೆ ಫೋಟೋಗಳನ್ನು ತೋರಿಸುತ್ತೇನೆ. ಬೇರೆ ಬೇರೆ ಕಡೆಗಳಿಂದ ಬಂದಂಥ ಲೆಟರ್ಸ್ ಏನು, ಸ್ವಾಗತ ಸಮ್ಮೇಳನದಲ್ಲಿ ಏನು ಸಾಧನೆ ಮಾಡಿದ್ದೇವೆ ಎಂದು ಹೇಳುತ್ತಾ ಇಲ್ಲ, ದೇಶದಾದ್ಯಂತ ಜಗತ್ತಿನಾದ್ಯಂತ ಸುಮಾರು

೯ರಿಂದ ೧೦ ಸಾವಿರ ಪ್ರತಿನಿಧಿಗಳು ಬಂದು ಒಂದು ಕಡೆ ಇರುವ ಸೊಗಸನ್ನು ನೀವು ಬಂದು ನೋಡಬೇಕಾಗಿತ್ತು. ಆ ಪ್ರತಿನಿಧಿಗಳು ಯಾರ್ಯಾರಿದ್ದಾರೆ ಎನ್ನುವುದನ್ನು ತರಿಸಿ, ಅದರ ದಾಖಲೆಗಳನ್ನು ಒಪ್ಪಿಸಿ, ಆದರೆ ಈ ತರಹ ಭಾವನೆಯನ್ನು ಹೇಳಬಾರದಾಗಿತ್ತು ಎಂದು ಹೇಳಲಿಕ್ಕೆ ಬಯಸುತ್ತೇನೆ. ಇನ್ನು ಅವ್ಯವಸ್ಥೆ ಬಗ್ಗೆ ಹೇಳಿದರು, ಅವ್ಯವಸ್ಥೆಯಾಗಿದೆ, ಮಾನ್ಯ ಮುಖ್ಯ ಮಂತ್ರಿಗಳು ಸೂಕ್ಷ್ಮವಾಗಿ ಹೇಳಿದರು. ಯಾರು ಬರುವುದಿಲ್ಲ ಎಂದು ಹೇಳಿದ್ದರೋ ಅವರೆಲ್ಲಾ ಬಂದರು. ವಿಶ್ವಕನ್ನಡ ಸಮ್ಮೇಳನಕ್ಕೆ ಯಾರು ಆಮಂತ್ರಿತರು ತಿಳಿಸಬೇಕು ಎಂದು ಹೇಳಿದಾಗ ಹಿಂದಿನದಿವಸ ೭೦೦ ಜನ ಬರುತ್ತೇವೆ ಎಂದು ಹೇಳಿದರು. ಕಾಂಗ್ರೆಸ್‌ನವರೂ ಕೂಡ ಬರುವುದಿಲ್ಲ ಎಂದು ಕಾಲ್ ಕೊಟ್ಟರು. ನಮಗೆ ಒಂದು ರೀತಿಯಾದ ಹೆದರಿಕೆ ಉಂಟಾಗಿತ್ತು. ೫೦೦೦ ಸಾವಿರ ಪ್ರತಿನಿಧಿಗಳಿಗೆ ಏರ್ಪಾಟು ಮಾಡಿದರೆ ಇನ್ನೂ ಸಾವಿರಾರು ಜನ ಬಂದರು. ಮೈಸೂರಿನಲ್ಲಿ ಸಾಕಾಗದೆ, ನಂಜನಗೂಡಿನಲ್ಲಿ, ಶ್ರೀರಂಗಪಟ್ಟಣದಲ್ಲಿ ಏರ್ಪಾಟು ಮಾಡಬೇಕಾದ ಪರಿಸ್ಥಿತಿ ಬಂತು. ಮೈಸೂರಿನಲ್ಲಿ ಎಷ್ಟು ಅವಕಾಶವಿದೆ ಎನ್ನುವುದು, ಮೈಸೂರಿನ ಶಾಸಕರಿಗೆ ಗೊತ್ತಿದೆ. ಅಂತಹ ಕಠಿಣ ಪರಿಸ್ಥಿತಿಯಲ್ಲೂ ಕೂಡ ಅವ್ಯವಸ್ಥೆಯಾಗಲಿಕ್ಕೆ ಏನು ಕಾರಣವೆಂದರೆ ಲಕ್ಷೋಪಲಕ್ಷ ಜನ ಬಂದರು. ನಾವು ಪ್ರತಿನಿಧಿಗಳ ಸಭೆಗಳನ್ನು ಒಂದು ಕಡೆ ಮಾಡಲಿಲ್ಲ ಪ್ರತಿನಿಧಿಗಳ ಸಭೆಗಳನ್ನು ೮ ಜಾಗದಲ್ಲಿಮಾಡಿದ್ದೇವೆ. ಒಬ್ಬ ಮನುಷ್ಯ ಒಳಕ್ಕೆ ಹೋಗುವಂಥ ಜಾಗ ಇರಲಿಲ್ಲ. ಇದನ್ನು ಸಕ್ಸಸ್ ಎಂದು ಹೇಳುತ್ತೀರೋ ಏನು ಹೇಳುತ್ತೀರಿ. ಒಂದು ಟ್ಯಾಬ್ಲೊಗೆ ೩೦ ಸಾವಿರ ರೂಪಾಯಿ ಖರ್ಚು ಮಾಡಿದ್ದೇವೆ. ಲಕ್ಷೋಪಲಕ್ಷ ಜನ ಬಂದು ನೋಡಿದರು. ಒಬ್ಬ ಕಲಾವಿದ ೨೦೦೦,೩೦೦೦ ರೂಪಾಯಿ ಸಂಪಾದನೆ ಮಾಡುತ್ತಾನೆ ಅಂದರೆ ಹೊಟ್ಟೆ ಉರಿ ಏಕೆ ? ನಿಮ್ಮ ರಿಪಬ್ಲಿಕ್ ಡೇ ಪೆರೇಡ್‌ಗೆ ಡೆಲ್ಲಿಯಲ್ಲಿ ೧೩೦ ಕೋಟಿ ರೂಪಾಯಿ ಖರ್ಚಾಗಿದೆ.

ಆದರೆ ಇದು ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುವಂತಹ ಒಂದು ಮಹಾ ಸಮ್ಮೇಳನ.

ಶ್ರೀ ಎಂ. ವೀರಪ್ಪ ಮೊಯಿಲಿ.— ಸನ್ಮಾನ್ಯ ಸಚಿವರು ಬಹಳ ಉಲ್ಲಾಸದಿಂದ, ಹುರುಪಿನಿಂದ ಮಾತನಾಡುತ್ತಾ ಇದ್ದಾರೆ. ಅವರು ಉಪಯೋಗ ಮಾಡುವಂಥ ಶಬ್ದಗಳನ್ನು ಸ್ವಲ್ಪ ಜಾಗರೂಕತೆಯಿಂದ ನೋಡಿಕೊಳ್ಳುವುದು ಒಳ್ಳೆಯದು. ಏಕೆಂದರೆ ನಿಮ್ಮ ರಿಪಬ್ಲಿಕ್ ಡೇ ಪೆರೇಡ್ ಎಂದು ಹೇಳಿದ್ದಾರೆ. ಹಾಗಾದರೆ ಇವರು ಯಾವ ದೇಶದಿಂದ ಬಂದಿದ್ದಾರೆ.

ಶ್ರೀ ಜೀವರಾಜ ಆಳ್ವ.— ಕ್ಷಮಿಸಬೇಕು ಅಧ್ಯಕ್ಷರೇ, ನಾನು ಏಕೆ ಹೇಳಿದೆ ಎಂದರೆ, ಕರ್ನಾಟಕದ ಭವ್ಯ ಪರಂಪರೆಯನ್ನು ಪ್ರತಿಬಿಂಬಿಸತಕ್ಕ ಮೆರೆವಣಿಗೆಗೆ ೧೦ ಲಕ್ಷ ರೂಪಾಯಿ ಖರ್ಚು ಮಾಡಿದರೆ ಅದನ್ನು ಲಕ್ಷೋಪಲಕ್ಷ ಜನ ಬಂದು ನೋಡಿ ಆನಂದಿಸಿದರೆ ಅದು ತಪ್ಪು ಎಂದು ಅನಿಸುತ್ತದೆಯೇ ? ಹೀಗೆ ಪ್ರತಿಯೊಂದರಲ್ಲೂ ತಪ್ಪು ಹುಡುಕುವುದಾದರೆ ಅದರ ಬಗ್ಗೆ ಏನೂ ಹೆಚ್ಚು ಹೇಳಬೇಕಾಗಿಲ್ಲ.

ಅಧ್ಯಕ್ಷರು.— ಅವರು ಮೆಚ್ಚುವಂಥ ಶಬ್ದ ಉಪಯೋಗಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.— ದೇಶ ಒಪ್ಪಬೇಕು, ಸಮಾಜ ಒಪ್ಪಬೇಕು. ಮಾನ್ಯ ಪ್ರಕಾಶ್‌ರವರು ಅವರ ಇಲಾಖೆಗೆ ಸಂಬಂಧಪಟ್ಟಹಾಗೆ ಏನುಬೇಕೋ ಅದನ್ನು ಸಮರ್ಪಕವಾಗಿ ಹೇಳಿದರು. ಇವರು ಉತ್ತರ ಕೊಡಲಿ, ಆದರೆ ಶಬ್ದಗಳನ್ನು ಉಪಯೋಗ ಮಾಡುವಾಗ ಸಂಯಮದಿಂದ ಉಪಯೋಗ ಮಾಡಿದರೆ ಅದರಿಂದ ನಿಮಗೂ ಪ್ರಯೋಜನವಾಗುತ್ತದೆ, ಮಂತ್ರಿ ಕೇಳುವವರಿಗೂ ಹಿತತವಾಗುತ್ತದೆ.

ಶ್ರೀ ಜೀವರಾಜ ಆಳ್ವ.— ಆಮೇಲೆ ಗಡಿ ಪ್ರದೇಶದ ಸಂಘಸಂಸ್ಥೆಗಳಿಗೆ ಉತ್ತೇಜನ ಕೊಡಬೇಕು ಎಂದು ಹೇಳಿದ್ದಾರೆ. ಸೊಲ್ಲಾಪುರ ಇರಲಿ ಅಥವಾ ಬೇರೆ ಕಡೆ ಇರಲಿ, ನಮ್ಮ ರಾಜ್ಯದಲ್ಲಿರುವಂಥ ಗಡಿ ಪ್ರದೇಶದ ಸಂಸ್ಥೆಗಳಿಗೆ ಏನು ಬೇಕಾದರೂ ನಾವು ಸಹಾಯ ಕೊಡುತ್ತೇವೆ. ಅವರು ಎಷ್ಟು ಸಹಾಯ ಬೇಕು ಎಂದು ಕೇಳಲಿ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಯಾವುದೇ ಸಂಘಸಂಸ್ಥೆಗಳಿಗೆ, ಕಲಾವಿದನಿಗೆ, ಸಾಹಿತಿಗೆ ಇಷ್ಟರವರೆಗೆ ಇಲ್ಲ ಎಂದು ಹೇಳಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಅಷ್ಟೊಂದು ಹಣದ ಅವಕಾಶವನ್ನು ಕೊಟ್ಟಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಒಂದು ಕೋಟಿ ರೂಪಾಯಿ ಹೆಚ್ಚಿಗೆ ಸಹಾಯ ಕೊಟ್ಟಿದ್ದಾರೆ. ಆದ್ದರಿಂದ ಯಾವುದೇ ಸಂಘಸಂಸ್ಥೆಗೆ,

ಯಾವುದೇ ಕಲಾವಿದನಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇಲ್ಲ ಎಂದು ಹೇಳುವುದಿಲ್ಲ. ಹೊರನಾಡ ಸಂಘಸಂಸ್ಥೆಗಳಿಗೆ ಅಷ್ಟೇ ಪ್ರೋತ್ಸಾಹ ಕೊಡುತ್ತಿದ್ದೇವೆ. ಆಮೇಲೆ ಸಂಗೀತನಾಟಕಕ್ಕೆ ಪ್ರೋತ್ಸಾಹ ಕೊಡುತ್ತಾ ಇಲ್ಲ ಎಂದು ಹೇಳಿದರು. ಅವರಿಗೆ ಎಲ್ಲಿಂದ ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಸಿಕ್ಕಿತೋ ಗೊತ್ತಿಲ್ಲ, ನಾವು ಕೋಟಿಗಟ್ಟಲೆ ಖರ್ಚು ಮಾಡುತ್ತಾ ಇದ್ದೇವೆ. ವಿಶ್ವಕನ್ನಡ ಸಮ್ಮೇಳನದ ಅಂಗವಾಗಿ ತೆಗೆದುಕೊಂಡಂಥ ಕಾರ್ಯಕ್ರಮಗಳನ್ನು ಕರ್ನಾಟಕದಾದ್ಯಂತ ಮಾಡಬೇಕು, ಕೇವಲ ಬೆಂಗಳೂರು ನಗರ, ಹುಬ್ಬಳ್ಳಿ—ಧಾರವಾಡ, ಅಥವಾ ಮೈಸೂರಿನಲ್ಲಿ ಮಾಡಬೇಕು ಎಂದು ಹೇಳಲಿಲ್ಲ. ಅಕಾಡೆಮಿಗಳ ಅಧ್ಯಕ್ಷರನ್ನು, ಹಿರಿಯ ವಿದ್ವಾಂಸರನ್ನು, ಕಲಾವಿದರನ್ನು ದಯವಿಟ್ಟು ಹಳ್ಳಿಗಳಿಗೆ ಹೋಗಿ ಎಂದು ನಾನು ಕೇಳಿಕೊಂಡೆ, ವಿಶ್ವಕನ್ನಡ ಸಮ್ಮೇಳನದ ಅಂಗವಾಗಿ ೧೦೦೦ ಕಾರ್ಯಕ್ರಮಗಳನ್ನು ಕರ್ನಾಟಕದ ಹೋಬಳಿಮಟ್ಟದಲ್ಲಿ ತೆಗೆದುಕೊಳ್ಳೋಣ ಎಂದು ಹೇಳಿ ಇಷ್ಟರವರೆಗೆ ೨೦೦,೩೦೦ ಕಾರ್ಯಕ್ರಮಗಳು ಆಗಿದೆ. ಬೇರೆ ಬೇರೆ ಕಾರ್ಯಕ್ರಮಗಳನ್ನು ಹಳ್ಳಿಗಳಲ್ಲಿ ಮಾಡತಕ್ಕ ಕಾರ್ಯಕ್ರಮಗಳನ್ನು ಇಟ್ಟಿದ್ದೇವೆ. ನಂತರ ಕನ್ನಡ ಕಾವಲು ಸಮಿತಿ ಬಗ್ಗೆ ಹೇಳಿದರು. ಇದು ಹೊಸದಾಗಿ ನಿರ್ಮಾಣವಾಗಿದೆ. ಮಾನ್ಯ ಪಾಟೀಲ್ ಪುಟ್ಟಪ್ಪನವರು ಇದರಲ್ಲಿ ಕೆಲಸ ಮಾಡುತ್ತಾ ಇದ್ದಾರೆ. ಅವರಿಂದ ಕನ್ನಡ ಅನುಷ್ಠಾನಕ್ಕೆ ಬರುತ್ತದೆಂದು ನಂಬಿದ್ದೇವೆ. ಮತ್ತೆ ಗಡಿ ಸಲಹಾ ಸಮಿತಿ ಇದೆ. ಇವೆರಡೂ ಸಮಿತಿಗಳು ಆಗಿದೆ. ತಮ್ಮ ಸಲಹೆಗಳನ್ನು ಅವರಿಗೆ ತಲುಪಿಸುತ್ತೇನೆ. ಆಮೇಲೆ ಒಲಂಪಿಕ್ ಕ್ರೀಡಾಪಟುಗಳಿಗೆ ಹಣ ಕೊಟ್ಟಿಲ್ಲ ಎಂದು ಹೇಳಿದರು, ನಿಜ, ವಂದನರಾವ್ ಅವರಿಗೆ ೨೫ ಸಾವಿರ ರೂಪಾಯಿ ಕೊಟ್ಟೆವು. ಸರ್ಕಾರ ಒಬ್ಬ ಕ್ರೀಡಾಪಟುವಿಗೆ ಉತ್ತೇಜನ ಕೊಡಬೇಕು ಎನ್ನುವ ಕಾರಣದಿಂದ ಸರ್ಕಾರವೇ ೨೫ಸಾವಿರ ಕೊಟ್ಟಿದೆ ಇದನ್ನು ಅವರು ಕೇಳಲಿಲ್ಲ. It doesn't come under grant in code. ಅವರ ಟಿ. ಎ. ಡಿ. ಎ. ಬಗ್ಗೆ ಕರ್ನಾಟಕ ಅಥ್ಲೆಟಿಕ್ ಅಸೋಸಿಯೇಷನ್‌ಗೂ ಅಥ್ಲೆಟಿಕ್ ಅಸೋಸಿಯೇಷನ್ ಫೆಡರೇಷನ್ ಆಫ್ ಇಂಡಿಯಾದವರಿಗೂ ಏನೋ ಭಿನ್ನಾಭಿಪ್ರಾಯ ಇದೆ. ಅವರ claim ದಾಖಲಾತಿಗಳು ಸರಿಯಾಗಿಲ್ಲದೇ ಇರುವುದರಿಂದ ಕೊಟ್ಟಿಲ್ಲ. ಅದು ತಪ್ಪು. ಅದನ್ನು ಸರಿಪಡಿಸಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಆಮೇಲೆ ೨೫ ಪುಸ್ತಕಗಳನ್ನು ಒಬ್ಬರಿಗೇ ಕೊಟ್ಟರಿ ಎಂದು ಹೇಳಿದರು. ಅದು ತಪ್ಪು. ನೀವೂ ಬನ್ನಿ ತೆಗೆದುಕೊಂಡು ನೋಡಿ, ತಪ್ಪಿದ್ದರೆ ತೋರಿಸಿ. ಯಾರು ಬರುತ್ತಾರೋ ಅವರಿಗೆ ಕೊಡಿ ಎಂದು ಹೇಳಿದರು. ಎಷ್ಟೋ ಜನಬಂದಿದ್ದಾರೆ ತೆಗೆದುಕೊಂಡಿದ್ದಾರೆ. ಆಮೇಲೆ ಅವರಿಗೆ ಕೊಟ್ಟ ರೇಟ್ ಸರ್ಕಾರದ ರೇಟು. ಬಹಳ ಕಡಿಮೆ ಕೊಟ್ಟಿದ್ದೇವೆ ಎಂದು ನಮಗೆ ಅನ್ನಿಸುತ್ತದೆ. ಹೆಚ್ಚು ಹಣ ಕೇಳುತ್ತಾರೆ. ಒಬ್ಬೊಬ್ಬರಿಗೆ ಒಂದೊಂದು ಎರಡೆರಡು ಪುಸ್ತಕ ಕೊಟ್ಟಿದ್ದೇವೆ. ಅವರಿಗೆ ಕೊಟ್ಟ ಹಣ ಸಾಲದು ಎಂಬ ಅಭಿಪ್ರಾಯ ಇದೆ. ಅವರಿಗೆ ಸ್ವಲ್ಪ ಹಣ ಕೊಡಬೇಕು ಎಂಬ ಭಾವನೆ ಇದೆ. ಹಣಕಾಸನ್ನು ಮಿತವ್ಯಯ ಮಾಡಬೇಕು ಎನ್ನುವ ದೃಷ್ಟಿಯಿಂದ ಬಹಳ ರಿಜಿಡ್ ಆಗಿದ್ದುದರಿಂದ ಅವರಿಗೆ ಹಣ ಕೊಟ್ಟಿದ್ದು ಕಡಿಮೆ ಎನಿಸುತ್ತದೆ, ಅವರಿಗೆ ಸ್ವಲ್ಪ ಹಣ ಕೊಡಬೇಕು.

ಆಲೋಚನೆ ಮಾಡುತ್ತಾ ಇದ್ದೇವೆ. ಆಮೇಲೆ ಹಂಪೆಯ ಪುನರುತ್ಥಾನಕ್ಕೆ ಕೇಂದ್ರದ ಹಣ ಬಂದಿದೆ ಎಂದು ಹೇಳಿದರು. ಇಲ್ಲಿಯವರೆಗೆ ಒಂದು ಪೈಸೆ ಸಹ ಬಂದಿಲ್ಲ. ಕಮಲಾಪುರ ಪ್ರಾಜೆಕ್ಟ್ ಬಗ್ಗೆ ೪ ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದಾರೆ. ಪುನರುತ್ಥಾನ ಸಮಿತಿ ಹಲವಾರು ಸಭೆ ಸೇರಿದರೂ ಕೂಡ ಕಾರಣಾಂತರದಿಂದ ಹಲವಾರು ಇಲಾಖೆಗಳು ಸೇರಿರುವುದರಿಂದ, ಟೂರಿಸಂ, ಆರ್ಕಿಯಾಲಜಿ ಮುಂತಾದ ಇಲಾಖೆಗಳು ಇರುವುದರಿಂದ ಮತ್ತು ಹಂಪೆ ಪುನರುತ್ಥಾನ ಸಮಿತಿ ಸದಸ್ಯರು ನಿರ್ದಿಷ್ಟವಾದ ರೂಪುರೇಷೆಗಳನ್ನು ಕೊಡದೇ ಇರುವುದರಿಂದ, ಸೆಂಟ್ರಲ್ ಆರ್ಕಿಯಾಲಜಿ ಮತ್ತು ಸ್ಟೇಟ್ ಆರ್ಕಿಯಾಲಜಿ ಡಿಪಾರ್ಟ್‌ಮೆಂಟ್‌ಗಳು ಇರುವುದರಿಂದ ಕೆಲಸ ಆಗಿಲ್ಲ. ಆದರೆ ಕಮಲಾಪುರದಲ್ಲಿ ನಾವು ಸುಮಾರು ೪೨ ಲಕ್ಷ ರೂಪಾಯಿಯಲ್ಲಿ ಪ್ರವಾಸೋದ್ಯಮ ನಿಗಮವನ್ನ ಕಟ್ಟುತ್ತ ಇದ್ದೇವೆ. ಅದರ ಕೆಲಸ ಆರಂಭವಾಗಿದೆ.

ಆಮೇಲೆ ಕೆ.ಎಸ್.ಟಿ.ಡಿ.ಸಿ. ಬಗ್ಗೆ ಹೇಳಿದರು. ಅಧ್ಯಕ್ಷರಾದ ಬಾಷ್ಯ ಹೆಮ್ಮಾರ್‌ಶೆಟ್ಟಿಯವರೆ, ಈ ತರಹ ಹೇಳಿದ್ದಾರೆ. ಸಮಾಜವಾದಿಗಳು ಎಂದು ಅವರೇ ಹೇಳಿದ್ದಾರೆಯೂ ಏನೂ ಎಂದು ಸರಿಯಾಗಿ ಗೊತ್ತಾಗಲಿಲ್ಲ. ಫೋನ್ ಮಾಡಿ ಪ್ರಯತ್ನ ಮಾಡಿದೆ. ಹಾಗೆ ಹೇಳಿದರೆ ಅದು ತಪ್ಪು ಎಂದು ನನ್ನ ಅನಿಸಿಕೆ. ಆದರೂ ಆ ಅಧಿಕಾರಿಗಳ ಬಗ್ಗೆ ಫಸ್ಟ್ ಎನ್‌ಕ್ವೈರಿ ಬಂತು. ಸೆಕೆಂಡ್ ಎನ್‌ಕ್ವೈರಿ ನಮಗೆ ಬಂದಿಲ್ಲ. ಪತ್ರಿಕೆಗಳಲ್ಲಿ ಬಂದಿದೆ. ಇಲಾಖೆಗೇ ಬಂದಿಲ್ಲ, ಕೆ.ಎಸ್.ಟಿ.ಡಿ.ಸಿ.ಗೆ ಬಂದಿಲ್ಲ. ಬಂದ ನಂತರ ಕ್ರಮ ತೆಗೆದು ಕೊಳ್ಳುತ್ತೇನೆ, ಇದರ ಬಗ್ಗೆ ಈ ಇಲಾಖೆಯೊಳಗೆ ಬರ

ತಕ್ಕಂಥ ಡಿಸಿಪ್ಲಿನರಿ ಆ್ಯಕ್ಷನ್ ಏನು ಆಗಬೇಕೋ ಅದನ್ನು ಖಂಡಿತಾ ತೆಗೆದುಕೊಳ್ಳುತ್ತೇನೆ, ಅದನ್ನು ಮಾಡುತ್ತೇನೆ ಎಂದು ಹೇಳುತ್ತೇನೆ.

ಸ್ಪೋರ್ಟ್ಸ್ ಕೌನ್ಸಿಲ್ ಕೋಚಸ್ ಬಗ್ಗೆ ಹೇಳಿದ್ದಾರೆ. ಬಹಳ ಒಳ್ಳೆಯ ಸಲಹೆ. ನಾವು ಪ್ರಯತ್ನ ಮಾಡುತ್ತಿದ್ದೇವೆ. ಆದರೆ ಹಣಕಾಸಿನ ತೊಂದರೆಯಾಗಿದ್ದುದರಿಂದ ಕೋಚಸ್ ಬಗ್ಗೆ ಇನ್ನೂ ಆಗಿಲ್ಲ. ಈ ವರ್ಷ ೨೩ ಕೋಚ್‌ಗಳನ್ನು ನಾವು ರೆಗ್ಯುಲರೈಸ್ ಮಾಡುತ್ತೇವೆ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಇನ್ನು ಶ್ರೀಮತಿ ಮನೋರಮಾ ಮಧ್ವರಾಜ್ ಹಿರಿಯ ಸದಸ್ಯೆಯವರು ಮಲ್ಪೆ ಪ್ರವಾಸೋದ್ಯಮ ತಾಣದ ಬಗ್ಗೆ ಕೆಲವು ಮಾತುಗಳನ್ನು ಆಡಿದ್ದಾರೆ. ನಾನು ಅವರ ಗಮನಕ್ಕೂ ಹಿರಿಯರಾದ ವೀರಪ್ಪ ಮೊಯಿಲಿಯವರ ಗಮನಕ್ಕೂ ತರಬಯಸುತ್ತೇನೆ. ಇದು ವೆಸ್ಟರ್ನ್ ಘಾಟ್ ಡೆವಲಪ್‌ಮೆಂಟ್ ಪ್ರೋಗ್ರಾಮ್‌ನಲ್ಲಿ ಬಂದಂಥ ಕಾರ್ಯಕ್ರಮ ನಿಜ, ಇದರಲ್ಲಿ ಸುಮಾರು ೧೦ ಲಕ್ಷ ರೂಪಾಯಿ ಬಂತು. ಇದರಲ್ಲಿ ಸ್ವಲ್ಪ ಹಣವನ್ನು ಮರ್ಕ್ಯರಾಗೆ ಉಪಯೋಗಿಸಿಕೊಂಡೆವು. ಸ್ವಲ್ಪ ಹಣವನ್ನು ಮಲ್ಪೆಯ ಒಂದು ತಾಣಕ್ಕೆ ಉಪಯೋಗಿಸಲಿಕ್ಕೆ ಇಟ್ಟುಕೊಂಡಿದ್ದೇವೆ. ಇದು ಮೊಯಿಲಿಯವರ ತಿಳುವಳಿಕೆಯಲ್ಲಿ ಬಂದು ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಬೀಚ್ ರೆಸಾರ್ಟ್ ಮಾಡುವಾಗ they must be like cottages ಚಿಕ್ಕ ಚಿಕ್ಕ ಇಂಡಿವಿಜುಯಲ್ ಕಾಟೇಜಸ್ ಆದರೆ celling will be easier. ಆದರೆ ಅದನ್ನು ಒಂದು ಬಿಲ್ಡಿಂಗ್ ಸ್ಟ್ರಕ್ಚರ್ ತರಹ ಮಾಡಿದ್ದಾರೆ. ಸುಮಾರು ೬೦ ಕೋಣೆಗಳನ್ನು ಕಟ್ಟಲಿಕ್ಕೆ ಇದರ ಬಗ್ಗೆ ನಾವು ಈಗಾಗಲೇ ೬೦ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಇವತ್ತು ಹಲವಾರು ಜಾಹೀರಾತುಗಳನ್ನು ಕೊಟ್ಟರೂ ಕೂಡಾ ನಮ್ಮ ಭಾವನೆ ಏನೆಂದರೆ ಒಂದೇ ಒಂದು ಕಡೆ ೫ ಸ್ಟಾರ್ ಕಲ್ಚರ್, ೩ ಸ್ಟಾರ್ ಕಲ್ಚರ್ ಮಾಡಬಾರದು. ಪ್ರವಾಸೋದ್ಯಮದಲ್ಲಿ ಡೊಮೆಸ್ಟಿಕ್ ಟೂರಿಸಂಗೆ ಹೆಚ್ಚಿನ ಅವಕಾಶ ಕೊಡಬೇಕೆಂದು ಪ್ರಧಾನಮಂತ್ರಿ ರಾಜೀವ್ ಗಾಂಧಿಯವರು ಹೇಳಿದರು. ಆ ಮೇಲೆ ರಿಲಿಜಿಯಸ್ ಟೂರಿಸಂ ಕಲ್ಚರಲ್ ಟೂರಿಸಂ ಈ ರೀತಿ ಹೊಸ ಪ್ರಯೋಗಗಳನ್ನು ಮಾಡಿದ್ದಾರೆ. ಈ ದಿಶೆಯಲ್ಲಿ ಹಣವನ್ನು ಖರ್ಚು ಮಾಡಬೇಕಾಗಿದೆ. ವಾಲ್ ಟು ವಾಲ್ ಕಾರ್ಪೆಟ್ಸ್ ಬೇಕಾಗಿಲ್ಲ. ಏರ್ ಕಂಡೀಷನ್ಡ್ ರೂಮ್ ಬೇಕಾಗಿಲ್ಲ. ಕ್ಲೀನ್ ಟಾಯ್ಲೆಟ್ಸ್ ಏರೀ ರೂಮ್ಸ್ ಇರುವಂಥದ್ದನ್ನು ಮಾಡಬೇಕಾಗಿದೆ. ಒಂದು ರೀತಿಯಲ್ಲಿ ಅದನ್ನು ನಾನು ಸದಸ್ಯರ ಸಲಹೆಗೆ ಬಿಡುತ್ತೇನೆ. ನನ್ನ ಭಾವನೆಗಳು ಏನು ಎಂದರೆ ಈ ವೆಸ್ಟರ್ನ್ ಘಾಟ್ ಡೆವಲಪ್‌ಮೆಂಟ್‌ಗೆ ೬೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ಯಾರು ಒಂದು ಹತ್ತು ಲಕ್ಷ ರೂಪಾಯಿಗಳನ್ನು ಜಾಸ್ತಿ ಕೊಡುತ್ತಾರೆ. ಅದನ್ನು ನಾವು ತೆಗೆದುಕೊಳ್ಳೋಣ. ೭೦ ಲಕ್ಷ ರೂಪಾಯಿಗಳನ್ನು ಬೇರೆ ಹಣಕಾಸಿನ ಸಂಸ್ಥೆಗಳಿಂದ ಸಾಲ ತೆಗೆದುಕೊಂಡು ಇಂಥ ವೆಸ್ಟರ್ನ್ ಘಾಟ್ ಡೆವಲಪ್‌ಮೆಂಟ್ ಏರಿಯಾದಲ್ಲಿ ಬರುವಂಥ ಹಲವಾರು ಸ್ಥಳಗಳಲ್ಲಿ ೧೦-೫ ಜಾಗಗಳಲ್ಲಿ ೬ ತಿಂಗಳಲ್ಲಿ ಕಟ್ಟಡಗಳು ಆಗಿರಬೇಕು. ಎರಡು ರೂಮು, ೩(ಮೂರು) ರೂಮುಗಳು ಇರುವಂಥದ್ದು. ಈಗಾಗಲೇ ಇದನ್ನು ಕೊಡಚಾದ್ರಿಯವರು ಕೇಳುತ್ತಿದ್ದಾರೆ. ಕಾರವಾರದವರು ಕೇಳುತ್ತಿದ್ದಾರೆ. ಈ ಜಾಗಗಳನ್ನು ನಿರ್ಮಾಣ ಮಾಡಲಿಕ್ಕೆ ಹಣಕಾಸಿನ ಕೊರತೆ ಇದೆ. ಮಾನ್ಯ ಶ್ರೀನಿವಾಸ್‌ರವರು ಹೇಳಿದರು, ಇದರ ಬಗ್ಗೆ ಅಡ್ವರ್‌ಟೈಸ್‌ಮೆಂಟನ್ನು ಎಕ್ಸ್‌ಟೆಂಡ್ ಮಾಡಿಲ್ಲ ಎಂದು. ಬೇಕಾದರೆ ಒಂದು ತಿಂಗಳು ಎಕ್ಸ್‌ಟೆಂಡ್ ಮಾಡುತ್ತೇವೆ. ಒಬ್ಬರೋ, ಇಬ್ಬರೋ ಕೇಳಿದ್ದಾರೆ. ಈ ಹಣ ಸಿಕ್ಕಿದರೆ ಸಾಕು ಎಂದು ನಾವು ಕಾಯುತ್ತಿದ್ದೇವೆಯೇ ಹೊರತು. ಇದರಲ್ಲಿ ಬೇರೆ ರೀತಿನೀತಿಗಳು ಏನೂ ಇಲ್ಲ. ತಾವೆಲ್ಲಾ ಅಭಿಪ್ರಾಯ ಪಡುವುದಾದರೆ, ಶ್ರೀಮತಿ ಮನೋರಮಾ ಮಧ್ವರಾಜ್‌ರವರ ಒಂದು ಸಲಹೆಯನ್ನು ಕೋ-ಅಪರೇಟಿವ್ ಸೆಕ್ಟರ್‌ನಲ್ಲಿ ಮಾಡುತ್ತೇವೆ ಎಂದು ಹೇಳಿದರು.

ಶ್ರೀಮತಿ ಮನೋರಮಾ ಮಧ್ವರಾಜ್.— ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.— ಮಧ್ವರಾಜ್‌ರವರೇ ತಾವು ಕುಳಿತುಕೊಳ್ಳಿ. ಮುಕ್ತಾಯ ಮಾಡಿ ಬಿಡಲಿ.

ಶ್ರೀ ಜೀವರಾಜ್ ಆಳ್ವ.— ಸ್ಥಳೀಯ ಜನರೇ ಅದನ್ನು ನಡೆಸುವಂಥ ಒಂದು ಏರ್ಪಾಡು ಮಾಡಲಿಕ್ಕೆ ಅವಕಾಶ ಕೊಟ್ಟರೆ ಒಳ್ಳೆಯದು ಎಂದು ಹೇಳಿದ್ದಾರೆ. ಅದನ್ನೂ ಸಹ ನಾನು ಪ್ರವಾಸೋದ್ಯಮ ನಿಗಮದವರಿಗೆ ತಿಳಿಸುತ್ತೇನೆ. ಅದೂ ಮಾಡಬಹುದು, ಏಕೆಂದರೆ, ಸರ್ಕಾರಕ್ಕೆ ಇದರಲ್ಲಿ ತೆರೆದ ಮನಸ್ಸಿದೆ. ಆದರೆ ಇದಕ್ಕೆ ಏನು ಕಾರಣವೆಂದು ಹೇಳಿದರೆ, ಇವತ್ತು ನಮಗೆ, ತ್ರೀಸ್ಟಾರ್, ಫೈವ್ ಸ್ಟಾರ್, ಕಲ್ಚರ್ ಬೇಡ. ಚಿಕ್ಕಚಿಕ್ಕ ಎರಡು-ಮೂರು-ರೂಮುಗಳು ಇರುವ ಜಾಗವನ್ನು ಮಾಡೋಣ. We have declare d tourism as an Industry. The entire objective is that the Govt should provide the basic infra-

structure and hand it over to private entrepreneur, so that they can run better. ಇಂಥ ಒಂದು ವ್ಯವಸ್ಥೆಯನ್ನು ನಿರ್ಮಾಣ ಮಾಡಲಿಕ್ಕೆ ಪಾಲಿಸಿ ಡಿಸಿಷನ್ ತೆಗೆದು ಕೊಂಡಿರುವುದರಿಂದ ಅದಕ್ಕೋಸ್ಕರವಾಗಿ ಇದು ಸ್ವಲ್ಪ ಸಹಾಯವಾಗುತ್ತದೆ. ವೆಸ್ಟರ್ನ್‌ಘಾಟ್ಸ್ ಡೆವಲಪ್‌ಮೆಂಟ್ ಬಗ್ಗೆ ಕೇಂದ್ರ ಸರ್ಕಾರದವರ ಜೊತೆ ಮಾತನಾಡೋಣ. ಏಕೆಂದರೆ these are all hypothetical questions. ಅವರು ಒಪ್ಪಿದರೆ ನಾವು ಮಾಡಬಹುದು. ಅವರು ನಮ್ಮ ಸಲಹೆಗಳನ್ನು ಒಪ್ಪಿದರೆ, ಹಿರಿಯ ಸದಸ್ಯರೂ ಒಪ್ಪಿದರೆ ಚಿಕ್ಕ ಚಿಕ್ಕ ಜಾಗದಲ್ಲಿ ಹಾಲಿಡೇ ರೆಸಾರ್ಟ್ ಬೀಚ್ ರೆಸಾರ್ಟ್ ಮಾಡಲು ಪ್ರಯತ್ನವನ್ನು ಮಾಡೋಣ ಎಂದು ಹೇಳುತ್ತಿದ್ದೇನೆ. ತಾಲ್ಲೂಕು ಸ್ಟೇಡಿಯಂ ಬಗ್ಗೆ ಹೇಳಿದ್ದಾರೆ. ೨೫ ತಾಲ್ಲೂಕು ಕೇಂದ್ರಗಳಲ್ಲಿ ಈ ಕ್ರೀಡಾಂಗಣಗಳನ್ನು ಆರಂಭ ಮಾಡಬೇಕು ಎಂದು ಮೂರು ತಾಲ್ಲೂಕು ಸಮಿತಿಯವರು ಅರ್ಧ ಹಣ ಕೊಟ್ಟರೆ ಇನ್ನುಳಿದ ಎರಡು ಲಕ್ಷ ರೂಪಾಯಿಯನ್ನು ನಾವೇ ಕೊಡತಕ್ಕಂಥ ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ. ಶ್ರೀಮಾನ್ ರಮೇಶ್‌ಕುಮಾರ್‌ರವರು ಮಾತನಾಡಿದರು. ಅವರು ಕೆ.ಎಸ್.ಟಿ.ಡಿ.ಸಿ.ಯಲ್ಲಿ ಸಾಕಷ್ಟು ಅನುಭವಿಸಿದ್ದಾರೆ. ಅದು ನಿಜ. ಹೊರರಾಜ್ಯಗಳಲ್ಲಿ ಲಿಟರೇಚರ್ ಇರುವುದಿಲ್ಲ. ಟೂರಿಸಂ ಒಂದು ರಾಜ್ಯಕ್ಕೇ ಸೀಮಿತ ಅಲ್ಲ. ಇಡೀ ದೇಶಕ್ಕೇ ಸೀಮಿತವಾದಂಥ ಪ್ರಶ್ನೆ. ಹೊರ ರಾಜ್ಯದಲ್ಲಿ ಲಿಟರೇಚರ್ ಇರಬೇಕು. ಅದು ತಪ್ಪು ಎಂದು ಮಾನ್ಯ ಸದಸ್ಯರಲ್ಲಿ ಕ್ಷಮೆಯನ್ನು ಕೇಳುತ್ತೇನೆ. ಇನ್‌ಫರ್ಮೇಷನ್ ವಿಷಯದಲ್ಲಿ ರೈತರಿಗೆ ಒಂದು ಪತ್ರಿಕೆಯನ್ನು ಮೀಸಲಾಗಿಡಿ ಎನ್ನುವ ಬಗ್ಗೆ ಹೇಳಿದ್ದಾರೆ. ಪ್ರಕಾಶ್‌ರವರು ಬೇಕಿದ್ದರೆ ಮಾಡಬಹುದು ನಾವು ಮಾಡುವುದಕ್ಕೂ ತಯಾರಾಗಿದ್ದೇವೆ. ಒಂದು ಮಾತನ್ನು ಬಹಳ ಸೂಚ್ಯವಾಗಿ ಹೇಳಿದ್ದಾರೆ. ಕನ್ನಡವನ್ನು ಪರಭಾಷೆಯಾಗಿ ಮಾಡಬೇಡಿ ಎಂದು ಹೇಳಿದ್ದಾರೆ. ನನಗನ್ನಿಸುತ್ತದೆ. ಈ ನಿಘಂಟುಗಳಿಗೆ ಹಣವನ್ನು ಕೊಡುವುದು ನಿಲ್ಲಿಸಿದರೆ ಒಳ್ಳೆಯದು ಎಂದು ಅನಿಸುತ್ತದೆ. ಈ ನಿಘಂಟುಗಳಿಂದ ಹೊರಬರುವಂಥದ್ದು ಅಭಿಯಂತರ, ಆರಕ್ಷಕ, ಮಹಾರಕ್ಷಕ ಹೊರತು ಬೇರೆಏನೂ ಶಬ್ದಗಳು ಬರುತ್ತಾ ಇಲ್ಲ. ನನ್ನ ಭಾವನೆಗಳಿಗೂ ಅವರ ಅನಿಸಿಕೆಗಳಿಗೂ ಸರಿಯಾಗಿ ಹೊಂದುತ್ತವೆ. ಇದರ ಬಗ್ಗೆ ಒಂದು ಸೂಕ್ತ ತೀರ್ಮಾನವನ್ನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿ ನಾನು ಮಾಡಬೇಕಾಗುತ್ತದೆ, ಖಂಡಿತವಾಗಿ ಯಾವ ರೀತಿಯಲ್ಲಿಯೂ ಕನ್ನಡವನ್ನು ಒಂದು ಪರಭಾಷೆಯಾಗಿ ಮಾಡುವಂತಹ ದಾರಿಯಲ್ಲಿ ನಾವು ಹೋಗುತ್ತಿದ್ದೇವೆಯೇ ಹೊರತು ಕನ್ನಡತನವನ್ನು ಉಳಿಸಿಕೊಳ್ಳತಕ್ಕಂಥ ಪ್ರಯತ್ನವನ್ನು ನಾವು ಹೆಚ್ಚಾಗಿ ಮಾಡಿಲ್ಲ ಎಂದು ನಾನು ಒಪ್ಪಿಕೊಳ್ಳಬೇಕಾಗುತ್ತದೆ. ಭೂಪತಿಯವರು ಮಾತನಾಡಿದರು. ಅವರು ಯುವಕರು, ನನ್ನನ್ನು ಉದ್ಘಾಟನಾ ಮಂತ್ರಿಮಾಡಿ ಎಂದು ಹೇಳಿದ್ದಾರೆ. ನಾನು ಒಂದು ಮಾತು ಹೇಳುತ್ತೇನೆ. ನಾನು ೫ ವರ್ಷಗಳ ಕಾಲ ಶಾಸಕನಾಗಿದ್ದೆ ನಿಮ್ಮ ತರಹ ನಾವೂ ೨೦ ಜನ ಇದ್ದದ್ದು ಆಗಲೂ ಕೂಡಾ ಮಂತ್ರಿಗಳನ್ನು ಕರೆಯುತ್ತಿರಲಿಲ್ಲ. ಜೀವರಾಜ ಆಳ್ವರವರನ್ನಾಗಿ ಕರೆಯುತ್ತಿದ್ದರು. ಹಾಗೆ ಸಭೆ ಸಮಾರಂಭಗಳಿಗೆ ಭೂಷಣ ಪ್ರಾಯರಾಗಿರಬೇಕು ಎನ್ನುವ ಮಾತಿದೆ. ಅದಕ್ಕೆ ನನ್ನಲ್ಲಿ ಭೂಷಣ ಪ್ರಾಯತೆ ಇದೆ ಎಂದು ಕಾಣುತ್ತದೆ. ಅದು ಮಂತ್ರಿಯಾಗಿ ಅಲ್ಲ. ಹಲವಾರು ಉದ್ದಿಮೆಗಳಿಗೆ ನನ್ನನ್ನು ಉದ್ಘಾಟನೆಗೆ ಕರೆದಿದ್ದಾರೆ. ಚನ್ನಾಗಿ ಕಾಣುತ್ತೇನೆ ಎಂದು ಕಾಣುತ್ತದೆ. ಬಂದು ಸಭೆ ಸಮಾರಂಭಗಳಿಗೆ ಕರೆಯುತ್ತಾರೆ. ಹೋಗುತ್ತೇನೆ ಕೈಗುಣ ಚೆನ್ನಾಗಿದೆಯೆಂದೋ ಅಥವಾ ಚೆನ್ನಾಗಿ ಕಾಣುತ್ತಾರೆಂದೋ ಕರೆಯುತ್ತಿದ್ದಾರೆ. ಅವರ ಸಂತೋಷಕ್ಕಾಗಿ ಹೋಗುತ್ತಿದ್ದೇನೆ. ನೀವೂ ಚೆನ್ನಾಗಿ ಮಾತಾಡಿ. ಇನ್ನು ಚೆನ್ನಾಗಿ ಕೆಲಸ ಮಾಡಿ, ನಿಮ್ಮನ್ನೂ ಕರೆಯುತ್ತಾರೆ. ಹತ್ತಾರು ಬಾರಿ ಕರೆಯುತ್ತಾರೆ ಸಾವಿರಾರು ಬಾರಿ ಕರೆಯುತ್ತಾರೆ. ಉದ್ಘಾಟನೆ ಆದಂಥ ಜಾಗತಿಕ ದಾಖಲೆಯನ್ನು ನೀವು ಮಾಡಿ ಎಂದು ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎನ್. ನಾಯಕ್.—ತನ್ನನ್ನು ತಾನು ಹೊಗಳಿಕೊಳ್ಳುವವರಿಗೆ ಏನೆಂದು ಹೇಳಬೇಕು ? ಕರೆದದ್ದು ಯಾರು ? ಯುವಕ ಸಂಘದವರೋ ? ಮಹಿಳಾ ಮಂಡಲಿಯವರೋ ? ಯಾರು ಕರೆದದ್ದು ನಿಮಗೆ ?

ಅಧ್ಯಕ್ಷರು.—ನಾಯಕರೇ, ನೀವು ಕುಳಿತುಕೊಳ್ಳಿ.

ಶ್ರೀ ಜೀವರಾಜ ಆಳ್ವ.—ಹಿರಿಯ ಸದಸ್ಯರಾದ ಮಾನ್ಯ ವೆಂಕಟರಾಮಯ್ಯನವರು ಸಬ್ಸಿಡಿ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಬ್ಲೂಫಿಲಂ ಮೆನೇಸ್ ಬಗ್ಗೆ ಮಾತುಗಳನ್ನು, ಮತ್ತು ಸಲಹೆಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಮ್ಮ ಪರಿವಿಧಿಯೊಳಗೆ ಏನೊಂದು ಡಿಸಿಪ್ಲಿನರಿ ಆ್ಯಕ್ಷನ್ ತೆಗೆದುಕೊಳ್ಳಬಹುದೊ ಅದನ್ನು ತೆಗೆದುಕೊಳ್ಳುತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಟಿಕೆಟ್ ದರ ಜಾಸ್ತಿಯಾಗಿರುವ ಬಗ್ಗೆ ಹೇಳಿದರು. ಇದಕ್ಕಾಗಿ ಫಿಲಂ ಛೇಂಬರ್ ಆಫ್ ಕಾಮರ್ಸ್ ಮತ್ತು ಥಿಯೇಟರ್ ಓನರ್ಸ್‌ನನ್ನು ಕರೆದು ಈ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ. ಹಿರಿಯ

ಸದಸ್ಯರಾದ ಶ್ರೀ ಕೆ.ಹೆಚ್. ಪಾಟೀಲರು ರೈತರಿಗೆ, ಕೃಷಿ ತಜ್ಞರಿಗೆ ಗೌರವಧನ, ಮಾಸಾಶನ ಕೊಡಬೇಕು ಎಂದು ಹೇಳಿದ್ದಾರೆ. ಆ ಮಾತನ್ನು ಪೂರ್ಣವಾಗಿ ಒಪ್ಪುತ್ತೇನೆ. ಕೆಲವರಿಗೆ ಈಗಾಗಲೇ ಮಾಸಾಶನ, ಗೌರವಧನವನ್ನು ಕೊಡುತ್ತಿದ್ದೇವೆ. ರಾಜ್ಯ ಪ್ರಶಸ್ತಿಯನ್ನು ಸಹಾ ಕೊಟ್ಟಿದ್ದೇವೆ. ಹೊಸ ವ್ಯಕ್ತಿಗಳ ಹೆಸರುಗಳು ಯಾವುದಾದರೂ ಇದ್ದರೆ ಮಾನ್ಯ ಸದಸ್ಯರು ಅದನ್ನು ತಿಳಿಸಿದರೆ ಅವರಿಗೂ ಸಹ ಕೊಡುತ್ತೇನೆ. ಕೃಷಿ ತಜ್ಞರಿಗೂ ಖಂಡಿತಾ ಕೊಡುತ್ತೇವೆ, ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿ ಯಾವ ಕೃಷಿಕನಿಗೂ ಇದುವರೆಗೂ ಬಂದಿಲ್ಲ.

ಶ್ರೀ ಜೀವರಾಜ ಆಳ್ವ.—ಕಾತರ್‌ಕೀಯವರಿಗೆ ಕೊಟ್ಟಿದ್ದೇವೆ. ಮಾನ್ಯ ಮಿತ್ರರಾದ ನೀಲಕಂಠಪ್ಪನವರು ನಿನ್ನೆ ಬಹಳ ಟೀಕೆ, ಹೊಗಳಿಕೆ ಮಾಡಿದರೂ, ಎರಡೂ ಜೊತೆ ಜೊತೆಯಾಗಿತ್ತು. ಇದು 'ಬೆರಳ್‌ಗೆ ಕೊರಳ್' ಎಂದು ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮತ್ತು ಎಲ್ಲರಲ್ಲೂ ವಿನಯಪೂರಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ರಾಷ್ಟ್ರಕವಿ ಕುವೆಂಪುರವರ ಹಳಗನ್ನಡದ ಬೆರಳ್‌ಗೆ ಕೊರಳ್ ಎಂಬ ಚಿತ್ರ ತಯಾರಾಗಿ, ಅದಕ್ಕೆ ೫೦ ಪರ್ಸೆಂಟ್ ಸಬ್ಸಿಡಿ ಕೊಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿತ್ತು, ಹಾಗೂ ಸಬ್ಸಿಡಿಯನ್ನು ಹೆಚ್ಚು ಕೊಡುತ್ತಿದ್ದೇವೆ. ಯಾರಿಗೆ ಎಕ್ಸೆಂಪ್‌ಷನ್ ಕಾರ್ಡು ಕೊಡಬಾರದು ಎಂದಿದ್ದರೂ ಕೂಡ ಹಳೆಗನ್ನಡದಲ್ಲಿ ಒಬ್ಬ ವ್ಯಕ್ತಿ ಬಹಳ ಕಷ್ಟಪಟ್ಟು ಮಾಡಿದ್ದಾರೆ. ಅದು ನಾವೆಲ್ಲಾ ಹೆಮ್ಮೆ ಪಡತಕ್ಕ ಚಿತ್ರ. ಅದಕ್ಕೆ ಬ್ಯಾಂಕಿನವರು ಅಂದರೆ, ಮಾನ್ಯ ರಘುಪತಿಯವರು ಸಾಲ ಕೊಡಿಸಿದ್ದಾರೆ. ಆದರೆ, ಅದನ್ನು ರಿಲೀಸ್ ಮಾಡುವಂತಹ ಪರಿಸ್ಥಿತಿಯಲ್ಲಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಈ ಸಭೆಯ ಮೂಲಕ ಮತ್ತು ತಮ್ಮ ಮೂಲಕ ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಅವರಿಗೆ ಈ ಸಾರಿ ಎಕ್ಸೆಂಪ್‌ಷನ್ ಕೊಡಬೇಕೆಂದು ಮುಖ್ಯಮಂತ್ರಿಯವರಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದನ್ನು ಮಾಡುತ್ತಾರೆಂಬ ನಂಬಿಕೆ ನನಗಿದೆ. ಜಿಲ್ಲಾ ಪರಿಷತ್ತುಗಳಿಗೆ ಹೆಚ್ಚು ಗಮನಕೊಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಜಿಲ್ಲಾ ಕೇಂದ್ರದಲ್ಲಿ ಜನಪದ ಸಾಹಿತ್ಯಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ರಾಷ್ಟ್ರದಲ್ಲಿ ಎಲ್ಲೂ ಜನಪದ ಮತ್ತು ಯಕ್ಷಗಾನ ಅಕಾಡೆಮಿ ಎಲ್ಲೂ ಇಲ್ಲ. ಅದನ್ನು ಇಲ್ಲಿ ಸೆಟಪ್ ಮಾಡಿದ್ದೇವೆ. ಪ್ರತಿಯೊಂದಕ್ಕೂ ಕೂಡ ನಾವು ಅಕಾಡೆಮಿ ಸ್ಥಾಪನೆ ಮಾಡಿ ಬಹಳಷ್ಟು ಹಣವನ್ನು ಒದಗಿಸಿದ್ದೇವೆ. ಜನಪದ ಅಕಾಡೆಮಿ ಬಹಳ ಕೆಲಸ ಮಾಡುತ್ತಾ ಇದೆ. ಇದಕ್ಕೆ ೧೦-೧೨ ಲಕ್ಷ ರೂಪಾಯಿ ಒದಗಿಸಿದ್ದೇವೆ. ಇನ್ನೂ ಈ ವರ್ಷದಲ್ಲಿ ೨-೩ ಲಕ್ಷ ಜಾಸ್ತಿ ಬೇಕಾದರೂ ಒದಗಿಸುತ್ತೇವೆ. ಇನ್ನು, ಈ ವರ್ಷ ಹೆಚ್ಚಿನ ಹಣ ಒದಗಿಸಲು ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಎನ್. ಎಸ್. ಗೌಡರವರು ದುಡಿಯುವ ಜನರ ಸಾಹಿತ್ಯದ ಬಗ್ಗೆ ಹೆಚ್ಚು ಗಮನಕೊಡಬೇಕೆಂದು ಹೇಳಿದ್ದಾರೆ. ಪುಸ್ತಕ ನಿಗಮ ಮಾಡಬೇಕೆಂದು ಮಾನ್ಯ ಜಿ. ನಾರಾಯಣ ಕುಮಾರ್‌ರವರು ಸಲಹೆ ಮಾಡಿದ್ದಾರೆ. ಈ ದುಡಿಯುವ ಜನರ ಬಗ್ಗೆ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಶ್ರೀ ಆರ್. ವೆಂಕಟರಾಮಯ್ಯನವರೂ ಸಹ ಇಂತಹ ಸಾಹಿತ್ಯಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕೆಂದು, ಆ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದೂ ಹೇಳಿದ್ದಾರೆ. ನಾವು ಈ ವರ್ಷ ಅದನ್ನು ತೆಗೆದುಕೊಳ್ಳುತ್ತಿದ್ದೇವೆ. ಹಿರಿಯರಾದ ಮಾನ್ಯ ಇದಿನಬ್ಬನವರು ಚೆನ್ನಾಗಿ ಮಾತನಾಡಿದ್ದಾರೆ. ಅವರು ಈ ಇಲಾಖೆಗೆ ಒದಗಿಸಿದ ಹಣವು ಕಡಿಮೆ ಎಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಆದರೆ ಅವರ ವಕಾಲತ್ತಿನಿಂದ ಇನ್ನೂ ಹೆಚ್ಚು ಹಣವನ್ನು ಮಾನ್ಯ ಮುಖ್ಯಮಂತ್ರಿಗಳು ಒದಗಿಸಿದರೆ ಜಾಸ್ತಿ ಕೆಲಸಮಾಡಬಲ್ಲೆ ಎಂಬ ಮಾತನ್ನು ಹೇಳುತ್ತೇನೆ. ಇನ್ನು ಕನ್ನಡ ಕಾವಲು ಸಮಿತಿಯ ಬಗ್ಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಕನ್ನಡ ಸಾಹಿತ್ಯ ಪರಿಷತ್ತಿನ ವಾತಾವರಣದ ಬಗ್ಗೆ ಹಾಗೂ ಅಲ್ಲಿ ನಡೆಯುತ್ತಿರುವ ರಾಜಕೀಯದ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಅದು ಒಂದು ಸ್ವಾಯತ್ತ ಸಂಸ್ಥೆ ಇದು ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿದೆ. ಅಲ್ಲಿ ಏನಾದರೂ ತಪ್ಪುಗಳಿದ್ದರೆ, ಅಥವಾ ನ್ಯೂನ್ಯತೆ ಇದೆ ಎಂದು ತಿಳಿಸಿದರೆ, ಅದನ್ನು ನಿಲ್ಲಿಸುತ್ತೇನೆ. ಹಾಗೂ ಇದರ ಬಗ್ಗೆ ಹಲವಾರು ಹಿರಿಯ ಸಾಹಿತಿಗಳು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಇದರ ಬಗ್ಗೆ ಶೀಘ್ರವಾಗಿ ತೀರ್ಮಾನವನ್ನು ಮುಖ್ಯಮಂತ್ರಿಗಳು ತೆಗೆದುಕೊಳ್ಳುತ್ತಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಜನಪದ ಪತ್ರಿಕೆ ಚೆನ್ನಾಗಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ ಮತ್ತು ಹೊರಗೆ ಬಹಳ ಚೆನ್ನಾಗಿದೆ, ಹೊರಗೆ ಸಿಂಗಾರ ಒಳಗೆ ಗೋಳಿಸೊಪ್ಪು ಎಂದು ಹೇಳಿದ್ದಾರೆ. ಇವತ್ತು ದಿ ಎಂಟೈರ್ ಕಾನ್ಸೆಪ್ಟ್ ಆಫ್ ದಿ ಡಿಪಾರ್ಟ್‌ಮೆಂಟ್ ಹ್ಯಾಸ್‌ಬೀನ್ ಛೇಂಜ್ಡ್. ಈ ವಾರ್ತಾ ಇಲಾಖೆಯ ಪೂರ್ತಿ ಕಾನ್ಸೆಪ್ಟ್‌ನ್ನು

ಫೇಜ್ ಮಾಡಿದ್ದೇವೆ. ಇಮೇಜ್ ಬಿಲ್ಡಿಂಗ್ ಫಿಲಾಸಫಿ ನಮ್ಮಲ್ಲಿ ಇಲ್ಲ. ಆದರೆ ಇನ್‌ಫಾರ್ಮೆಟಿವ್ ಜನರಿಗೆ ಏನೇನು ಕೆಲಸಗಳಾಗಬೇಕು ಮತ್ತು ಸರ್ಕಾರ ಏನೇನು ಕೆಲಸ ಮಾಡಿದೆ, ಅದನ್ನು ಹೇಗೆ ಹೆಚ್ಚಿಸಿಕೊಳ್ಳಬೇಕೆಂಬ ಬಗ್ಗೆ ಹೆಚ್ಚು ಸ್ಟ್ರೆಸ್ ಮಾಡುತ್ತಿದ್ದಾರೆ. ಶ್ರೀ ಉಮರಬ್ಬನವರೂ ಸಹ ಈ ಬೇಡಿಕೆಗಳ ಬಗ್ಗೆ ಮಾತನಾಡಿದ್ದಾರೆ, ಅವರಿಗೆ ಒಂದು ಮಾತು ಹೇಳುತ್ತೇನೆ. ಈ ಜಾಹಿರಾತಿನ ಬಗ್ಗೆ ಹೇಳಬೇಕಾದರೆ. ಒಂದೇ ಒಂದು ಇನ್‌ಸರ್‌ಶನ್ ಇನ್ ದಿ ನ್ಯಾಷನಲ್ ಡೈಲೀಸ್‌ನಲ್ಲಿ ಕೊಡಬೇಕಾದರೆ ೧೬ ಲಕ್ಷ ಆಗುತ್ತದೆ. ಆದ್ದರಿಂದ, ವಿಶ್ವ ಕನ್ನಡ ಸಮ್ಮೇಳನದ ಬಗ್ಗೆ ಮಾಡಿದ ಪುಸ್ತಕದ ಖರ್ಚು ಅಷ್ಟು ದೊಡ್ಡ ಮೊತ್ತವಲ್ಲವೆಂದು ನನ್ನ ಭಾವನೆ. ಇನ್ನು ತುಂಗಳ್‌ರವರು ಮಾತನಾಡಿ, ಐಪಿಎಸ್ ಅಧಿಕಾರಿಗಳನ್ನು ಈ ವಾರ್ತಾ ಇಲಾಖೆಯ ನಿರ್ದೇಶಕರಾಗಿ ಏತಕ್ಕೆ ಮಾಡಿದ್ದಾರೆ ಎಂದು ಕೇಳಿದ್ದಾರೆ. ಅವರು ಪತ್ರಿಕಾ ಸಂಪಾದಕರಾಗಿಯೂ ಚೆನ್ನಾಗಿ ಕೆಲಸ ಮಾಡಿದ್ದಾರೆ. ಇದಕ್ಕೆ ಕಾರಣವಿಷ್ಟೆ. ಅವರು ಐಪಿಎಸ್ ಎಂದು ಡೈರೆಕ್ಟರ್ ಆಫ್ ಇನ್‌ಫರ್‌ಮೇಶನ್ ಆಗಿ ಮಾಡಲಿಲ್ಲ. ಸಾಹಿತ್ಯದ ಬಗ್ಗೆ ಒಲವು, ಪತ್ರಿಕೆಗಳ ಬಗ್ಗೆ ಹೆಚ್ಚಿನ ಒಲವು ಅವರಿಗೆ ಇರುವುದರಿಂದ, ಅವರನ್ನು ಸಾಹಿತಿಗಳು ಮತ್ತು ನಾಟಕಕಾರರು ಆಗಿರುವುದರಿಂದ ಅವರನ್ನು ಈ ಇಲಾಖೆಯ ಡೈರೆಕ್ಟರ್ ಆಗಿ ಮಾಡಿದ್ದೇವೆ. ಇದರಲ್ಲಿ ಹಲವಾರು ತೊಂದರೆಗಳು, ತಪ್ಪುಗಳು ಮತ್ತು ನ್ಯೂನತೆಗಳಿವೆ. ಸಣ್ಣ ಪತ್ರಿಕೆಗಳವರು ಹತ್ತಾರು ಸಮಾವೇಶಗಳನ್ನು ನಡೆಸುತ್ತಾರೆ, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳೂ ಹೋಗುತ್ತಾರೆ, ನಾನೂ ಹೋಗುತ್ತೇನೆ. ಇಂತಹ ಅಧಿಕಾರಿಗಳು ೧೦ ಪತ್ರಿಕೆಗಳನ್ನು ನಡೆಸುತ್ತಿದ್ದಾರೆ. ಹಾಗೆ ಮಾಡುತ್ತಿದ್ದಾರೆ, ಹೀಗೆ ಮಾಡುತ್ತಿದ್ದಾರೆ, ಸಾವಿರಾರು ಪತ್ರಿಕೆಗಳವರಿಗೆ ಇದರಿಂದ ಮೋಸ ಆಗುತ್ತದೆ ಇತ್ಯಾದಿ ಹೇಳುತ್ತಾರೆ. ಆದರೆ ಇವುಗಳ ಬಗ್ಗೆ ಒಂದು ಸ್ಪೆಸಿಫಿಕ್ ಇನ್‌ಸ್ಟ್ಯಾನ್ಸ್ ಕೊಡಿ ಎಂದರೆ, ಅದನ್ನು ಕೊಡಲು ಯಾರೂ ತಯಾರಾಗಿಲ್ಲ. ಅದನ್ನು ಪರಿಪಡಿಸಬೇಕೆಂಬ ಒಂದೇ ಒಂದು ದೃಷ್ಟಿಯಿಂದ ಶ್ರೀ ಕೃಷ್ಣಮೂರ್ತಿಯವರನ್ನು ಈ ಇಲಾಖೆಗೆ ತಂದಿದ್ದೇವೆ. ಅವರಿಂದ ಇಲ್ಲಿಯ ಕೆಲಸಗಳು ಸರಿಯಾಗಿ ನಡೆಯುತ್ತಿವೆ ಎಂದು ನಂಬಿದ್ದೇನೆ. ಒಂದು ಪತ್ರಿಕೆಗೆ ೬೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ತುಂಗಳ್‌ರವರು ಹೇಳಿದರು. ಅದು ೬೦ ಲಕ್ಷ ಅಲ್ಲ. ೬ ಲಕ್ಷ ಆಗಿರಬಹುದು. ಏತಕ್ಕೆಂದರೆ, ನಮ್ಮ ನಮ್ಮ ಒಟ್ಟು ಬಜೆಟ್ ೯೦ ಲಕ್ಷ ಅಥವಾ ಒಂದು ಕೋಟಿ ರೂಪಾಯಿಗೆ ಹೋಗುತ್ತದೆ. ಆದ್ದರಿಂದ ಅವರು ತಪ್ಪು ತಿಳುವಳಿಕೆಯಿಂದ ಆ ರೀತಿ ಹೇಳಿದ್ದಾರೆ ಎಂದು ಕಾಣುತ್ತದೆ. ಆದರೆ, ಕೆಲವು ಕಡೆ ನ್ಯೂನತೆ ಆಗಿವೆ, ಅದನ್ನು ನಾನು ಒಪ್ಪುತ್ತೇನೆ. ಎಲ್ಲೆಲ್ಲಿ ನ್ಯೂನತೆಗಳಿವೆ ಅದನ್ನು ಡಿಫೆಂಡ್ ಮಾಡಿಕೊಳ್ಳಲು ಹೋಗುವುದಿಲ್ಲ. ನಿಮ್ಮಿಂದ ತಪ್ಪುಗಳಾಗಿದ್ದರೆ ಅದನ್ನು ಸರಿಮಾಡುವುದಕ್ಕೆ ಆ ಸಮಿತಿಯವರು ವರದಿ ಕೊಟ್ಟರೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಶ್ರೀ ಶಿವನಂಜಪ್ಪನವರು ಗುಬ್ಬಿವೀರಣ್ಣನವರ ಊರಿನಲ್ಲಿ ಅವರ ಹೆಸರಿನಲ್ಲಿ ಒಂದು ಸ್ಮಾರಕವನ್ನು ನಿರ್ಮಾಣ ಮಾಡಬೇಕೆಂದು ಶ್ರೀ ಶಿವನಂಜಪ್ಪನವರು ಹೇಳಿದರು. ಬೆಂಗಳೂರು ನಗರದಲ್ಲಿ ಕಾರಣಾಂತರದಿಂದ ಕಾರ್ಪೊರೇಷನ್‌ನವರು ಒಂದು ಸೂಕ್ತ ಕ್ರಮ ತೆಗೆದುಕೊಳ್ಳದೇ ಇರುವುದರಿಂದ ಆ ರಂಗಮಂದಿರ ನಿರ್ಮಾಣವಾಗಿಲ್ಲ. ಇದು ಈ ವರ್ಷ ಆಗುತ್ತದೆ. ಅದನ್ನು ಮಾಡಿದ್ದಾರೆ. ಗುಬ್ಬಿಯಲ್ಲಿ ಸರ್ಕಾರದ ಇಲಾಖೆಯ ಪರವಾಗಿ ಸುಮಾರು ಒಂದು ಲಕ್ಷ ರೂಪಾಯಿ ಕೊಡುತ್ತೇವೆ. ಅವರದ್ದೂ ಸೇರಿಸಿ, ಒಂದು ಬಯಲು ರಂಗಮಂದಿರವನ್ನು ನಿರ್ಮಾಣಮಾಡಬಹುದೆಂದು ನಾನು ಭಾವಿಸುತ್ತೇವೆ, ಶ್ರೀ ಜಯಕುಮಾರ್‌ರವರು ಶ್ರೀ ಎಂ. ಹೆಚ್. ಕೃಷ್ಣರವರ ಸಂಶೋಧನಾ ಸಾಹಿತ್ಯ ಮುದ್ರಿಸಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆ ಕೆಲಸವನ್ನು ಮಾಡುತ್ತಾರೆ. ನಾವು ಈ ವರ್ಷ ತೆಗೆದುಕೊಳ್ಳಬೇಕಾದ ಹಲವಾರು ಕ್ರಮಗಳಲ್ಲಿ ಮುಖ್ಯವಾದದ್ದು ಕವಿಶೈಲ. ಡಾ॥ ಕುವೆಂಪುರವರ ಜನ್ಮಸ್ಥಳವಾದ ಕುಪ್ಪಳ್ಳಿಯಲ್ಲಿ ಅವರ ಸಾಹಿತ್ಯದ ಬಗ್ಗೆ ಒಂದು ಕವಿ ಶೈಲ ಟ್ರಸ್ಟ್ ನಿರ್ಮಾಣ ಮಾಡಿದ್ದೇವೆ. ಆ ಪೂರ್ಣ ಕ್ಷೇತ್ರವನ್ನು ಇದರಲ್ಲಿ ಉಪಯೋಗಿಸಿಕೊಳ್ಳುತ್ತೇವೆ. ಇದರಲ್ಲಿ ಅಫ್‌ರ್‌ಸ್ಟೇಷನ್ ಬರುತ್ತವೆ, ಪ್ರಿಸರ್ವೇಶನ್ ಪ್ರೋಗ್ರಾಂ ಬರುತ್ತದೆ. ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಏನಾದರೂ ಶಾಶ್ವತವಾದ ಚಾರಿತ್ರಿಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದಾಗ, ಆ ಉದ್ದೇಶದಿಂದ ನಾವು ರಂಗಮಂದಿರವನ್ನು ನಿರ್ಮಾಣ ಮಾಡಿದ್ದೇವೆ. ಅದನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದರ ಬಗ್ಗೆ ಯೋಚಿಸುತ್ತಿದ್ದೇವೆ ಕನ್ನಡ ಪುಸ್ತಕಗಳ ಬಗ್ಗೆ, ಕನ್ನಡ ಭಾರತಿ ಎಂಬ ಕಾರ್ಯಕ್ರಮವನ್ನು ನಾವು ಆರಂಭ ಮಾಡುತ್ತಿದ್ದೇವೆ. ಇದರಲ್ಲಿ ಶ್ರೀ ವೀರಪ್ಪ ಮೊಯಿಲಿಯವರು ಒಂದು ಸಲಹೆ ಕೊಟ್ಟಿದ್ದಾರೆ, ಕನ್ನಡ ಅಧ್ಯಯನ ಕೇಂದ್ರಗಳಿರುವುದರಿಂದ ಈ ಕೆಲಸ ಡ್ಯೂಪ್ಲಿ

ಕೇಶನ್ ಆಗಬಹುದು ಎಂದು, ಆಗುವುದಿಲ್ಲ. ಕನ್ನಡದ ಕೆಲಸವನ್ನು ಎಷ್ಟು ಮಾಡಿದರೂ ಸಾಲುವುದಿಲ್ಲ. ಇದನ್ನು ಮಾಡಬೇಕೋ. ಬೇಡವೋ ಎಂಬ ಪ್ರಶ್ನೆ ಇತ್ತು. ಈಗ ಕನ್ನಡದಲ್ಲಿ ಪುರಂದರ ಸಾಹಿತ್ಯ, ದಾಸ ಸಾಹಿತ್ಯ. ಬಸವೇಶ್ವರ ಸಾಹಿತ್ಯ ಮುಂತಾದವುಗಳನ್ನು ಬೇರೆ ಭಾಷೆಗಳಿಗೆ ತರ್ಜುಮೆ ಮಾಡುವ ಕೆಲಸ ಮತ್ತಿತರ ಭಾಷೆಗಳಿಂದ ಕನ್ನಡಕ್ಕೆ ತರ್ಜುಮೆ ಮಾಡಿ, ಕನ್ನಡದ ಸಿರಿವಂತಿಕೆಯನ್ನು ಹೆಚ್ಚಿಸ ಬೇಕೆಂಬ ಕಾರ್ಯವನ್ನು ಕನ್ನಡ ಭಾರತಿ ಸಂಸ್ಥೆಯಿಂದ ಮಾಡುತ್ತೇವೆ. ಕನ್ನಡ ಪುಸ್ತಕ ನಿಗಮಕ್ಕೆ ಶ್ರೀ ಜಿ. ನಾರಾಯಣ್‌ರವರು ಕೊಟ್ಟಿಂತಹ ಸಲಹೆಯನ್ನು ಪೂರ್ಣವಾಗಿ ಒಪ್ಪಿಕೊಂಡಿದ್ದೇವೆ. ಈ ವರ್ಷ ಕನ್ನಡ ಪುಸ್ತಕ ನಿಗಮವನ್ನು ಆರಂಭ ಮಾಡುತ್ತೇವೆ. ಈ ಪುರಂದರದಾಸರ ಐದನೇ ಶತಮಾನೋತ್ಸವವನ್ನು ಹಂಪೆಯಲ್ಲಿ ಆಚರಿಸಬೇಕಾಗಿತ್ತು. ಕಾರಣಾಂತರದಿಂದ ಬರಗಾಲದ ಪ್ರಯುಕ್ತ, ಹಾಗೂ ಕನ್ನಡ ಸಾಹಿತ್ಯ ಸಮ್ಮೇಳನ ಇತ್ತೀಚೆಗೆ ಆಗಿದ್ದುದರಿಂದ, ಇದಕ್ಕೆ ಬಹಳ ಹಣ ವೆಚ್ಚ ಮಾಡುತ್ತಾರೆಂಬ ಟೀಕೆ ಬರುವುದರಿಂದ ಅದನ್ನು ಈ ವರ್ಷ ಮಾಡಲಾಗಲಿಲ್ಲ. ಬಹಳ ಚಿಕ್ಕ ರೀತಿಯಲ್ಲಿ ಬೆಂಗಳೂರಿನಲ್ಲಿ ಇದನ್ನು ಮಾಡಿದ್ದೇವೆ. ಇದನ್ನು ಹಂಪೆಯಲ್ಲಿ ಪರ್ಮನೆಂಟ್ ಪ್ರಾಜೆಕ್ಟ್ ಆಗಿ ತೆಗೆದುಕೊಳ್ಳುತ್ತಿದ್ದೇವೆ. ಅದನ್ನು ಶ್ರೀ ಪ್ರಕಾಶ್‌ರವರ ನೇತೃತ್ವದಲ್ಲಿ ಪುರಂದರದಾಸರ ಐದನೇ ಶತಮಾನೋತ್ಸವವನ್ನು ಬರುವ ವರ್ಷದಲ್ಲಿ ವಿಜೃಂಭಣೆಯಿಂದ ಮಾಡುವ ಕಾರ್ಯಕ್ರಮವನ್ನು ಇಟ್ಟು ಕೊಂಡಿದ್ದೇವೆ. ಜೊತೆಗೆ ವೆಂಕಟಪ್ಪನವರ ಶತಮಾನೋತ್ಸವವನ್ನು ಸಹ ಈ ಸಾರಿ ಮಾಡುತ್ತಿದ್ದೇವೆ. ಹೊಸ ಕಲಾ ಶಿಕ್ಷಣಕ್ಕೆ ಏಕ ರೂಪ ವ್ಯವಸ್ಥೆ ಕೊಡಬೇಕೆಂದು ಮಾಡಿದ್ದೇವೆ. ಬೇರೆ ಬೇರೆ ಡಿಪಾರ್ಟ್‌ಮೆಂಟ್‌ನಲ್ಲಿ, ಬೇರೆ ಬೇರೆ ಕಲಾ ಶಿಕ್ಷಣ. ಬೇರೆ ಬೇರೆ ವ್ಯವಸ್ಥೆಯಲ್ಲಿದೆ. ಇನ್ನು ವಸ್ತು ಸಂಗ್ರಹಾಲಯದ ಬಗ್ಗೆ ಕೆಳದಿಯಲ್ಲಿ, ಶ್ರವಣಬೆಳಗೊಳದಲ್ಲಿ ಮತ್ತು ಗದಗ್‌ನಲ್ಲಿ ಒಂದು ವಸ್ತು ಸಂಗ್ರಹಾಲಯವನ್ನು ಈ ವರ್ಷದಿಂದ ಪ್ರಾರಂಭ ಮಾಡುತ್ತಿದ್ದೇವೆ. ಅದನ್ನು ಒಂದೇ ವ್ಯವಸ್ಥೆಯಲ್ಲಿ ಮಾಡಬೇಕೆಂದು ಮಾಡಿದ್ದೇವೆ ಕೇಂದ್ರ ಸರ್ಕಾರದ ವತಿಯಿಂದ ಭಾರತದಲ್ಲೆ ಪ್ರಪ್ರಥಮವಾಗಿ ಒಂದು ಸ್ಪೋರ್ಟ್ಸ್ ಹಾಸ್ಟೆಲ್‌ನ್ನು ಬೆಂಗಳೂರಿನಲ್ಲಿ ಆರಂಭಮಾಡಿದ್ದೇವೆ. ಅವರಿಗೆ ಬಿಲ್ಡಿಂಗ್ ಇತ್ಯಾದಿ ಕೊಡಬೇಕು, ಇದಕ್ಕೆ ಬಹಳಷ್ಟು ಖರ್ಚು ಮಾಡಬೇಕಾಗುತ್ತದೆ.

೧೧-೩೦ಎ. ಎಂ.

ಈ ದಿಸೆಯಲ್ಲಿ ಇನ್ನೊಂದು ಮಾತು ಹೇಳುತ್ತೇನೆ. ನೇತಾಜಿ ಇನ್‌ಸ್ಟಿಟ್ಯೂಟ್ ಅಫ್ ಸ್ಪೋರ್ಟ್ಸ್‌ನ್ನು ಸೋವಿಯತ್ ರಷ್ಯಾದವರು ಸ್ಪಿನ್ಸರ್ ಮಾಡಿದ್ದಾರೆ. ಇದು ವಿಶ್ವದಲ್ಲೇ ಅತ್ಯಂತ ಫುಲ್‌ಫ್ಲೆಜ್ಡ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಆಗಿ ನಿರ್ಮಾಣಗೊಳ್ಳುತ್ತದೆ. ಮಾನ್ಯ ರಾಜೀವ್ ಗಾಂಧೀಯವರ ನೇತೃತ್ವದಲ್ಲಿ ಭಾರತಾದ್ಯಂತ ಇವತ್ತು ಹಲವಾರು ಸಾಂಸ್ಕೃತಿಕ ಕೇಂದ್ರಗಳನ್ನು ಪ್ರಾರಂಭ ಮಾಡು ತ್ತಿದ್ದಾರೆ. ರಾಜ್ಯಕ್ಕೆ ಇನ್ನೊಂದು ಬರಬೇಕು ಎನ್ನುವುದು ನನ್ನ ಆಸೆಯಾಗಿದ್ದರೂ ಕೂಡ ನಾವು ಜಗಳ ಆಡಿ ಕೊಂಡರೆ ಅದು ಯಾರಿಗೂ ಬಾರದೆ ಹೋಗಬಹುದು ಎನ್ನುವ ಕಾರಣಕ್ಕಾಗಿ ತಂಜಾವೂರಿನಲ್ಲಿ ಪ್ರಾರಂಭ ಮಾಡಿದ್ದಾರೆ, ಇದರ ಸಬ್ ಸೆಂಟರ್‌ನ್ನು ಬೇರೆ ಕಡೆಗಳಲ್ಲಿ ಮಾಡುವುದಕ್ಕೆ ಒಪ್ಪಿದ್ದಾರೆ. ಅವರು ಮಾಡದೆ ಹೋದರೂ ಕೂಡ ಚಾಲುಕ್ಯ, ಹೊಯ್ಸಳ, ಮತ್ತು ವಿಜಯನಗರ ಸೆಂಟರ್‌ಯೆಂದು ಮಾಡುವುದಕ್ಕೆ ಸರ್ಕಾರ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಆ ಮೇಲೆ ರಾಯಚೂರು ಏರ್ ಮ್ಯಾಪ್‌ನಲ್ಲಿ ಬರುತ್ತದೆ. ಪ್ಯಾಕೇಜ್ ಟೂರ್ ಕೂಡ ಹಂಪೆಯಲ್ಲಿ ಮಾಡಬೇಕೆಂದು ಯೋಜಿಸಿದ್ದೇವೆ. ವೈಲ್ಡ್ ಲೈಫ್ ಟೂರಿಸಂಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಮಾಡಿದ್ದೇವೆ. ಹಲವಾರು ಯೋಜನೆ ಗಳನ್ನು ಈ ಸರ್ಕಾರ ಹಾಕಿಕೊಂಡಿದೆ. ಈವರೆಗೂ ಈ ಸರ್ಕಾರ ಯುವಕರಿಗೆ ಮಾಡಿದಷ್ಟು ಕೆಲಸಗಳನ್ನು ಹಿಂದಿನ ಯಾವ ಸರ್ಕಾರಗಳೂ ಮಾಡಿಲ್ಲವೆಂದು ಹೇಳುತ್ತೇನೆ. ಇವತ್ತು ಈ ಒಂದು ಮಾತನ್ನು ಸಂತೋಷದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಡೈರೆಕ್ಟೋರೇಟ್ ಆಫ್ ಎನ್.ಸಿ.ಸಿ. ನಾಲ್ಕು ವರ್ಷಗಳಿಂದ ಮುಂದುವರಿದುಕೊಂಡು ಬಂದಿತು, ಮಧ್ಯ ಒಂದು ವರ್ಷ ನಿಂತುಹೋಗಿತ್ತು. ಈ ವರ್ಷ ರಿಪಬ್ಲಿಕ್ ಡೇ ಪ್ರೈಮ್ ಮಿನಿಸ್ಟರ್ ಬ್ಯಾನರ್‌ನ್ನು ಗೆದ್ದುಕೊಂಡಿದೆ. ಅವರೂ ಸಹಾ ಚೆನ್ನಾಗಿ ಕೆಲಸ ಮಾಡಿದ್ದಾರೆ. ಇದಕ್ಕೆ ಮಾನ್ಯ ವಿದ್ಯಾಮಂತ್ರಿಗಳೂ ಮತ್ತು ಮುಖ್ಯಮಂತ್ರಿಗಳೂ ಈ ಯುವಕರಿಗೆ ಕ್ರೀಡಾಪಟುಗಳಿಗೆ ಕಾಲೇಜುಗಳಲ್ಲಿ ಸೀಟುಗಳನ್ನು ಕೊಟ್ಟಿದ್ದು ಬಹಳ ಪ್ರೋತ್ಸಾಹ ದಾಯಕವಾಗಿದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಕ್ರೀಡಾ ಪಟುಗಳಿಗೆ ಬೆನೆವೆಲೆಂಟ್ ಫಂಡ್ ಆರಂಭ ಮಾಡಿದ್ದೇವೆ. ಕ್ರೀಡಾ ಪಟುಗಳಿಗೆ ಪೆನ್ಷನ್‌ನ್ನು ಈಗಾಗಲೇ ಕೊಡುತ್ತಿದ್ದೇವೆ.

ವೈದ್ಯಕೀಯ ಸೌಲಭ್ಯದ ಬಗ್ಗೆ ಹೇಳುವುದಾದರೆ ಇತ್ತೀಚೆಗೆ ಒಂದು ಘಟನೆ ನಡೆಯಿತು. ಅದಕ್ಕೆ ಹೇಗೆ ಹಣ ಕೊಡಬಹುದು ಎಂಬುದು ಪ್ರಶ್ನೆ, ಕ್ರೀಡಾಂಗಣದಲ್ಲಿ ಒಬ್ಬ ಕ್ರೀಡಾಪಟುವಿಗೆ ಗಾಯ ವಾಯಿತು. ಹೇಸ್ಟ್ರಾ ಕಮ್ಮಿ ಪ್ಯಾರಾಲೀಸಿಸ್ ತರಹ. ಆ ಪ್ರಸಂಗದಲ್ಲಿ ಹಣ ಕೊಡುವಂತಹ ವ್ಯವಸ್ಥೆಯನ್ನು ವಿಶ್ವವಿದ್ಯಾನಿಲಯದವರು ಒಪ್ಪದೆ ಇರುವುದರಿಂದ ನಾವು ಹಣವನ್ನು ಕೊಡಬೇಕಾದರೆ under what category we should give ಎಂಬ ಪ್ರಶ್ನೆ ಬಂತು. ಅಂತಹ ಒಂದು ವ್ಯವಸ್ಥೆಯನ್ನು ಈ Sportmen Benevalent Fund ಎಂದು ಮಾಡಿ ಮಾಡುತ್ತಿದ್ದೇವೆ. ಕ್ರೀಡಾಪಟ ಗಳಿಗೆ, ಕಲಾವಿದರಿಗೆ ನಿವೇಶನಗಳನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಈಗಾಗಲೇ ಬಿಡಿಎ, ಮತ್ತಿತರ ಕ್ಷೇತ್ರಗಳಲ್ಲಿ ಅದರ ರೂಲ್ಸ್ ಮತ್ತು ರೆಗ್ಯುಲೇಷನ್‌ನನ್ನು ಮಾಡುತ್ತಿದ್ದಾರೆ. ಇವರಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಜೊತೆಗೆ ತಾವು ಸಹಾ ಟೀಕೆ ಮಾಡಿದ್ದೀರಿ. ಟಿ. ವಿ. ಬಗ್ಗೆ ಅವರು ಕೇಳಿದುದರಿಂದ ಬೇಡ. In spite of repeated request to the Centre for a Second Channel ಅಲ್ಲಿಂದ positive response ಏನೂ ಬಾರದೆ ಇರುವುದರಿಂದ ನಾವೇ ಇನ್‌ಫರ್‌ಮೇಷನ್ ಟ್ರಸ್ಟ್ ಎಂದು ಒಂದು ಪ್ರಾಜೆಕ್ಟನ್ನು ಮಾಡಿಕೊಂಡು ಇದರಲ್ಲಿ ಹಲವಾರು ವಿಡಿಯೋಗಳನ್ನು ಒಂದು ನೂರು ಜೀಪುಗಳಿಗೆ ಹಾಕಿ ಪ್ರಥಮ ಹಂತದಲ್ಲಿ ಏನೊಂದು ಈ ಎರಡನೇ ಚಾನಲಿನ ಇಮ್‌ಪ್ಯಾಕ್ಟ್ ಆಗುತ್ತದೆಯೋ ಅದನ್ನೇ ಈ ತರದಿಂದ ಮಾಡಲು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಎರಡನೆಯ ಹಂತದಲ್ಲಿ ಅವನ್ನು ಇನ್ನೂ ಜಾಸ್ತಿ ಮಾಡುತ್ತೇವೆ. ಆದರೆ ಅದನ್ನು ಹೇಳುವುದಕ್ಕೆ ಸಮಯವಿಲ್ಲ. ನನ್ನ ಇಲಾಖೆಯ ಮೇಲೆ ಹೋದ ಸಲ ಇಲಾಖೆಯ ಬೇಡಿಕೆಗಳ ಬಗ್ಗೆ ಮಾತನಾಡುವಾಗ ಐದು ನಿಮಿಷದಲ್ಲಿ ಮಾತನಾಡಿ ಮುಗಿಸಿದೆ. ಆದರೆ ಇವತ್ತು ಸ್ವಲ್ಪ ವ್ಯಂಗ್ಯ ಇತ್ತು. ಅದಕ್ಕೋಸ್ಕರ ಪೂರ್ಣವಾಗಿ ಹೇಳಬೇಕು ಎನ್ನುವ ದೃಷ್ಟಿಯಿಂದ ಯಾವ ಸದಸ್ಯರ ಮನಸ್ಸನ್ನು ನೋಯಿಸಬಾರದೆಂದು ಎಲ್ಲಾ ವಿಚಾರಗಳನ್ನು ಕೂಲಂಕಷವಾಗಿ ತಿಳಿಸಿದ್ದೇನೆ. ಯಾವುದನ್ನೂ ಮುಚ್ಚಿಟ್ಟಿಲ್ಲ. ತೆರೆದ ಪುಸ್ತಕದಂತೆ ಇದೆ. ಆದ್ದರಿಂದ ಎಲ್ಲಾ ಸದಸ್ಯರೂ ಸರ್ವಾನುಮತದಿಂದ ಈ ನನ್ನ ಬೇಡಿಕೆಗಳಿಗೆ ಮಂಜೂರಾತಿಯನ್ನು ನೀಡಬೇಕೆಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ ಈ ಮಲ್ಪೆಯ ಬೀಚ್ ರಿಸಾರ್ಟ್ ಏನು ಉಂಟು ಅದನ್ನು ಕೋ ಆಪರೇಟಿವ್ ಬೇಸಿಸ್ ಸೊಸೈಟಿ ಮಾಡಿಕೊಂಡು ಯಾರಾದರೂ ನಡೆಸಲು ಮುಂದೆ ಬಂದರೆ ಆ ಕಟ್ಟಡವನ್ನು ಬಿಟ್ಟುಕೊಡಲು ಮಂತ್ರಿಗಳು ತಯಾರಾಗಿದ್ದಾರೆಯೇ ಎಂಬುದನ್ನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ, ಈ ಸಲಹೆಯನ್ನು ಪ್ರವಾಸೋದ್ಯಮ ನಿಗಮದ ಅಧ್ಯಕ್ಷರಿಗೆ ಮತ್ತು ಅಧಿಕಾರಿಗಳಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಕಾರ್ಕಳ ತಾಲ್ಲೂಕಿನ ನಂದಳಿಕೆಯಲ್ಲಿ ಲಕ್ಷ್ಮೀನಾರಾಯಣಪ್ಪ ಎಂಬ ಒಬ್ಬ ಶ್ರೇಷ್ಠ ಕವಿ ಇದ್ದರು. ಅವರಿಗಾಗಿ ಅಲ್ಲಿ ಒಂದು ಸ್ಮಾರಕ ಮಾಡಬೇಕೆಂದು ನಾನು ಪ್ರವಾಸೋದ್ಯಮ ಮಂತ್ರಿಯಾಗಿದ್ದಾಗ ಅಲ್ಲಿ ಒಂದು ಜಾಗ ನೋಡಿ ಸ್ವಲ್ಪ ದುಡ್ಡನ್ನು ಅಂದರೆ ಸುಮಾರು ಎರಡು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಎಲ್ಲೆಲ್ಲಿ ಶ್ರೇಷ್ಠ ಕವಿಗಳು ಇದ್ದಾರೆ ಅಲ್ಲೆಲ್ಲಾ ಅವರವರ ಸ್ಮಾರಕ ಮಾಡಬೇಕು ಮತ್ತು ಈ ನಂದಳಿಕೆಯಲ್ಲೂ ನಾವು ಮಾಡಬೇಕೆಂದು ಯೋಜನೆ ಇತ್ತು. ತಾವು ಈಗ ಈ ವರ್ಷ ಅದನ್ನು ಕೈಗೆ ಎತ್ತಿಕೊಳ್ಳುತ್ತೀರಾ ಎಂದು ಕೇಳುತ್ತೇನೆ. ಇನ್ನು ಮಲ್ಪೆ ಮತ್ತು ಮಡಕೇರಿ ಯೋಜನೆಯನ್ನು ಸನ್ಮಾನ್ಯ ಅಜೀಜ್ ಸೇಟ್‌ರವರು ಟೂರಿಸಂ ಮಂತ್ರಿಯಾಗಿದ್ದಾಗ ಅದರ ಎಲ್ಲಾ ಡಿಸೈನ್ ಮಾಡಿ ಮಂಜೂರಾತಿ ಆಗುವುದಕ್ಕೆ ಪ್ರಾರಂಭವಾಗಿತ್ತು. ನಾನು ಇರುವಾಗ ಅದು ಆಗಲಿಲ್ಲ. ಆದರೆ ಅವರು ತೆಗೆದುಕೊಂಡಿದ್ದರಿಂದ ಮತ್ತು ಅದರ ಸ್ವಲ್ಪ ಕೆಲಸ ಮಾಡಿಮಾಡಿದ್ದರಿಂದ ಅದನ್ನು ಪೂರ್ತಿ ಮಾಡೋಣವೆಂದು ನಾವು ಮಡಕೇರಿಯಲ್ಲಿ ಕೆಲಸವನ್ನು ಪೂರ್ತಿ ಮುಗಿಸಿದ್ದೇವೆ. ಮಲ್ಪೆಯಲ್ಲಿ ಮಾತ್ರ ಪೂರ್ತಿ ಮಾಡುವುದಕ್ಕೆ ಆಗಲಿಲ್ಲ. ಏಕೆಂದರೆ ವ್ಯಾಪಕವಾದ ಒಟ್ಟು ಉದ್ಯಮವನ್ನು ಟೂರಿಸಂ ನಿಗಮ ತೆಗೆದುಕೊಂಡಿರುವುದರಿಂದ ಅದನ್ನು ಮಾಡಲು ಬ್ಯಾಂಕುಗಳೂ ಕೂಡ ಮುಂದೆ ಬಂದಿವೆ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಒಬ್ಬ

ಪರಿಣತರು ಇದರ ಬಗ್ಗೆ ಒಂದು ಯೋಜನೆಯನ್ನು ಮಾಡಿದ್ದಾರೆ. ಇದನ್ನು ತಾವು ನಡೆಸಿಕೊಂಡರೆ ಒಳ್ಳೆಯ ಲಾಭದಾಯಕ ಮತ್ತು ಪ್ರಮುಖವಾದುದು ಏಕೆಂದರೆ ಸೈಂಟ್ ಮೇರೀಸ್ ಐಲೆಂಡ್ ಅದರ ಪಕ್ಕದಲ್ಲಿದೆ. ಟೂರಿಸಂ ನಿಗಮದ ದೃಷ್ಟಿಯಲ್ಲಿ ಇದು ಲಾಭದಾಯಕವಾದುದು ಮತ್ತು ಅತ್ಯುತ್ತಮವಾದುದು. ಇದನ್ನು ಇಡೀ ವಿಶ್ವದಲ್ಲೇ ಅತ್ಯಂತ ಪ್ರಮುಖವಾದ ಆಕರ್ಷಣೀಯ ಕೇಂದ್ರ ಮಾಡುವುದಕ್ಕೆ ಸಾಧ್ಯವಿದೆ ಸೈಂಟ್ ಮೇರೀಸ್ ಐಲೆಂಡ್ ಈಗ ಖಾಸಗೀ ವ್ಯಕ್ತಿಗಳ ಕೈಯಲ್ಲಿದೆ. ಸರ್ಕಾರವೇ ಅಂದರೆ ಪ್ರವಾಸೋದ್ಯಮ ಇಲಾಖೆಯೇ ಇದನ್ನು ತೆಗೆದುಕೊಂಡು ಪೂರ್ಣವಾಗಿ ಬೆಳೆಸಬೇಕು ಎಂಬ ಯೋಜನೆಯನ್ನು ನಾವು ಹಾಕಿದ್ದೆವು. ಈ ಯೋಜನೆಯನ್ನು ಟೂರಿಸಂ ನಿಗಮವೇ ತೆಗೆದುಕೊಂಡು ಪೂರ್ತಿ ಮಾಡಬೇಕೆಂದು ಆಗ್ರಹ ಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ಮೈಸೂರಿನಲ್ಲಿದಂತಹ ರಂಗ ಮಂದಿರವನ್ನು ಒಂದು ಪಾಪದ ಕೂಸು ಎಂದು ಆಡಳಿತ ಪಕ್ಷದವರು ಹೇಳಿದರು. ಈ ಪಾಪದ ಕೂಸಿನ ಸೃಷ್ಟಿಕರ್ತ ಸನ್ಮಾನ್ಯ ಮಾಜಿ ಮುಖ್ಯಮಂತ್ರಿಯವರನ್ನು ತಾವು ಸನ್ಮಾನ ಮಾಡಿದ್ದೀರಿ, ಅವರನ್ನು ಕರೆದು ಸತ್ಕರಿಸಿದ್ದಾರೆ. ಅವರು ಒಳ್ಳೆಯ ಉದ್ದೇಶದಿಂದ ಪ್ರಾರಂಭ ಮಾಡಿದ್ದಾರೆ. ಈಗ ತಾವು ಅದರ ಫಲವನ್ನೆಲ್ಲಾ ಅನುಭವಿಸಿ, ಆ ಕೂಸಿನ ಚಂದವನ್ನೆಲ್ಲಾ ನೋಡಿ ಆ ಮೇಲೆ ಅದು ಪಾಪದ ಕೂಸೆಂದು ಹೇಳುತ್ತಿರುವುದು ಸರಿಯಲ್ಲ. ಅದನ್ನು ಅನಾಥ ಶಿಶುವಾಗಿ ಮಾಡಬೇಡಿ. ಹಾಗಿದ್ದರೆ ತಾವು ಕೂಡ ಅದರ ಡಿಸೈನ್ ಬದಲಾವಣೆ ಮಾಡಬಹುದಾಗಿತ್ತು ಮತ್ತು ಖರ್ಚನ್ನು ಕಡಿಮೆ ಮಾಡಬಹುದಾಗಿತ್ತು ತಾವು ಈ ರೀತಿ ಮಾಡುವುದಕ್ಕೆ ಹೋಗಲಿಲ್ಲ ಅದು ನಿಜವಾಗಿ ಪಾಪದ ಕೂಸೇ ಆಗಿದ್ದರೆ, ಮತ್ತು ಹಿಂದಿನ ಸರ್ಕಾರ ಆ ರೀತಿ ಮಾಡಿದ್ದರೆ ಅದರ ಬಗ್ಗೆ ವಿಚಾರಣೆ ಮಾಡಿ. ಏಕೆಂದರೆ ಬಹಳ ಸುಲಭವಾಗಿ ಅದನ್ನು ಪಾಪದ ಕೂಸಾಗಿ ಮತ್ತು ಅನಾಥ ಶಿಶುವಾಗಿ ಬಿಸಾಡಲಿಕ್ಕೆ ಹೋಗಬೇಡಿ. ಹೊರಗಿನ ನೋಟಕ್ಕೆ ನನಗನಿಸುತ್ತದೆ, ಇಡೀ ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ ಇಡೀ ದೇಶದಲ್ಲಿ ಅಂತಹ ರಂಗ ಮಂದಿರ ಇಲ್ಲ. ನಾನು ಒಳಗೆ ಹೋಗಿ ನೋಡಲಿಲ್ಲ. ಹೊರಗೆ ಮಾತ್ರ ನೋಡಿದ್ದೆ. ನಾವೂ ಸಹ ಸ್ವಲ್ಪ ಸಾಹಿತ್ಯ ಕಾದಂಬರಿ ಮತ್ತು ಪದ್ಯವನ್ನು ಬರೆಯುತ್ತಿದ್ದೇವೆ. ನಾನು ವಿಶ್ವ ಕನ್ನಡ ಸಮ್ಮೇಳನಕ್ಕೆ ಹೋಗುವುದಕ್ಕೆ ಮೈಸೂರಿನ ಡಿ.ಐ.ಜಿ.ಗೆ ಫೋನ್ ಮಾಡಿ ಸ್ಥಳ ಕಾದಿರಿಸುವಂತೆ ಒಂದು ಆಮಂತ್ರಣ ಪತ್ರಿಕೆಯನ್ನು ಕೇಳಿದೆ. ಆ ಕೆಲಸದಲ್ಲಿ ಅಚಾತುರ್ಯ ಅಕ್ರಮ ನಡೆದಿದ್ದರೆ ರಂಗಮಂದಿರದ ಬಗ್ಗೆ ಜ್ಯುಡಿಷಿಯಲ್ ವಿಚಾರಣೆ ಮಾಡಿಸಿ ಅದು ಬಿಟ್ಟು ಅದನ್ನು ಆಗಾಗ ಹೇಳಿ ಹೀಯಾಳಿಸುವಂತಹ ಕೆಲಸ ಮಾಡಬೇಡಿ. ಕೇಂದ್ರ ರಂಗ ಮಂದಿರ ಹೊರ ನೋಟಕ್ಕೆ ಇಡೀ ರಾಷ್ಟ್ರದಲ್ಲೇ ಬಹಳ ಅತ್ಯುತ್ತಮವಾಗಿದೆ ಇನ್ನು ತಾವು ಹಂಪೆಯ ಪುನರ್ ಉತ್ಥಾನದ ಬಗ್ಗೆ ಸ್ಪಷ್ಟವಾಗಿ ಹೇಳಲಿಲ್ಲ. ಏಕೆಂದರೆ ಇದು ಇಡಿ ವಿಶ್ವದ ಗಮನವನ್ನು ಸೆಳೆದ ಯೋಜನೆ. ನನಗೆ ತಿಳಿದ ಪ್ರಕಾರ ಅದರ ಫಿನೀಷಿಂಗೇ ಮಾಡಿಲ್ಲ. ಅದರ ಬಗ್ಗೆ ನೋಟಿಫಿಕೇಶನ್ ಫೈನಲೈಸ್ ಮಾಡಿಲ್ಲ. ೩ ವರ್ಷದಿಂದ ಇದ್ದೀರಿ ಏನೂ ಮಾಡಿಲ್ಲ. ಹಣ ಕೊಟ್ಟಿಲ್ಲ ಎಂದು ತಕ್ಷಣ ಹೇಳಬೇಡಿ. ಯೋಜನೆ ಎಂದರೆ there are several components ಒಂದನೆಯದಾಗಿ ಆರ್ಕಿಯಾಲಜಿ ವಿಚಾರ ಅಲ್ಲಿ ವಾಸ್ತುಶಿಲ್ಪದ ಬಗ್ಗೆ ರೀಸರ್ಚ್ ಮಾಡುವುದಕ್ಕೆ ಕಷ್ಟ ಆಗುತ್ತಾ ಇದೆ. ಬಹುಶ ಅದು ಪೂರ್ತಿಯಾಗುವ ಹಂತದಲ್ಲಿದೆ. ಅದಕ್ಕೆ ಕೇಂದ್ರ ಸರ್ಕಾರ ಹಣ ಕೊಟ್ಟಿದೆ. ಪ್ರವಾಸ ನಿಗಮದಿಂದ ಕಮಲಾಪುರದಲ್ಲಿ ಏನು ಮೋಟೆಲ್ ಮಾಡಬೇಕೆಂದಿದ್ದೀರಿ ಅದಕ್ಕೂ ಕೂಡ ಕೇಂದ್ರ ಸರ್ಕಾರ ೨೦ ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ೪ ಲಕ್ಷವನ್ನು ಮೂರು ವರ್ಷದಿಂದ ಖರ್ಚು ಮಾಡದೆ ಖಜಾನೆಯಲ್ಲಿ ಇಟ್ಟುಕೊಂಡಿದ್ದೀರೇ ಹೊರತು ಬೇರೇನೂ ಮಾಡಿಲ್ಲ. ಬೃಂದಾವನ ರೀಇಲ್ಯುಮಿನೇಷನ್ ಮಾಡುವುದಕ್ಕೆ ಕೇಂದ್ರ ಸರ್ಕಾರ ೬೦ ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ನಾವು ಆ ಯೋಜನೆಯನ್ನು ಒಂದೇ ವರ್ಷದಲ್ಲಿ ಮಾಡಿ ಮುಗಿಸಿಕೊಟ್ಟೆವು. ಆದರೆ ನೀವು ಕೇಂದ್ರವನ್ನು ದೂಷಿಸುವುದು ಬಹಳ ಸುಲಭ. ವಾಸ್ತುಶಿಲ್ಪದಲ್ಲಾಗಲಿ ಟೂರಿಸಂನಲ್ಲಾಗಲಿ ಬೇರೆ ಯಾವುದರಲ್ಲಾಗಲಿ ನೀವು ಕಾಂಕ್ರಿಟ್ ಯೋಜನೆಗಳನ್ನು ಕೇಂದ್ರಕ್ಕೆ ಕೊಟ್ಟಿದ್ದೀರಾ ಅದರ ಬಗ್ಗೆ ಸ್ಪಷ್ಟೀಕರಣ ಬೇಕೆಂದು ಅಧ್ಯಕ್ಷರ ಮೂಲಕ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ, ನಂದಳಿಕೆಯಲ್ಲಿ ಮುದ್ದಣ್ಣನವರ ಸ್ಮಾರಕವನ್ನು ಮಾಡಲು ಆಗದಿರುವುದಕ್ಕೆ ಪೂರ್ಣ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಅದನ್ನು ಮಾಡದಿರುವುದು ನಮ್ಮ ತಪ್ಪು. ಅಲ್ಲಿನ ಜಿಲ್ಲಾಧಿಕಾರಿಯವರಿಗೆ ಹೇಳಿದ್ದೆ, ಅಲ್ಲಿ ಏನಾದರೂ ಸೇವಿಂಗ್ಸ್ ಮಾಡುವುದಕ್ಕೆ ಸಾಧ್ಯವೇ ಎಂದು. ಅಲ್ಲಿಯ ಪ್ರಾಜೆಕ್ಟ್ ೮–೧೦ ಲಕ್ಷ ರೂ ಆಗುತ್ತದೆ ಜೊತೆಗೆ ಟೂರಿಸಂ ಸಹಾ

ಸೇರುತ್ತದೆ, ಅಷ್ಟು ಹಣವನ್ನು ಒದಗಿಸಲಿಕ್ಕೆ ಆಗದೇ ಇರುವುದರಿಂದ ನಮ್ಮ ಟೂರಿಸಂ ಇಲಾಖೆಯಿಂದ ಒಂದು ಲಕ್ಷ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಒಂದು ಲಕ್ಷ, ಒಟ್ಟು ಮೂರು ಲಕ್ಷದ ಒಳಗೆ ಮಾಡೋಣವೆಂದು ಸ್ಥಳೀಯ ಅಧಿಕಾರಿಗಳಿಗೆ ಹೇಳಿದೆ. ಅದು ಆಗಲಿಲ್ಲ ಅದು ಮನಸ್ಸಿನಿಂದ ತಪ್ಪಿಹೋಯಿತು. ಅದನ್ನು ಪರಿಶೀಲನೆ ಮಾಡಲಿಲ್ಲ. ಅದು ನನ್ನ ತಪ್ಪು ಎಂದು ಒಪ್ಪಿಕೊಳ್ಳುತ್ತೇನೆ. ಮಾಲ್ಪೆ ಬಗ್ಗೆ ನನಗೆ ಒಂದು ಹೆದರಿಕೆ ಇದೆ. ಅದು ಏನೆಂದರೆ ಪ್ರಪ್ರಥಮ ಬಾರಿಗೆ ಕರ್ನಾಟಕ ಪ್ರವಾಸೋದ್ಯಮ ನಿಗಮ ಒಂದು ಆದಾಯವನ್ನು ಮಾಡುತ್ತಿದೆ. ಸುಮಾರು ೨೮ ಲಕ್ಷ ರೂಪಾಯಿ ಆದಾಯ ಮಾಡಿದ್ದೇವೆ. ಫುಲ್ ಫ್ಲೆಡ್ಜೆಡ್ ಮಾಡಬೇಕಾದರೆ ಒಂದು ಕೋಟಿ ರೂ. ಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಒಂದು ಕೋಟಿ ಹಾಕಿದರೆ ಅದು ಪುನಃ ವಾಪಸ್ ಬರುತ್ತದೋ ಇಲ್ಲವೋ ಎನ್ನುವ ಒಂದು ವಿವೇಚನೆ ಅಷ್ಟೆ. ಆ ಹೆದರಿಕೆಯೇ ಹೊರತು ಅಷ್ಟು ಹಣವನ್ನು ಎಲ್ಲಿಂದ ತರಬಹುದು ಎನ್ನುವುದು ಅಲ್ಲ.

ಮಾನ್ಯ ಪ್ರಧಾನ ಮಂತ್ರಿಯವರು ಪ್ರವಾಸೋದ್ಯಮ ಮಂತ್ರಿಗಳ ಸಮ್ಮೇಳನದಲ್ಲಿ ಡೊಮಾಸ್ಟಿಕ್ ಟೂರಿಸಂಗೆ ಎನ್‌ಕರೇಜ್ ಮಾಡಿ ಮತ್ತು ಚಿಕ್ಕ ಚಿಕ್ಕ ಯೂನಿಟ್ ಮಾಡಿ ಎಂದು ಹೇಳಿದ್ದಾರೆ. ತಮ್ಮನ್ನು ಕರೆಸಿ ಒಟ್ಟಿಗೆ ಕೂತು ತೀರ್ಮಾನ ಮಾಡೋಣ. ಸೈಂಟ್‌ಮೇರೀಸ್ ಐಲ್ಯಾಂಡ್ ಬಗ್ಗೆ ಕೂಡ ಮಾನ್ಯ ಸದಸ್ಯರುಗಳ ಅಭಿಪ್ರಾಯ ತೆಗೆದುಕೊಂಡು ಶ್ರೀಮತಿ ಮನೋರಮಾ ಮಧ್ವರಾಜ್‌ರವರ ಸಲಹೆಗಳನ್ನು ತೆಗೆದುಕೊಂಡು ತೀರ್ಮಾನ ಮಾಡುತ್ತೇನೆ. ಕೋ ಆಪರೇಟೀವ್ ಸೊಸೈಟಿ ಮಾಡುವ ಸಲಹೆ ಸೂಕ್ತವಾಗಿದೆ. ಅದನು ನಾನು ಒಪ್ಪುತ್ತೇನೆ. ಇನ್ನು ರಂಗ ಮಂದಿರ ವ್ಯಕ್ತಿಯದು ಎಂದು ಹೇಳಲಿಲ್ಲ. ಸರ್ಕಾರದ್ದು ಎಂದು ಹೇಳಿದ್ದೇನೆ. ಮಾನ್ಯ ಗುಂಡೂರಾಯರನ್ನು ಗೌರವಿಸಿದ್ದು. ಅವರು ವಿಶ್ವಕನ್ನಡ ಸಮ್ಮೇಳನದ ಕರ್ತೃ, ಆದಕ್ಕಾಗಿ ಪೂರ್ಣ ಮನಸ್ಸಿನಿಂದ ಗೌರವಿಸಿದ್ದೇವೆ. ರಂಗಮಂದಿರಕ್ಕಾಗಿ ೫ಕೋಟಿ ವೆಚ್ಚವಾಗಿದೆ. ಅದರ ಒಳಗೆ ಹೋಗಿ ನೋಡಬೇಕು. ೧೫೦೦ ಆಸನಗಳು ಇವೆ. ರಂಗ ಮಂದಿರ ನಡೆಸಬೇಕಾದರೆ ದಿನಕ್ಕೆ ೫,೦೦೦ ದಿಂದ ೮,೦೦೦ ರೂ ಖರ್ಚು ಬರುತ್ತದೆ. ಸೆಂಟ್ರಲ್ ಏರ್‌ಕಂಡೀಷನ್ಡ್ ಇದೆ. ಮೈಸೂರು ನಗರದಲ್ಲಿ ೩೬೫ ದಿವಸವೂ ನಡೆಯುವಂಥ ಅನೇಕ ಸಭಾ ಗೃಹಗಳು ಇವೆ. ಇದೂ ಕೂಡ ಉತ್ತಮ ಕಲಾಮಂದಿರವಾಗಿದೆ. ಇದರ ಕೆಲಸ ಅರ್ಧಂಬರ್ಧ ಮಾಡಿದ್ದರೂ, ನಾವು ಹಣ ಕೊಟ್ಟು ಅದರ ಭಾರವನ್ನು ವಹಿಸಿಕೊಂಡು ಕೆಲಸ ಮುಗಿಸಿದ್ದೇವೆ. ಅದರ ಹೊರೆಯನ್ನು ನಾವು ಹೊರಬೇಕಾಗಿದೆ. ಇನ್ನು ವಿಶ್ವಕನ್ನಡ ಸಮ್ಮೇಳನಕ್ಕೆ ನಮಗೆ ಆಹ್ವಾನ ಬಂದಿಲ್ಲವೆಂದು ಹೇಳಿದರು, ಇದು ದೊಡ್ಡ ತಪ್ಪು. ಇವರನ್ನು ಕರ್ನಾಟಕ ವೈಜಯಂತದಲ್ಲಿ ಪಾತ್ರ ವಹಿಸಬೇಕೆಂದು ಕೇಳಿಕೊಂಡಿದ್ದೆವು. ಮಾನ್ಯ ಪ್ರಕಾಶ್ ಮತ್ತು ಮೊಯ್ಲಿಯವರು ಇದರಲ್ಲಿ ಪಾತ್ರ ವಹಿಸಬೇಕೆಂದೂ ಮಾಡಿದ್ದೆವು, ಆದರೆ ಇವರು ನಮಗೆ ಕೈಕೊಟ್ಟು ಹೋದರು. ಬೆಂಗಳೂರು ನಗರದಲ್ಲಿ ವೈಜಯಂತ ಮಾಡುವಾಗ ತಾವು ತಪ್ಪದೇ ಪಾತ್ರ ವಹಿಸಬೇಕೆಂದು ಈ ಸಂದರ್ಭದಲ್ಲಿ ಮತ್ತೊಮ್ಮೆ ಹೇಳುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರ ಚಲನಚಿತ್ರೋದ್ಯಮಕ್ಕೆ ಯಾವ ಮಟ್ಟದ ಪ್ರೋತ್ಸಾಹ ಕೊಡುತ್ತದೆಯೋ ಅದಕ್ಕಿಂತ ಅಧಿಕವಾದಂಥ ಪ್ರೋತ್ಸಾಹವನ್ನು ರಂಗಭೂಮಿಗೂ ಕೊಡಬೇಕೆನ್ನುವ ವಿಚಾರ ಹಲವಾರು ಸಂದರ್ಭದಲ್ಲಿ ಇಲ್ಲಿ ಪ್ರಸ್ತಾಪವಾಗಿದೆ. ರಂಗಭೂಮಿ ಚಟುವಟಿಕೆಗಳು ಹಾಗೂ ಚಲನಚಿತ್ರ ಕ್ಷೇತ್ರದಲ್ಲಿ ನಡೆಯುತಕ್ಕ ಚಟುವಟಿಕೆಗಳನ್ನು ನಾನು ಗಮನಿಸಿದ್ದೇನೆ. ಕರ್ನಾಟಕದಲ್ಲಿ ಚಲನಚಿತ್ರದ ಅಭಿವೃದ್ಧಿ ಚೆನ್ನಾಗಿ ಆಗಿದೆ. ಹವ್ಯಾಸಿ ಮತ್ತು ವೃತ್ತಿ ನಿರತ ರಂಗಭೂಮಿಯ ಸ್ಥಿತಿ ತುಂಬಾ ಹದಗೆಟ್ಟಿದೆ. ಚಲನಚಿತ್ರಗಳಿಗೆ ಕೊಡತಕ್ಕಂಥ ಸಹಾಯಧನ ಏನಿದೆ, ಅದು ಚಿತ್ರೋದ್ಯಮಿಗಳಿಗೆ ಲಭ್ಯವಾಗುತ್ತದೆ. ಆದರೆ ಕಲಾವಿದರಿಗೆ ಅದು ಲಭ್ಯವಾಗುವುದಿಲ್ಲ. ಕಲಾವಿದರ ಹಿತದೃಷ್ಟಿಯಿಂದ ಪ್ರೋತ್ಸಾಹ ಕೊಡಬೇಕೆನ್ನುವ ವಿಚಾರದಲ್ಲಿ ಕಾರ್ಯಕ್ರಮ ರೂಪಿಸುವ ಬಗ್ಗೆ ಯೋಚನೆ ಮಾಡುತ್ತೀರಾ? ನಮ್ಮ ರಾಜ್ಯದಲ್ಲಿ ವಿಫುಲವಾದಂಥ ಜಾನಪದ ಸಾಹಿತ್ಯ ಮತ್ತು ಕಲೆ ಇದೆ ಬಹಳ ಇದೆ. ಇದನ್ನು ಸಂಗ್ರಹ ಮಾಡತಕ್ಕಂಥ, ವಿಶೇಷವಾಗಿ ಪ್ರಚಾರ ಮಾಡತಕ್ಕಂಥ ಒಂದು ಕಾರ್ಯ ವ್ಯವಸ್ಥಿತವಾಗಿ ಹಾಗೂ ಸಮರ್ಪಕವಾಗಿ ಆಗಿಲ್ಲ ಎನ್ನುವುದನ್ನು ಎಲ್ಲರೂ ಒಪ್ಪುತ್ತಾರೆ ಅಳಿಸಿಹೋಗತಕ್ಕಂಥ ಕಲೆಯನ್ನು ಪುನರುದ್ಧಾರ ಮಾಡಿ ಅದನ್ನು ಜೀವಂತವಾಗಿಟ್ಟು ಮುಂದಿನ ತಲೆಮಾರಿನವರಿಗೆ ಕೊಡತಕ್ಕಂಥಾದ್ದು ನಮ್ಮ ಆದ್ಯ ಕರ್ತವ್ಯ. ಅದಕ್ಕಾಗಿ ವಿಶೇಷ ಒತ್ತು ಕೊಡಬೇಕೆಂದು ಹೇಳುತ್ತೇನೆ. ಇನ್ನು ನನ್ನ ತಾಲ್ಲೂಕಿಗೆ ಸಂಬಂಧಪಟ್ಟರೂ ಇಡೀ ರಾಜ್ಯಕ್ಕೆ ಹೆಚ್ಚಿನ ಸಂಬಂಧ ಹೊಂದಿರತಕ್ಕಂಥಾದ್ದು. ಕನ್ನಡದ ಕಣ್ವ ಬಿ.ಎಂ. ಶ್ರೀಕಂಠಯ್ಯನವರು ನಮ್ಮ ತಾಲ್ಲೂಕಿನ ಬೆಳ್ಳೂರು ಗ್ರಾಮದಲ್ಲಿ ಹುಟ್ಟಿದವರು. ಅವರ

ಷಷ್ಟ್ಯಬ್ದಿ ಸಂದರ್ಭದಲ್ಲಿ ಯೋಗ್ಯವಾದಂಥ ಒಂದು ಸ್ಮಾರಕವನ್ನು ಮಾಡುವುದರ ಬಗ್ಗೆ ಬೇಡಿಕೆ ಬಂದಾಗ ಸರ್ಕಾರ ಕೂಡ ಒಪ್ಪಿತ್ತು. ಮತ್ತೆ ಅವರ ಹೆಸರಿನಲ್ಲಿ ನಾಟಕ ಕಲಾವಿದರನ್ನು ತಯಾರು ಮಾಡತಕ್ಕ ಒಂದು ವಿದ್ಯಾ ಸಂಸ್ಥೆಯನ್ನು ಸ್ಥಾಪನೆ ಮಾಡಬೇಕೆಂದು ಒತ್ತಾಯ ಮಾಡಿದ್ದರೂ ಇಲ್ಲಿಯವರೆಗೆ ನಿರ್ದಿಷ್ಟವಾದ ಉತ್ತರ ಬಂದಿಲ್ಲ, ಈ ವಿಚಾರದಲ್ಲಿ ಮಾನ್ಯ ಮಂತ್ರಿಯವರು ಸಮರ್ಪಕವಾದ ಅನುಕೂಲಕರವಾದ ಉತ್ತರ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಜೀವರಾಜ್ ಆಳ್ವ.—ಮಾನ್ಯ ಹಿರಿಯ ಸದಸ್ಯರಾದಂಥ ಕೃಷ್ಣಪ್ಪನವರು ಚಲನಚಿತ್ರ ಉದ್ಯಮಕ್ಕೆ ಕೊಡುವಂಥ ಪ್ರೋತ್ಸಾಹಕಾರಕ ಕೆಲಸವನ್ನು ರಂಗಭೂಮಿಗೆ ಕೊಡುತ್ತಿಲ್ಲವೆಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ, ಕೋಟಿಗಟ್ಟಲೆ ಹಣ ಚಲನಚಿತ್ರ ಉದ್ಯಮಕ್ಕೆ ಕೊಡಲಾಗುತ್ತಿದೆ. ನಾಟಕಗಳಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕೊಡತಕ್ಕ ಹಣ ಏನೇನೂ ಸಾಲದು. ಆದರೂ ಹಿಂದಿಗಿಂತ ಈಗ ಜಾಸ್ತಿಮಾಡಿದ್ದೇವೆ. ಎರಡು ಮೂರುಪಟ್ಟು ಜಾಸ್ತಿ ಮಾಡಿದ್ದೇವೆ. ಇಲಾಖಾ ಮುಖಾಂತರ ಅಕಾಡಮಿ ಮುಖಾಂತರ ಹಣ ಕೊಡಲಾಗುತ್ತಿದೆ. ಇನ್ನು ಜಾನಪದ ಸಾಹಿತ್ಯ ವಿಫಲವಾಗಿರುವುದನ್ನು ಒಪ್ಪುತ್ತಾ, ಇದಕ್ಕೂ ಇತ್ತೀಚೆಗೆ ಜಾಸ್ತಿ ಹಣ ಕೊಡಲಾಗಿದೆ. ಈ ವರ್ಷ ೧೦–೧೨ ಲಕ್ಷ ರೂಪಾಯಿಗಳನ್ನು ಅಕಾಡಮಿ ಮೂಲಕ ಇಲಾಖಾ ಮೂಲಕ ಕೊಡುತ್ತಿದ್ದೇವೆ ಅದು ಸಾಲದು ಎನ್ನುವುದು ನನಗೆ ಗೊತ್ತಿದೆ, ಇನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಬಿ. ಎಂ. ಶ್ರೀ ಯವರ ಹೆಸರಿನಲ್ಲಿ ಬೆಳ್ಳೂರು ಗ್ರಾಮದಲ್ಲಿ ಸ್ಮಾರಕ ಮಾಡುವ ಬಗ್ಗೆ ಎರಡೂವರೆ ಲಕ್ಷ ರೂಪಾಯಿ ಕೊಡಲಾಗಿದೆ. ಇನ್ನು ಖಾಯಂ ಸ್ಮಾರಕ ಮಾಡುವ ಸಲಹೆಯನ್ನು ಪೂರ್ಣವಾಗಿ ಒಪ್ಪಿ, ಈ ಸಾರಿ ಹಣ ಒದಗಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಪತ್ರಿಕೆಗಳ ಜಾಹಿರಾತಿನ ದರವನ್ನು ರಿವೈಸ್ ಮಾಡುವುದರಲ್ಲಿ ತಡ ಆಗಿದೆ. ಅದರಲ್ಲಿಯೂ ಗಡಿ ಪ್ರದೇಶಗಳಲ್ಲಿ ನಡೆಯತಕ್ಕ ಕನ್ನಡ ಪತ್ರಿಕೆಗಳ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಇನ್ನು ಟಿ.ವಿ. ಡೈರೆಕ್ಟರ್ ಬಗ್ಗೆ ಶ್ರೀ ಜಿ. ನಾರಾಯಣಕುಮಾರ್ ಪ್ರಸ್ತಾಪ ಮಾಡಿದ್ದಾರೆ. ಟಿ.ವಿ. ಕಾರ್ಯಕ್ರಮಗಳಲ್ಲಿ ಬಹಳಷ್ಟು ಪಕ್ಷಪಾತ ನಡೆಯುತ್ತಿದೆ. ಒಂದೇ ಪಕ್ಷದ ಪ್ರಚಾರ ಮಾತ್ರ ಮಾಡುತ್ತಿದ್ದಾರೆ. ನಿಷ್ಪಕ್ಷಪಾತವಾಗಿ ಕೆಲಸ ಮಾಡುತ್ತಿಲ್ಲ. ಉದಾಹರಣೆಗೆ ನನ್ನ ಪಕ್ಷದ ರಾಜ್ಯ ಸಮ್ಮೇಳನ ಆದರೆ ಟಿ.ವಿ.ಯಲ್ಲಿ ಬರಲಿಲ್ಲ. ಕನ್ನಡದ ಸಂಸ್ಕೃತಿಯೇ ಗೊತ್ತಿಲ್ಲದ ಡೈರೆಕ್ಟರ್‌ನ್ನು ಇಟ್ಟುಕೊಂಡು ಯಾವ ಕೆಲಸ ತಾನೇ ಮಾಡಿಸುವುದಕ್ಕೆ ಸಾಧ್ಯ ? ಮಾನ್ಯ ಸದಸ್ಯರಾದ ಶ್ರೀ ಉಮರಬ್ಬರವರು ಮೊನ್ನೆ ಚಲುವ ಕನ್ನಡ ನಾಡಿನ ಬಗ್ಗೆ ಮಾತನಾಡಿದರು. ಇಂಥ ವಿಷಯದಲ್ಲಿ ಅವರು ಮಾತನಾಡುವುದಿಲ್ಲ.

ಶ್ರೀ ಬಿ.ಎಂ. ಉಮರಬ್ಬ.—ಅದೇ ಉಮರಬ್ಬ ಟಿ.ವಿ. ಡೈರೆಕ್ಟರ್ ಬಗ್ಗೆ ೩೮ ಜನ ಸ್ನೇಹಿತರ ಸಹಿ ಹಾಕಿಸಿ ಒಂದು ಮನವಿಯನ್ನು ಪ್ರಧಾನ ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದಾರೆ. ನಿಮಗೆ ಬೇಕಾದರೆ ಅದರ ಕಾಪಿ ಕಳುಹಿಸಿಕೊಡುತ್ತೇನೆ.

ಶ್ರೀ ಜೀವರಾಜ ಆಳ್ವ.— ಮಾನ್ಯ ಸದಸ್ಯರಾದ ಭೂಪತಿಯವರು ಜಾಹಿರಾತಿನ ವಿಷಯದಲ್ಲಿ ತಾರತಮ್ಯ ಇದೆ ಎಂದು ಹೇಳಿದ್ದಾರೆ ಇದರ ಬಗ್ಗೆ ಸಮಿತಿ ನೇಮಕ ಮಾಡಲಾಗಿದೆ. ಹೊರನಾಡ ಪತ್ರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಲಾಗುವುದು. ನಿಷ್ಪಕ್ಷಪಾತವಾಗಿ ದೂರದರ್ಶನ ಕೆಲಸ ಮಾಡಬೇಕೆಂಬ ವಾದವನ್ನು ಪೂರ್ಣವಾಗಿ ಒಪ್ಪುತ್ತೇನೆ. ಬೆಂಗಳೂರು ಕೇಂದ್ರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರದ ಸಚಿವರಿಗೆ ಪತ್ರ ಬರೆದಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಅನ್ಯಾಯವನ್ನು ಸರಿಪಡಿಸಲು ಸೂಚ್ಯವಾಗಿ ಹೇಳುತ್ತೇನೆ.

ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಅಧ್ಯಕ್ಷರೇ, ಕರ್ನಾಟಕ ಮುಖ್ಯಮಂತ್ರಿಗಳು ಮುಂಬಯಿಯಲ್ಲಿ ಕನ್ನಡಿಗರಿಗೆಂದು ೫೦ ಲಕ್ಷ ಕೊಟ್ಟು ಒಂದು ರಂಗಮಂದಿರ ಕಟ್ಟಿಸಿದರು. ಆದರೆ ನಾವು ಅಲ್ಲಿಗೆ ಹೋದಾಗ ಕರ್ನಾಟಕ ಸಾಂಸ್ಕೃತಿಕ ಸಂಘದವರು ಕರ್ನಾಟಕದವರು ಹೆಚ್ಚಿನ ಆಸಕ್ತಿ ವಹಿಸುತ್ತಿಲ್ಲವೆಂದೂ, ಆದ್ದರಿಂದ ಇಲ್ಲಿಂದ ಅಲ್ಲಿಗೆ ಕಲಾವಿದರನ್ನು ಕಳಿಸಿಕೊಟ್ಟು ಕನ್ನಡನಾಡಿನ ಇತಿಹಾಸವನ್ನು ಬೆಳೆಸುವುದಕ್ಕೆ ಅವಕಾಶ ಮಾಡಿಸಿಕೊಡಬೇಕೆಂದು ಕೇಳಿದರು. ಇದರ ಬಗ್ಗೆ ಮಂತ್ರಿಗಳು ಹೇಳಬೇಕು. ಹಾಗೆಯೇ ಚಿಕ್ಕಮಗಳೂರಿನಲ್ಲಿ ರಂಗಮಂದಿರದ ಕೆಲಸ ಕಾರಣಾಂತರದಿಂದ ನಿಂತುಹೋಗಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಕೂಡಲೇ ಕೆಲಸ ಮಾಡುವುದಕ್ಕೂ ಹೇಳಿ ಬೇಕಾದ

ಹಣವನ್ನು ಬಿಡುಗಡೆ ಮಾಡಬೇಕೆಂದು ಕೇಳುತ್ತೇನೆ. ಚಿಕ್ಕಮಗಳೂರಿನಲ್ಲಿ ಭವ್ಯವಾದ ಇತಿಹಾಸ ಇದೆ. ಅದನ್ನು ಪ್ರವಾಸೀ ಕೇಂದ್ರವಾಗಿ ಮಾಡುವುದಕ್ಕೆ ಕೇಂದ್ರದ ಜೊತೆ ಪತ್ರವ್ಯವಹಾರ ಮಾಡಿ ಕೈಗೆತ್ತಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜೀವರಾಜಆಳ್ವ.—ಮಾನ್ಯ ಸದಸ್ಯರ ಎಲ್ಲ ಸಲಹೆಗಳನ್ನೂ ಒಪ್ಪಿದ್ದೇನೆ.

SRI. R. S. MAME.—Sir, the hon. Minister stated that his Department of Youth Services and sports is doing very well. Sir, from the information which I have received, there are some 14 Coaches in Belgaum serving on temporary basis. I would like him to please clarify as to wheaher their services would be regularised ?

SRI. JEEVARAJ ALVA.—Sir, I have already answered during the course of my reply that their services will be regularised.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ನಾನೂ ಕೂಡ ಇನ್‌ಫರ್ಮೇಷನ್ ಮಿನಿಸ್ಟರ್ ಆಗಿದ್ದೆ. ನನಗೂ ಆಗ ಇಷ್ಟೇ ಹುಮ್ಮಸ್ಸು ಇತ್ತು. ಒಂದು ಮಾತು ಎಂದರೆ ಇವರು ನನಗಿಂತ ಚೆನ್ನಾಗಿ ಕೆಲಸ ಮಾಡಿದ್ದಾರೆ. ಅಂದರೆ ಮುಖ್ಯ ಮಂತ್ರಿಗಳ ಆಶೀರ್ವಾದದಿಂದ ಹೆಚ್ಚು ದುಡ್ಡು ಸಿಕ್ಕಿತು ಎಂದು ಹೇಳಿದ್ದಾರೆ, ಸಂತೋಷ, ಇಷ್ಟು ಹುಮ್ಮಸ್ಸಿನಿಂದ ಉತ್ತರ ಕೊಡುವುದನ್ನು ನೋಡಿ ಆನಂದವಾಯಿತು, ಏಕೆಂದರೆ ನಮ್ಮ ಮುಂದೆ ಬೆಳೆದವರು ಒಳ್ಳೆಯ ಕೆಲಸ ಮಾಡಿದ್ದಾರೆ, ಮೆಚ್ಚುಗೆ ಮಾತಾಡುತ್ತೇನೆ. ಹಿಂದೆ ಚಿಕ್ಕವಯಸ್ಸಿನಲ್ಲಿ ತಪ್ಪು ಮಾಡಿರಬಹುದು. ಮುಂದೆ ಮಾಡುವುದಿಲ್ಲ. ಅವರನ್ನು ಕಂಡರೆ ನನಗೆ ಪ್ರೀತಿ. ಫಿಲ್ಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಇದ್ದು ಹಿಂದೆ ಅದಕ್ಕೆ ಶ್ರೀ ಕೆ. ಕೆ. ಮೂರ್ತಿ ಎಂಬುವರು ಚೇರ್‌ಮನ್ನೋ ಏನೋ ಆಗಿದ್ದರು. ಅವರ ಕಾಲದಲ್ಲಿ ಏನೋ ಆಗಬಾರದ್ದು ಆಗಿ ದೊಡ್ಡ ತನಿಖೆ ಮಾಡಿ ರಿಪೋರ್ಟ್ ಕೇಳಲಾಗಿತ್ತು. ಆ ರಿಪೋರ್ಟ್ ಬಂತೇ ? ಏನು ಕ್ರಮ ತೆಗೆದುಕೊಂಡಿದ್ದೀರಿ ?

ಎರಡನೆಯದಾಗಿ ನಿಮ್ಮಲ್ಲಿ ಏನು ಆರ್ಟಿಸ್ಟ್‌ಗಳಿದ್ದಾರೆ ಅವರೇ ಅನೇಕ ವರ್ಷಗಳಿಂದ ಇದ್ದಾರೆ. ಅವರ ಮನೆತನದವರೇ ಈಗಲೂ ಇದ್ದಾರೆ. ಬೇರೆಯವರು ನಿಮ್ಮ ಗಮನಕ್ಕೇ ಬಂದಿಲ್ಲವೇ ? ಯೋಚನೆ ಮಾಡಿ.

ಜಾನಪದ ಸಾಹಿತ್ಯವೆಂದು ಹೇಳಿ ಒಳ್ಳೆಯ ಕೆಲಸ ಮಾಡಿದ್ದೀರಿ, ಇನ್ನೂ ಹಿಂದೆ ಇರುವ ಎಷ್ಟೋ ಜಾನಪದ ಸಾಹಿತ್ಯವನ್ನು ಉಳಿಸುವುದಕ್ಕೆ ಎಷ್ಟು ಹಣ ಬೇಕು ? ಈ ಅಕಾಡೆಮಿಗೆ ಯಾರನ್ನು ಚೇರ್‌ಮನ್ ಮಾಡಿದ್ದೀರಿ ? ಆಫೀಸ್ ಎಲ್ಲಿದೆ ? ಅವರ ಮನೆಯಲ್ಲೇ ಆಫೀಸ್ ಮಾಡಿಕೊಂಡು ರೆಂಟ್ ತೆಗೆದುಕೊಂಡರೆ ಏನು ಮಾಡಿದ್ದೀರಿ ? ಸಪ್ಲಿಮೆಂಟರಿ ಬಜೆಟ್‌ನಲ್ಲಿ ವಿಶ್ವಕನ್ನಡ ಮೇಳಕ್ಕೆಂದು ಎರಡೂವರೆ ಕೋಟಿ ಕೇಳಿದ್ದೀರಿ. ಒಳ್ಳೆಯ ಕೆಲಸ ಆಗಿರಬಹುದು. ಆದರೆ ಅದರಿಂದ ಜನಕ್ಕೆ ಏನು ಪ್ರಯೋಜನವಾಗಿದೆ ? ಏನು ಅನುಕೂಲವಾಗಿದೆ ? ಅದು ಬಿಟ್ಟು ಫಾರಿನ್‌ನಿಂದ ಅವರನ್ನು ಇವರನ್ನು ಕರೆಸಿದ್ದೆವು ಎಂದು ಹೇಳುವುದು ಸರಿಯಲ್ಲ.

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ, ಚಲನಚಿತ್ರ ನಿಗಮದ ಬಗ್ಗೆ ಶ್ರೀ ಕೆ.ಕೆ. ಮೂರ್ತಿಯವರ ಬಗ್ಗೆ ಹಲವಾರು ಗುರುತರವಾದ ಆಪಾದನೆಗಳು ಬಂದಿದ್ದು ಶ್ರೀ ಉದಾಸಿಯವರ ನೇತೃತ್ವದಲ್ಲೋ ಏನೋ ಒಂದು ಕಮಿಟಿ ಮಾಡಿದ್ದು, ಅದರ ರಿಪೋರ್ಟ್ ಬಂದಿದೆ. ಅವರ ಬಗ್ಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುತ್ತದೆ. ಇನ್ನು ಹಳ್ಳಿಯ ಮತ್ತು ಹೊಸ ನಾಟಕಕಾರರು, ಕಲಾವಿದರ ಬಗ್ಗೆ ಅವರ ಕಳವಳ ಅರ್ಥವಾಗಿದೆ. ಅದೇ ರೀತಿ ಹಿಂದೆ ಯಾರೂ ಮಾಡಿರದಿದ್ದ ರೀತಿಯಲ್ಲಿ ೫ ಜನರನ್ನು ಪರಿಶಿಷ್ಟ ವರ್ಗದಿಂದ ಆಯ್ದು ಅಕಾಡೆಮಿಯಲ್ಲಿ ಸೇರಿಸಿದ್ದೇವೆ. ಜೊತೆಗೆ ಮತ್ತೆ ಹೊಸಬರನ್ನು ಸೇರಿಸಲು ಪ್ರಯತ್ನಿಸುತ್ತೇವೆ. ಇನ್ನು ಜಾನಪದ ಅಕಾಡೆಮಿ ಅಧ್ಯಕ್ಷರು ಶ್ರೀ ಕೆ. ನಾಗೇಗೌಡ ಎಂಬುವರು. ಅವರ ಅಕಾಡೆಮಿ ಆಫೀಸ್ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೃಪತುಂಗ ರಸ್ತೆಯ ಅಕಾಡೆಮೀಸ್ ಕಾಂಪ್ಲೆಕ್ಸ್‌ನಲ್ಲಿದೆ.

ಶ್ರೀ ಬಿ. ಬಸವಲಿಂಗಪ್ಪ.—ಅವರ ಮನೇಲಿದೆ.

ಶ್ರೀ ಜೀವರಾಜ ಆಳ್ವ.—ಅವರ ಮನೇಲಿರುವುದು ಅವರದೇ ಆದ ಜಾನಪದ ಪರಿಷತ್ತಿನ ಆಫೀಸ್?.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ ಈ ರೀತಿ ಮನೆಯಲ್ಲಿ ಅವರ ಆಫೀಸನ್ನು ಇಟ್ಟುಕೊಳ್ಳಬಹುದೇ ?

ಶ್ರೀ ಪಂಪಾಪತಿ.—ನನ್ನ ಇತರ ಸ್ನೇಹಿತರು ರಾಜ್ಯದ ಪ್ರಶ್ನೆಗಳನ್ನು ಕೇಳಿದ್ದಾರೆ. ನಾನು ನನ್ನ ಕ್ಷೇತ್ರದ ಸಮಸ್ಯೆಗಳನ್ನು ಸಚಿವರ ಮುಂದಿಡುತ್ತೇನೆ. ದಾವಣಗೆರೆ ೩ ಲಕ್ಷ ಜನಸಂಖ್ಯೆಯು ನಗರ. ನಮ್ಮ ಜಿಲ್ಲಾಕೇಂದ್ರಕ್ಕಿಂತ ದಾವಣಗೆರೆಯೇ ದೊಡ್ಡದು. ಒಂದು ದೊಡ್ಡ ಕ್ರೀಡಾಂಗಣಕ್ಕೆ ದುಡ್ಡು ಕೊಡಿ ಎಂದು ಮೂರುವರೆ ವರ್ಷದಿಂದ ಕೇಳುತ್ತಿದ್ದೇವೆ. ಆಗಲಿ ಎನ್ನುತ್ತಾರೆ. ಆದರೆ ಇನ್ನೂ ಕೊಟ್ಟಿಲ್ಲ. ಇವತ್ತಾದರೂ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಡಬೇಕು.

ಇನ್ನು ದಾವಣಗೆರೆಯಲ್ಲಿ ೬ ದಿನಪತ್ರಿಕೆಗಳು, ೨೦ ವಾರಪತ್ರಿಕೆಗಳು ಇವೆ. ಅವಕ್ಕೆ ಆಯಾ ದಿನದ ಬಿಸಿ ಸುದ್ದಿಗಾಗಿ ಒಂದು ಟೆಲಿಪ್ರಿಂಟ್ ಬೇಕೆಂದು ಕೇಳಿದ್ದೆವು. ಮೊದಲಿದ್ದ ಯುವಜನ ಸೇವಾ ಮಂತ್ರಿಗಳು ಒಪ್ಪಿಕೊಂಡಿದ್ದರು. ಆದರೆ ಇವತ್ತಿಗೂ ಇದನ್ನು ಒದಗಿಸಿಲ್ಲ. ಕೂಡಲೇ ಒದಗಿಸಬೇಕು, ಮತ್ತು ದಾವಣಗೆರೆಯಲ್ಲಿ ನಮ್ಮ ಹಳೆಯ ಪರಂಪರೆಯ ಕುಸ್ತಿ ಪಟುಗಳಿದ್ದಾರೆ. ಅವರಿಗೆ ಮಾಸಾಶನಕ್ಕೆ ಅರ್ಜಿಗಳನ್ನು ಸಲ್ಲಿಸಿದ್ದೆವು. ಇದರ ಬಗ್ಗೆ ತಾವು ಅನುಕೂಲಕರ ಉತ್ತರ ಹೇಳಬೇಕು.

ಶ್ರೀ ಜೀವರಾಜ ಆಳ್ವ.—ಶ್ರೀ ಪಂಪಾಪತಿಯವರು ಹೇಳಿದ ಕ್ರೀಡಾಂಗಣಕ್ಕೆ ೫ ಲಕ್ಷ ರೂ.ಗಳನ್ನು ಮಾನ್ಯ ಮುಖ್ಯಮಂತ್ರಿಗಳು ಒದಗಿಸಿಕೊಟ್ಟಿದ್ದಾರೆ. ಕಾರಣಾಂತರದಿಂದ ಕೆಲಸ ಈಡೇರಿಲ್ಲ. ಈಗ ಮಾಡಿಸುತ್ತೇನೆ. ಇನ್ನು ಟೆಲಿಪ್ರಿಂಟ್ ಕೊಡುವುದಾಗಿ ರಘುಪತಿಯವರು ಹೇಳಿದ್ದನ್ನು ನಾನು ನೆರವೇರಿಸುತ್ತೇನೆ. ಕುಸ್ತಿ ಪಟುಗಳಿಗೆ ಪೆನ್‌ಷನ್ ಕೊಡುವುದಕ್ಕೆ ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಮಾಡಿದ್ದೆವು. ಆದರೆ ಇವನ್ನು ಅನ್ವಯಿಸುವಲ್ಲಿ ತೊಂದರೆ ಇದೆ ಆದ್ದರಿಂದ ಹೊಸದಾಗಿ ರೂಲ್ಸ್ ಅಂಡ್ ರೆಗ್ಯುಲೇಷನನ್ನು ಕುಸ್ತಿ ಪಟುಗಳಿಗೆಂದೇ ಮಾಡಿಸಿ ಹೆಸರಾಂತ ಕುಸ್ತಿ ಪಟುಗಳಿಗೆ ಮಾಸಾಶನ ಕೊಡುವತ್ತ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಕಳೆದ ವರ್ಷ ೫೦ ಚಿತ್ರಗಳಿಗೆ ೫೬ ಲಕ್ಷ ಸಹಾಯಧನ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಎಲ್ಲ ಕನ್ನಡ ಚಿತ್ರಗಳಿಗೂ ಈ ರೀತಿ ಕೊಡುವುದರಿಂದ ಕನ್ನಡ ಉದ್ಧಾರವಾಗುತ್ತದೆಂಬ ನಂಬಿಕೆ ಇಲ್ಲ.

ಸಮಾಜಕ್ಕಾಗಲೀ, ಭಾಷೆಗಾಗಲೀ, ನಾಡಿಗಾಗಲೀ ಪ್ರಯೋಜನವಾಗುತ್ತದೆಯೇ? ಇಂಥ ಕನ್ನಡ ಚಿತ್ರಗಳಿಗೆ ಸಾರ್ವಜನಿಕ ಹಣವನ್ನು ಕೊಡುವುದು ತಪ್ಪಲ್ಲವೆ? ಕರ್ನಾಟಕದಲ್ಲಿ ದಾಸರ ಪರಂಪರೆ ಇದೆ. ದೇಶವನ್ನು ಕಟ್ಟಿದಂಥ ರಾಜಮಹಾರಾಜರುಗಳ ಪರಂಪರೆ ಇದೆ. ಕನ್ನಡಕ್ಕಾಗಿ ದುಡಿದ ಮಹಾ ಕವಿಗಳ ಚರಿತ್ರೆ ಇದೆ. ಇಂಥ ಚಿತ್ರಗಳನ್ನು ತೆಗೆದು ನಾಡಿಗೆ ಅನುಕೂಲ ಮಾಡಿಕೊಡುವವರಿಗೆ ಹಣ ಕೊಡುವುದನ್ನು ಬಿಟ್ಟು, ಕನ್ನಡದಲ್ಲಿ ಇವತ್ತು ಬೂಸಾ ಚಿತ್ರಗಳು ಬರುತ್ತಿವೆ. ಇಂಥ ಚಿತ್ರಗಳಿಗೆ ಸರ್ಕಾರದ ಹಣ ಕೊಡುವುದರಿಂದ ಪೋಲಾಗುತ್ತದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಸ್ವಾಮಿ, ಬೂಸ ಎನ್ನುವುದು ಬಸವಲಿಂಗಪ್ಪನವರ ಕಾಪಿ ರೈಟ್ ಅದಕ್ಕೆ ಅವರ ಪರ್ಮಿಷನ್ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ವೇದಾಂತ ಹೆಮ್ಮಿಗೆ.— ಒಂದು ಲಕ್ಷ ಹಣ ಕೊಡಬೇಕಾದರೆ ಒಂದು ನೀತಿಯನ್ನು ಹಾಕಿಕೊಳ್ಳಬೇಡವೇ? ಸರ್ಕಾರ ಹಾಕಿದಂಥ ನೀತಿಯನ್ನು ಅವರು ಪಾಲಿಸಲೇಬೇಕು. ಬಿಳಿಗಿರಿರಂಗನ ಬೆಟ್ಟ ಪ್ರಸಿದ್ಧವಾದ ಪ್ರವಾಸಿ ಕೇಂದ್ರವಾಗಿದ್ದು, ಹೆಚ್ಚಿನ ಪ್ರಮಾಣದಲ್ಲಿ ಅಲ್ಲಿಗೆ ಜನ ಬರುತ್ತಾರೆ, ಅಲ್ಲಿ ಹಿಂದೆ ಕಟ್ಟಿದ್ದಂಥ ಕಲ್ಲಿನ ಮಂಟಪ ಮಾತ್ರ ಇದ್ದು ಪ್ರವಾಸಿಗರು ತಂಗುವುದಕ್ಕೆ ಸ್ಥಳಾವಕಾಶ ಇಲ್ಲದಂತಾಗಿದೆ. ಬಿಳಿಗಿರಿ ರಂಗನ ಬೆಟ್ಟದಲ್ಲಿ ಪ್ರವಾಸಿಗರು ತಂಗುವುದಕ್ಕೆ ಕೊಠಡಿಗಳನ್ನು ನಿರ್ಮಾಣ ಮಾಡಬೇಕೆಂದು ಹೇಳುತ್ತೇನೆ. ಇನ್ನು ಕಲಾವಿದರಿಗೆ, ಸಂಗೀತಗಾರರಿಗೆ, ನಾಟಕದವರಿಗೆ, ಲಲಿತ ಕಲೆಯವರಿಗೆ ಗೌರವಧನ ಕೊಡಲಾಗುತ್ತಿದೆ. ಶಾಸಕರಾದವರಿಗೆ ನಮ್ಮ ನಮ್ಮ ಕ್ಷೇತ್ರದಲ್ಲಿ ಯಾರು ಯಾರು ದುಡಿದಿದ್ದಾರೆನ್ನುವುದು ನಮಗೆ ಗೊತ್ತಿರುತ್ತದೆ. ಸರ್ಕಾರದವರು ಯಾರಿಗೆ ಕೊಟ್ಟಿದ್ದಾರೆನ್ನುವುದು ಪತ್ರಿಕೆಯಲ್ಲಿ ಬಂದಾಗ

ಮಾತ್ರ ಗೊತ್ತಾಗುತ್ತದೆ. ಗೌರವಧನ ಕೊಡುವ ಮುನ್ನ ಆಯಾಯಾ ಕ್ಷೇತ್ರದ ಶಾಸಕರನ್ನು ಕರೆಸಿ ಕೇಳಿ ಕೊಡುವಂಥ ಸೌಜನ್ಯವನ್ನು ಮಾನ್ಯ ಮಂತ್ರಿಯವರು ತೋರಿಸಬೇಕೆಂದು ಹೇಳುತ್ತೇನೆ.

ಶ್ರೀ ಜೀವರಾಜ ಆಳ್ವ.— ಕನ್ನಡ ಚಲನ ಚಿತ್ರ ರಂಗ ನಿಕೃಷ್ಟ ಪರಿಸ್ಥಿತಿಗೆ ಬರುವಂಥ ಸಂದರ್ಭದಲ್ಲಿ ಹಣದ ಸಹಾಯ ನೀಡುವಂಥ ಯೋಜನೆ ಜಾರಿಗೆ ತರಲಾಯಿತು, ಇನ್ನೂ ಯಾವ ಮಟ್ಟಕ್ಕೆ ಬರಬೇಕಾಗಿತ್ತೋ ಆ ಮಟ್ಟಕ್ಕೆ ಬಾರದೇ ಇರುವುದರಿಂದ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿದ್ದೇವೆ. ಸ್ವಲ್ಪ ಕಳಪೆ ಚಿತ್ರಗಳು ತಯಾರಾಗುತ್ತಿವೆ. ಮಾನ್ಯ ಸದಸ್ಯರು ನೀಡಿದ ಸಲಹೆಯ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ, ಕಾನೂನು ಕಟ್ಟಳೆಗಳನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಪ್ರಧಾನ ಮಂತ್ರಿಯವರ ಸೂಚನೆ ಮೇರೆಗೆ ಬಿಳಿಗಿರಿ ರಂಗನ ಬೆಟ್ಟವನ್ನು ರಿಲಿಜಿಯಸ್ ಟೂರಿಸ್ಟ್ ಸೆಂಟರ್ ಮಾಡಬೇಕೆನ್ನುವ ಸಲಹೆ ಕೊಟ್ಟಿದ್ದಾರೆ. ಅದರ ಪ್ರಕಾರ ಕೇಂದ್ರದವರು ಸಹಾಯಧನ ಕೊಟ್ಟರೆ, ಸ್ಥಳದ ನಿರ್ಮಾಣ ಮಾಡಲಾಗುವುದು. ಗೌರವಧನವನ್ನು ಅಕಾಡಮಿಗಳು ಮಾಡಿದ ಶಿಫಾರಸ್ಸಿನ ಮೇಲೆ ಕೊಡಲಾಗುವುದು. ವಿಧಾನ ಸಭೆಯ ಸದಸ್ಯರುಗಳು, ವಿಧಾನ ಪರಿಷತ್ತಿನ ಸದಸ್ಯರುಗಳು ಯಾವ ಯಾವ ಹೆಸರುಗಳನ್ನು ಕೊಟ್ಟಿದ್ದಾರೋ ಅವರೆಲ್ಲರಿಗೂ ಕೊಡಲಾಗಿದೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ೪,೦೦೦ ಜನರಿಗೆ ಗೌರವಧನ ಕೊಡಲಾಗಿದೆ. ಮೈಸೂರು ನಗರದಲ್ಲಾಗಲೀ, ಬೇರೆ ಕಡೆಯಲ್ಲಾಗಲೀ ಹೆಸರುಗಳು ಬಿಟ್ಟು ಹೋಗಿದ್ದರೆ, ಅದನ್ನು ತಿಳಿಸಲಿ ರಾಜ್ಯೋತ್ಸವ ಸಂದರ್ಭದಲ್ಲಿ ಅವರ ಹೆಸರುಗಳನ್ನು ಸೇರಿಸುತ್ತೇವೆ,

ಶ್ರಿ. ಬಿ.ಎ ಉಮರಬ್ಬ.— ಮಾನ್ಯ ಅಧ್ಯಕ್ಷರೇ. ಶ್ರೀಮತಿ ಮನೋರಮಾ ಮಧ್ವರಾಜ್‌ರವರು ಮಲ್ಪೆ ಪ್ರವಾಸಿ ಕೇಂದ್ರದ ಬಗ್ಗೆ ಹೇಳಿದ್ದಾರೆ. ಶ್ರೀಮತಿ ಮನೋರಮಾ ಮಧ್ವರಾಜ್ ಅವರ ಆದಿಯಾಗಿ ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರುಗಳೆಲ್ಲರೂ ಮಲ್ಪೆ ಪ್ರವಾಸಿ ಕೇಂದ್ರವನ್ನು ಅಭಿವೃದ್ಧಿ ಪಡಿಸಬೇಕೆಂದು ಬಯಸುತ್ತಾರೆ. ಇನ್ನು ವಾಸ್ಕೋಡಗಾಮ, ಸೇಂಟ್ ಮೋರೀಸ್ ಐಲೆಂಡ್ ಏನಿದೆ ಅದು ಬಹಳ ಸುಂದರವಾದಂಥ, ಸೂರ್ಯ ಮುಳುಗುವಂಥ ದೃಶ್ಯ ಬಹಳ ಅಂದವಾಗಿ ಕಾಣುವಂಥ ಜಾಗ ಆ ಜಾಗ ಪ್ರವಾಸಿಗರನ್ನು ಬಹಳವಾಗಿ ಆಕರ್ಷಿಸುತ್ತದೆ. ಇದನ್ನು ಸಬ್ ಲೀಸ್ ಮಾಡುವ ಬದಲು. ಊರಿನವರೇ ಸಹಕಾರ ಸಂಘದ ಮೂಲಕ ಅಭಿವೃದ್ಧಿ ಪಡಿಸುವ ಬಗ್ಗೆ ಗಮನ ಕೊಟ್ಟರೆ ಒಳ್ಳೆಯದು. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನವರು ರಿಪೋರ್ಟ್ ಕೊಟ್ಟು ೬೦ ಕೊಠಡಿಗಳನ್ನು ಕಟ್ಟಿದರೂ ಲಾಭವಾಗುತ್ತದೆಂದು ಹೇಳಿದ ಮೇಲೆ ಅಡಿಗಲ್ಲು ಹಾಕಿದ್ದಾರೆ. ಇದರ ಬಗ್ಗೆ ತಾವು ಹೆಚ್ಚಿನ ಗಮನ ಕೊಡಬೇಕು. ಇನ್ನು ಕೋಚ್‌ಗಳ ಬಗ್ಗೆ ಒಂದು ಮಾತು ಹೇಳಬೇಕಾಗಿದೆ, ಕರ್ನಾಟಕದಲ್ಲಿ ೨೧ ಮಂದಿ ಕೋಚ್‌ಗಳಿದ್ದು, ಇವತ್ತು ದಿನಗೂಲಿ ಮೇಲೆ ಕೆಲಸ ಮಾಡುವಂಥ ೧೪ ಮಂದಿ ಕೋಚ್‌ಗಳು ಮಾತ್ರ ಇದ್ದಾರೆ. ಕೇರಳದಲ್ಲಿ ೧೭೫, ತಮಿಳುನಾಡಿನಲ್ಲಿ ೨೦೦. ಆಂಧ್ರದಲ್ಲಿ ೨೫೦ ಇದ್ದು ಕರ್ನಾಟಕದಲ್ಲಿ ಕೇವಲ ೨೪ ಮಂದಿ ಮಾತ್ರ ಇದ್ದಾರೆ, ೧೪ ಜನ ದಿನಗೂಲಿ ಮೇಲೆ ಇರುವವರನ್ನು ಖಾಯಂ ಮಾಡಿದರೆ, ನಮ್ಮ ಕೊರತೆಯನ್ನು ತುಂಬಿದಂತಾಗುತ್ತದೆ. ಅವರ ಬದುಕಿಗೆ ಆಶ್ರಯ ಕೊಟ್ಟಂತೆಯೂ ಆಗುತ್ತದೆ. ಇದರ ಕಡೆ ಮಂತ್ರಿಗಳು ಗಮನಕೊಡಬೇಕೆಂದು ಹೇಳುತ್ತೇನೆ. ಇನ್ನು ಫಿಲಂ ಸಬ್ಸಿಡಿ ಮತ್ತು ಟ್ಯಾಕ್ಸ್ ಫ್ರೀ ಬಗ್ಗೆ ಸರ್ಕಾರದ ಆಜ್ಞೆ ಆಗಿಲ್ಲವೆನ್ನುವ ಗೊಂದಲ ಇದೆ. ಇದನ್ನು ಬೇಗ ಮಾಡಬೇಕು. ಚೆಲುವ ಕನ್ನಡ ನಾಡು ಬಗ್ಗೆ ನಾನು ಒಂದು ಮಾತನ್ನು ಹೇಳಬೇಕಾಗಿದೆ. ನಮ್ಮಲ್ಲಿ ಕತ್ತೆ ಮೇದಲ್ಲಿ ಮತ್ತೆ ಮೇಯುವುದಿಲ್ಲ ಎಂದು ಹೇಳುವಂಥ ಒಂದು ಮಾತಿದೆ. ನನ್ನ ಸಲಹೆಯನ್ನು ತಾವು ಸಂಪೂರ್ಣವಾಗಿ ಸಮಾಧಾನದಿಂದ ಓದಬೇಕು, ಎರಡನೆಯದು ವಿಶ್ವಕನ್ನಡ ಸಮ್ಮೇಳನ ಹೊರತರುವಂಥ ಪ್ರಕಟಣೆಗಳನ್ನು ಪರಿಶೀಲನೆ ಮಾಡಲು ಒಂದು ಸಮಿತಿ ನೇಮಕ ಮಾಡಿದ್ದಿರಿ, ಆ ಒಂದು ಸಮಿತಿಗೆ ಈ ಪುಸ್ತಕ ಅರ್ಪಿಸಿ. ಕರ್ನಾಟಕದ ಜನ ಓದಲಿಕ್ಕೆ ಯೋಗ್ಯವಾದಂಥ ಪುಸ್ತಕ ಎಂದು ಅವರು ಹೇಳಿದರೆ ಅದನ್ನು ಉಳಿಸಿಕೊಳ್ಳಿ. ಇಲ್ಲದೇ ಇದ್ದರೆ ಎರಡು ಮೂರು ಜನ ಪ್ರಖ್ಯಾತ ಸಾಹಿತಿಗಳು ಇರುವಂಥ ಒಂದು ಸಮಿತಿ ಮಾಡಿ, ಸಮಿತಿಗೆ ಮಾನ್ಯ ಕಾರಂತರವರನ್ನೇ ನೇಮಿಸಿ. ಈ ಪುಸ್ತಕ ಉಳಿಸಿಕೊಳ್ಳುವುದಕ್ಕೆ ಯೋಗ್ಯವಾಗಿದೆ ಎಂದರೆ ಉಳಿಸಿಕೊಳ್ಳಿ, ಯೋಗ್ಯವಾಗಿಲ್ಲ ಎಂದರೆ ದಯವಿಟ್ಟು ಸರ್ಕ್ಯುಲೇಷನ್‌ನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಒತ್ತಾಯ ಮಾಡುತ್ತೇನೆ.

ಶ್ರೀ ಜೀವರಾಜ ಆಳ್ವ — ಕನ್ನಡ ಚಲನಚಿತ್ರಗಳಿಗೆ ಸಬ್ಸಿಡಿ ಕೊಡುವ ವಿಚಾರದಲ್ಲಿ ಬಹಳಷ್ಟು ದೂರುಗಳು ಬಂದಿರುವುದರಿಂದ ಕಳಪೆ ಚಿತ್ರಗಳು ಬರುತ್ತಿರುವುದರಿಂದ, ಇದರ ಬಗ್ಗೆ ಸಮಿತಿ ರಚನೆಯಾಗಿದೆ. ಸಬ್ಸಿಡಿ ಕೊಡುವುದಕ್ಕೆ ಸಂಬಂಧಪಟ್ಟಂತೆ ಕಾನೂನು ಕಟ್ಟಳೆಗಳನ್ನು ಕೂಡ ಮಾಡಲಾಗು

ಷುದು. ಎಲ್ಲರ ಅಭಿಪ್ರಾಯವನ್ನು ತೆಗೆದುಕೊಂಡು ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತೇನೆ. ಚಿಲುವ ಕನ್ನಡ ನಾಡು ಪುಸ್ತಕದ ಬಗ್ಗೆ ಸಮಿತಿ ಮಾಡುವ ಅಗತ್ಯತೆ ಇಲ್ಲ. ಪುಸ್ತಕವನ್ನು ಹೊಗಳಿದವರೂ ಇದ್ದಾರೆ. ತೆಗಳಿದವರೂ ಇದ್ದಾರೆ. ಬರೀ ಒಂದು ಜಾಹೀರಾತಿಗೆ 0.5 ಲಕ್ಷ ಖರ್ಚು ಮಾಡುವಂಥ ಪ್ರಸಂಗ ಇರುವಾಗ ಇದು ದೊಡ್ಡದೇನೂ ಅಲ್ಲ. ತಪ್ಪುಗಳು ಇರಬಹುದು. ಯಾವುದೇ ಸಾಹಿತಿಗೂ ಇಂಥಾದ್ದೇ ಬರೆಯಬೇಕೆಂದು ಒತ್ತಾಯ ಮಾಡುವುದಕ್ಕಾಗುವುದಿಲ್ಲ.

ಪುಸ್ತಕವನ್ನು ಚೆನ್ನಾಗಿ ಅಂದವಾಗಿ ಬರೆದಿದ್ದಾರೆ. ತಮ್ಮ ಅಭಿಪ್ರಾಯದಲ್ಲಿ ಆ ಪುಸ್ತಕ ಚೆನ್ನಾಗಿ ಇಲ್ಲದೇ ಇರಬಹುದು. ವಸ್ತು ಸ್ಥಿತಿಯಲ್ಲಿ ಬೇರೆಯೇ ಆಗಿದೆ.

ಶ್ರೀ ಬಿ. ಎ. ಉಮರಬ್ಬ.—ಇದು ನನ್ನ ಅಭಿಪ್ರಾಯವಲ್ಲ. ತಾವೇ ಮಾಡಿದಂತಹ ಒಂದು ಸಮಿತಿ ಇದೆಯಲ್ಲ, ಆ ಸಮಿತಿಯ ಒಟ್ಟಾರೆ ಅಭಿಪ್ರಾಯ ಇದು. ಆದಕ್ಕಾಗಿ ನೀವು ಒಮ್ಮೆ ಅದನ್ನು ನೋಡಿ. ಒಳ್ಳೆಯ ಪುಸ್ತಕ ಇಟ್ಟುಕೊಳ್ಳಬಹುದು ಅಂದರೆ ಇಟ್ಟುಕೊಳ್ಳಿ.

ಶ್ರೀ ಜೀವರಾವ್ ಆಳ್ವ.—ಅವರ ಸಲಹೆಯನ್ನು ನಾನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ ಅಂತಹ ಪ್ರಮೇಯವಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಚೆಲುವ ಕನ್ನಡ ನಾಡು ಪುಸ್ತಕದ ರಕ್ಷಾ ಕವಚದ ಹಿಂಬದಿಯಲ್ಲಿರುವಂತಹ ತೊಗಲು ಬೊಂಬೆ ಚಿತ್ರ ಅದು ಪ್ರಖ್ಯಾತಿಯಾದಂತಹ ಚಿತ್ರವಾಗಿರುವುದರಿಂದ ಅದನ್ನು ನೋಡಿದಂತಹ ವೆಸ್ಟ್ ಜರ್ಮನಿಯವರು, ಶ್ರೀಮಾನ್ ಭರಮಪ್ಪನವರನ್ನು ಮುಂದಿನ ಮೇ ತಿಂಗಳ 2ನೇ ತಾರೀಖಿನಲ್ಲಿ ಅಲ್ಲಿ ಒಂದು ಪ್ರದರ್ಶನವನ್ನು ಮಾಡುವುದಕ್ಕೆ ಕರೆದಿದ್ದಾರೆ. ಅವರು ಆ ಪುಸ್ತಕದ ಹಿಂಬದಿಯಲ್ಲಿರುವ ತೊಗಲು ಬೊಂಬೆಯ ಚಿತ್ರವನ್ನೇ ನೋಡಿ ಅವರಿಗೆ ಈ ಒಂದು ಆಹ್ವಾನವನ್ನು ಕೊಟ್ಟಿದ್ದಾರೆ. ಇದರ ಬಗ್ಗೆಯೂ ಮಾನ್ಯ ಸದಸ್ಯರು ಯೋಚನೆ ಮಾಡಬೇಕು.

ಶ್ರೀ ಜಿ. ನಾರಾಯಣಕುಮಾರ್.—ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನಲ್ಲಿ ಕಿತ್ತೂರು ರಾಣಿ ಚೆನ್ನಮ್ಮನವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ವೀರ ರಾಣಿಯಾಗಿ ಹೋರಾಟ ಮಾಡಿ ಮಡಿದಂತಹವರು. ಅಲ್ಲಿ ಅವರ ಸಮಾಧಿಯೊಂದು ಇದೆ. ಅದಕ್ಕೆ ರಕ್ಷಣೆ ಇಲ್ಲದೆ ಸುತ್ತ ಕಟ್ಟಡ ಇಲ್ಲದೆ ಬಯಲು ಪ್ರದೇಶ ಇರುವುದರಿಂದ ದನಕರುಗಳು, ಅದನ್ನು ತುಳಿದು ಹಾಳುಮಾಡುತ್ತಿವೆ. ಅದನ್ನು ನೋಡಿದಂತಹ ಒಬ್ಬ ಕಾರ್ಯಕರ್ತೆ ಶ್ರೀಮತಿ ನಾಗರತ್ನ ಎಂಬುವರು ನನಗೊಂದು ಪತ್ರವನ್ನು ಬರೆದಿದ್ದಾರೆ. ಆದ್ದರಿಂದ ಇಂತಹ ಪ್ರಸಿದ್ಧಿಯಾದಂತಹ ಸಮಾಧಿಯ ಸುತ್ತ ಸರ್ಕಾರದಿಂದಲೇ ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನು ಬೆಂಗಳೂರು ನಗರದಲ್ಲಿರತಕ್ಕಂತಹ ರವೀಂದ್ರ ಕಲಾ ಕ್ಷೇತ್ರದ ಒಳಗಡೆ ನೋಡಿದಾಗ ಯಾವ ರೀತಿಯಾದ ಕೆತ್ತನೆಯೂ ಇಲ್ಲದಂತಾಗಿದೆ, ಮತ್ತು ಈ ಕಲಾ ಕ್ಷೇತ್ರವನ್ನು ದಳ್ಳಾಳಿಗಳು ತೆಗೆದುಕೊಂಡು, ಅದನ್ನು ಇನ್ನೊಬ್ಬರಿಗೆ ತಾವು ತೆಗೆದುಕೊಂಡಂತಹ ಹಣಕ್ಕಿಂತ ಎರಡು ಪಟ್ಟು, ಮೂರು ಪಟ್ಟು ಹೆಚ್ಚಿಗೆ ಬೇರೆಯವರಿಗೆ ಕೊಟ್ಟು ಹಣವನ್ನು ಗಳಿಸುತ್ತಿದ್ದಾರೆ ಎಂಬುದಾಗಿ ನನ್ನ ಗಮನಕ್ಕೆ ಬಂದಿದೆ. ಅದನ್ನು ಸರಿಪಡಿಸುವ ಕಡೆ ತಮ್ಮ ಗಮನ ಹರಿಸಬೇಕು.

ಇನ್ನು ದೂರದರ್ಶನ ಇಲಾಖೆಯಲ್ಲಿ ಕನ್ನಡ ಚಿತ್ರಗಳನ್ನು ಪ್ರದರ್ಶನ ಮಾಡುವುದಕ್ಕೆ ಬದಲಾಗಿ ಹೆಚ್ಚು ಅನುವಾದಿತ ಚಿತ್ರಗಳನ್ನೇ ಪ್ರದರ್ಶನ ಮಾಡುತ್ತಿದ್ದಾರೆ. ಅಚ್ಚ ಕನ್ನಡ ಚಿತ್ರಗಳು, ಸ್ವಚ್ಛ ಕನ್ನಡ ಚಿತ್ರಗಳು ಇದ್ದರೂ ಅನುವಾದಿತ ಚಿತ್ರಗಳನ್ನೇ ಹೆಚ್ಚು ಪ್ರದರ್ಶನ ಮಾಡುತ್ತಿದ್ದಾರೆ. ಅಲ್ಲಿನ ನಿರ್ದೇಶಕರ ಬಗ್ಗೆ ರಾಜ್ಯಪಾಲರ ಭಾಷಣದ ಮೇಲೆ ನಾನು ಚರ್ಚೆ ಮಾಡುವಾಗ ಹೇಳಿದ್ದೆ. ಅಂದು ತಾವು ಇರಲಿಲ್ಲ ಶ್ರೀಮಾನ್ ಜೆ. ಎಚ್. ಪಟೇಲರು ಇದ್ದರು. ಅನುವಾದಿತ ಚಿತ್ರಗಳ ಬಗ್ಗೆ ನಾನು ಪತ್ರ ಬರೆದಾಗ, ಅಲ್ಲಿನ ನಿರ್ದೇಶಕರು ನಾನು ನನ್ನ ಇಚ್ಛಾನುಸಾರವಾಗಿ ಮಾಡುತ್ತೇನೆ. ಆ ರೀತಿ ಕೇಳುವುದಕ್ಕೆ ಅವರು ಯಾರು ? ಎಂದು ಮಾತನಾಡಿರುವುದು ನನ್ನ ಗಮನಕ್ಕೆ ಬಂದಿದೆ. ಅಲ್ಲಿರತಕ್ಕಂತಹ ಗುಮಾಸ್ತರು ಹಾಗೂ ಉತ್ತಮವಾದ ತಜ್ಞರು ಯಾರ್‍ಯಾರು ಇದ್ದಾರೆ, ಅವರನ್ನು ಉದ್ದೇಶ ಪೂರ್ವಕವಾಗಿ ಕಿರುಕುಳವನ್ನು ಕೊಟ್ಟು ಬೇರೆ ಕಡೆಗೆ ವರ್ಗಾವಣೆ ಮಾಡುತ್ತಿದ್ದಾರೆ. ಕನ್ನಡದ ಪ್ರಚಾರಕ್ಕೆ ಅವರು ಅವಕಾಶವನ್ನೇ ಕೊಡುತ್ತಿಲ್ಲ. ದೂರದರ್ಶನದಲ್ಲಿ ನಮ್ಮ ರಾಜ್ಯದ ಬಗ್ಗೆ ನಮ್ಮ ಸರ್ಕಾರದ ಬಗ್ಗೆ, ಕನ್ನಡ ಕಲೆಯ ಬಗ್ಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುತ್ತಿಲ್ಲ. ಬರೀ ಕೇಂದ್ರ ಸರ್ಕಾರ,

ಪ್ರಧಾನ ಮಂತ್ರಿಗಳಾದಂತಹ ಶ್ರೀಮಾನ್ ರಾಜೀವ್ ಗಾಂಧಿಯವರು, ಹಾಗೂ ಶ್ರೀಮತಿ ಇಂದಿರಾಗಾಂಧಿಯವರು ಇವರನ್ನೇ ಹೆಚ್ಚು ಪ್ರಚಾರ ಮಾಡುತ್ತಿದ್ದಾರೆ. ಕನ್ನಡಕ್ಕೂ ಸ್ವಾಯತ್ತತೆ ಬೇಕು. ಇದು ಬರೇ ಕೇಂದ್ರ ಸರ್ಕಾರಕ್ಕೆ ಮೀಸಲು ಏನು ಅಲ್ಲ. ಕನ್ನಡ ಕಲೆಯ ಬಗ್ಗೆ ಹೆಚ್ಚಿನ ಮಾಹಿತಿಬೇಕು. ಪ್ರಚಾರ ಆಗಬೇಕು.

ಕಡೆಯದಾಗಿ ಮೇಕೆದಾಟನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ ಅದನ್ನು ನಾನು ಮೆಚ್ಚುತ್ತೇನೆ. ಈಗಾಗಲೇ ಅಲ್ಲಿ ಆಗರ್ಭ ಶ್ರೀಮಂತರಾದ ಶ್ರೀ ಖೋಡೆ ಅಂಡ್ ಕಂಪನಿಯವರು ೬೦೦ ಎಕರೆ ಜಾಗವನ್ನು ತೆಗೆದುಕೊಂಡು ಅಲ್ಲಿ ದೊಡ್ಡದಾಗಿ ಸಾರಾಯಿ, ಹೆಂಡ ಇಂತಹ ಮಾರಾಟದ ಮಳಿಗೆಗಳನ್ನು ಅತಿಥಿ ಸತ್ಕಾರಕ್ಕೋಸ್ಕರ ಮಾಡಿದ್ದಾರೆ. ನಮ್ಮ ಸರ್ಕಾರಕ್ಕೆ ಜಾಗ ಎಲ್ಲಿದೆ ? ಅಂತಹ ಕಡೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿ ಮಂದಿರಗಳನ್ನು ಕಟ್ಟಿ ಉಚಿತ ರೀತಿಯ ಪ್ರವಾಸಿಗರಿಗೆ ಆಶ್ರಯ ನೀಡಿ ಅವರನ್ನು ಪ್ರೋತ್ಸಾಹಿಸಬೇಕು.

ಶ್ರೀ ಜೀವರಾಜ್ ಆಳ್ವ.—ಮಾನ್ಯ ಸದಸ್ಯರ ಎಲ್ಲ ಸಲಹೆಗಳನ್ನು ನಾನು ಒಪ್ಪುತ್ತೇನೆ.

ಶ್ರೀ ಆರ್. ಎಸ್. ನಾಯಕ್.—ನಾನು ಪ್ರಶ್ನೆ ಕೇಳಬಾರದು ಎಂಬುದಾಗಿ ಸುಮ್ಮನೆ ಇದ್ದೆ. ಆದರೆ ಶ್ರೀಮಾನ್ ಪ್ರಕಾಶ್‌ರವರು ಹೇಳಿದ್ದರ ಮೇಲೆ ಪುನಃ ಪ್ರಶ್ನೆ ಕೇಳಬೇಕಾಯಿತು. ಯಾವುದೇ ಒಂದು ಪುಸ್ತಕವನ್ನು ಅದರ ಹೊರ ಕವಚದ ಪುಟವನ್ನು ನೋಡಿಯೇ ಒಳ್ಳೆಯ ಪುಸ್ತಕವೆಂಬ ಅಭಿಪ್ರಾಯಕ್ಕೆ ಬರಬಾರದು. ಅದರಲ್ಲಿ ಏನಿದೆ ಎಂಬುದನ್ನು ತಾವು ನೋಡಿದ್ದೀರಾ? ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕನ್ನಡ ಸಂಘಗಳೇ ಕಡಿಮೆ ಎಂಬುದಾಗಿ ಹಾಕಿದ್ದಾರೆ. ಅದು ನಿಮಗೆ ಗೊತ್ತಾ? ಯಕ್ಷಗಾನದ ಬಗ್ಗೆ ಬರೆದಿದ್ದಾರೆ. ಎಂ. ವಿ. ಕಾಮತ್ ಎಂಬುವರನ್ನೇ ಪ್ರಾಧಾನ್ಯವಾಗಿಟ್ಟು ಬರೆದಿದ್ದಾರೆ. ಯಕ್ಷಗಾನದಲ್ಲಿ ರಾಷ್ಟ್ರ ಪ್ರಶಸ್ತಿಯನ್ನು ಪಡೆದಂತಹ ಶಿವರಾಮ್ ಹೆಗಡೆಯವರ ಹೆಸರನ್ನೇ ಅದರಲ್ಲಿ ಹಾಕಲಿಲ್ಲ. ಯಾರು ಪ್ರಸಿದ್ಧಿಯಾಗಿದ್ದಾರೋ ಅವರ ಹೆಸರನ್ನೇ ಅಲ್ಲಿ ಹಾಕಲಿಲ್ಲ, ಅದರಲ್ಲಿ ಇನ್ನೂ ಅನೇಕ ಮಾಹಿತಿಗಳನ್ನು ತಪ್ಪು ತಪ್ಪಾಗಿ ಕೊಟ್ಟಿದ್ದಾರೆ. ಅದರ ಬಗ್ಗೆ ಗೆಜೆಟಿಯರ್ ಕೂಡ ಹೊರ ಬಂದಿದೆ, ಅದನ್ನು ನೋಡಿಯೂ ಇದ್ದೇನೆ. ಅದರಲ್ಲಿ ಉತ್ತರ ಕನ್ನಡ ಜಿಲ್ಲೆಯ ಒಂದು ಕೋಮಿನ ಬಗ್ಗೆ ಬರೆದಿದ್ದಾರೆ. ನಿಜವಾದ ಇತಿಹಾಸವನ್ನೇ ಹೇಳಲಿಲ್ಲ. ಆದ್ದರಿಂದ ಆ ಪುಸ್ತಕವನ್ನು ಹಿಂತೆಗೆದುಕೊಳ್ಳುವಂಥ ಕೆಲಸವನ್ನು ಮಾನ್ಯ ಮಂತ್ರಿಗಳು ಮಾಡಬೇಕು.

ಶ್ರೀ ಜೀವರಾಜ್ ಆಳ್ವ.—ನಾನು ಪುನಃ ಹಿಂದೆ ಹೇಳಿದ್ದನ್ನೇ ರಿಪೀಟ್ ಮಾಡಬೇಕಿಲ್ಲ. ಆದರೆ ಸ್ಟೇಟ್ ಗೆಜೆಟಿಯರ್‌ನಲ್ಲಿ ತಪ್ಪಾಗಿದ್ದರೆ, ಅದು ಸರ್ಕಾರದ ತಪ್ಪು. ಇಲಾಖೆಯ ತಪ್ಪು. ಆದರೆ ಯಾರೋ ಒಬ್ಬ ಬರೆದಂತಹ ಪುಸ್ತಕದಲ್ಲಿ ಕೆಲವಾರು ತಪ್ಪುಗಳು ಇರಬಹುದು, ಅದನ್ನು ಸರಿಪಡಿಸುವಂತಹ ಮಾತೇ ಇಲ್ಲ. ಅದು ನಮ್ಮ ಅಪೇಕ್ಷೆಯೂ ಅಲ್ಲವೆಂದು ಪುನಃ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎನ್. ಎಚ್. ಗೌಡ.—ಉತ್ತರ ಕನ್ನಡ ಜಿಲ್ಲೆಯಲ್ಲಿ ಕುಮಟಾ ತಾಲ್ಲೂಕಿನ ಯಾನ ಎಂಬ ಪ್ರವಾಸೋದ್ಯಮ ತಾಣ ಉಂಟು. ಆ ಒಂದು ಸ್ಥಳದಲ್ಲಿ ಹಿಂದೆ ಭಸ್ಮಾಸುರನನ್ನು ಈಶ್ವರ ಓಡಿಸಿಕೊಂಡು ಬಂದಾಗ ಕಲ್ಲಿಗೆ ಮರೆಯಾಗಿ ನಿಂತಾಗ ಅಲ್ಲಿ ವಿಷ್ಣು ಮೋಹಿನಿ ಅವತಾರವನ್ನು ತಾಳಿ ಭಸ್ಮಾಸುರನ ಜೊತೆ ಸಮಾಗಮವಾಗಿ ಅಲ್ಲಿ ನೃತ್ಯ ಮಾಡಿರುವಂತಹದ್ದು, ತನ್ನ ಹಸ್ತದಿಂದಲೇ ತಾನು ಭಸ್ಮವಾದುದು, ಅಲ್ಲಿ ಭಸ್ಮಾಸುರನ ಒಂದು ಪ್ರತಿಮೆ ಕೂಡ ಇದೆ. ಇಂತಹ ಒಂದು ಪವಿತ್ರ ಯಾತ್ರಾ ಸ್ಥಳ ಸಹ್ಯಾದ್ರಿಯ ಮಡಿಲಲ್ಲಿ ನಿಸರ್ಗದ ನೆಲೆಯಾಗಿ ನಿಂತಿದೆ. ಇಂತಹ ಒಂದು ಪವಿತ್ರ ಯಾತ್ರಾ ಸ್ಥಳಕ್ಕೆ ಕರ್ನಾಟಕ ರಾಜ್ಯದಿಂದ ಅಷ್ಟೇ ಅಲ್ಲ, ಭಾರತದ ಬೇರೆ ಬೇರೆ ಸ್ಥಳಗಳಿಂದಲು ಲಕ್ಷೋಪಲಕ್ಷ ಮಂದಿ ಪ್ರವಾಸಿಗರು ಬರುತ್ತಾ ಇರುತ್ತಾರೆ. ಅಲ್ಲಿ ಒಂದು ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡಿ ಬರುವಂತಹ ಪ್ರವಾಸಿಗರಿಗೆ ಇರುವುದಕ್ಕೆ ಪ್ರವಾಸಿ ಮಂದಿರವನ್ನೂ ಕೂಡ ಕಟ್ಟಿಸುವುದಕ್ಕೆ ಮಾನ್ಯ ಮಂತ್ರಿಗಳು ಏನು ಕ್ರಮ ಕೈಗೊಳ್ಳುತ್ತಾರೆಂಬುದನ್ನು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಜೀವರಾಜ್ ಆಳ್ವ.—ಮಾನ್ಯ ಸದಸ್ಯರಾದ ಶ್ರೀ ಎನ್. ಎಚ್. ಗೌಡರು ಯಾನ ಎಂಬ ಪ್ರವಾಸೋದ್ಯಮವಾಗಿರತಕ್ಕಂತಹ ಸ್ಥಳದ ಬಗ್ಗೆ ಇಷ್ಟೊಂದು ಆಕರ್ಷಣೀಯವಾಗಿ ವ್ಯಾಖ್ಯಾನ ಮಾಡಿದ ಮೇಲೆ ಅದನ್ನು ಈ ವರ್ಷದ ನಮ್ಮ ಅಂದಾಜು ವೆಚ್ಚದ ಪಟ್ಟಿಯಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ರಾಮಪ್ಪ.—ಮಾನ್ಯ ಜೀವರಾಜ ಆಳ್ವರವರು ಕೊಟ್ಟ ಮಾತಿಗೆ ತಪ್ಪುತ್ತಿದ್ದಾರೆ. ಅದಕ್ಕೆ ಸಾಕ್ಷಿ ಪ್ರಕಾಶ್‌ರವರು. ರಾಜ್ಯಮಟ್ಟದಲ್ಲಿ ಸ್ಪೋರ್ಟ್ಸ್‌ಗೆ ಹುಡುಗರು ಆಟ ಆಡಿದ ಮೇಲೆ ೫೦ ಸಾವಿರ ರೂಪಾಯಿ ಕೊಡುತ್ತೇವೆಂದು ಹೇಳಿ ಇಲ್ಲಿಯವರೆಗೆ ಕೊಟ್ಟಿಲ್ಲ. ಪ್ರಕಾಶ್‌ರವರು ಕೊಡಿಸುತ್ತೇನೆಂದು ಹೇಳಿದರೂ ಅವರು ಕೊಡುತ್ತಿಲ್ಲ. ರಂಗ ಮಂದಿರಕ್ಕೆ ಹಣ ಕೊಡುತ್ತೇವೆಂದು ಹೇಳುತ್ತಾರೆ. ಕೊಡುವುದಕ್ಕೆ ಹಣ ಇದೆಯೋ ಇಲ್ಲವೋ ಗೊತ್ತಿಲ್ಲ, ಕೊಡುತ್ತೇವೆ ಎನ್ನುವ ಭರವಸೆ ಕೊಡುವುದರಲ್ಲಿ ಜೀವರಾಜ ಆಳ್ವರವರು ನಂ. ೧.

ಶ್ರೀ ಜೀವರಾಜ ಆಳ್ವ.—ರಾಜ್ಯಮಟ್ಟದ ಶಾಲೆಗಳ ಕ್ರೀಡಾಕೂಟಕ್ಕೆ ಹಣ ಕೊಡೋಣವೆಂದು ಮಾಡಿದ್ದೇವು. ರಾಮಪ್ಪನವರು ಖರ್ಚಿಗಿಂತ ಜಾಸ್ತಿ ಸಂಪಾದನೆ ಮಾಡಿ ಚೆನ್ನಾಗಿ ನಡೆಸಿರುವುದರಿಂದ ಕೊಡಬೇಕಾದ ಹಣವನ್ನು ಕ್ರೀಡಾಂಗಣಕ್ಕೆ ಕೊಡುತ್ತೇವೆ. ಬಳ್ಳಾರಿ ರಂಗಮಂದಿರಕ್ಕೆ ೧೭½ ಲಕ್ಷ ರೂಪಾಯಿ ಖರ್ಚಾಗಿದೆ. ಅದನ್ನು ಪೂರ್ಣ ಗೊಳಿಸುವುದಕ್ಕೆ ಎಷ್ಟು ಹಣ ಬೇಕೋ ಅದನ್ನು ಕೊಡುತ್ತೇವೆ.

ಶ್ರೀ ಡಿ.ಟಿ. ಜಯಕುಮಾರ್.—ನಾನು ಚಲನಚಿತ್ರ ನಿರ್ಮಾಪಕನಾಗಿ ನೊಂದು ಹೇಳಬೇಕಾಗಿದೆ. ಕನ್ನಡ ನಾಡಿನ ಜನತೆಗೆ ಬಹಳ ಕಡಿಮೆ ವೆಚ್ಚದಲ್ಲಿ ಮನ ರಂಜನೆ ಒದಗಿಸತಕ್ಕದ್ದು ಎಂದರೆ ಚಲನ ಚಿತ್ರ. ಕನ್ನಡ ನಾಡಿನಲ್ಲಿ ಕನ್ನಡ ಅಭಿವೃದ್ಧಿ ಹೊಂದಬೇಕೆಂಬ ದೃಷ್ಟಿಯಿಂದ ೩೬ ವಾರಗಳ ಕಾಲ ಕನ್ನಡ ಚಲನ ಚಿತ್ರಗಳನ್ನು ಕಡ್ಡಾಯವಾಗಿ ಚಿತ್ರಮಂದಿರಗಳಲ್ಲಿ ಹಾಕಬೇಕೆಂದು ಕಾನೂನು ಇದೆ. ಆದರೆ ಕೆಲವು ಚಿತ್ರ ಮಂದಿರಗಳಲ್ಲಿ ಇದು ಕಾರ್ಯರೂಪಕ್ಕೆ ಬಂದಿಲ್ಲ. ಅದಕ್ಕೋಸ್ಕರ ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಂಡು ೩೬ ವಾರಗಳ ಕಾಲ ಕಡ್ಡಾಯವಾಗಿ ಕನ್ನಡ ಚಲನಚಿತ್ರವನ್ನು ನಡೆಸುವಂತೆ ಸರ್ಕಾರ ಮಾಡಬೇಕು. ನಂಜನಗೂಡಿನ ದೇವಸ್ಥಾನಕ್ಕೆ ಪ್ರತಿದಿನ ಲಕ್ಷಾಂತರ ಮಂದಿ ಯಾತ್ರಿಕರು ಬರುತ್ತಾರೆ. ಅದಕ್ಕೋಸ್ಕರ ಅದನ್ನು ಪ್ರವಾಸಿ ಕೇಂದ್ರವಾಗಿ ಮಾಡತಕ್ಕ ವಿಚಾರದಲ್ಲಿ ಸರ್ಕಾರ ಆಸಕ್ತಿ ವಹಿಸಬೇಕೆಂದು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜೀವರಾಜ ಆಳ್ವ.—ಕನ್ನಡ ಚಲನಚಿತ್ರಗಳನ್ನು ೩೬ ವಾರಗಳ ಕಾಲ ನಡೆಸಬೇಕೆಂಬ ಕಡ್ಡಾಯ ಇದ್ದರೂ ಕೆಲವು ಚಲನಚಿತ್ರ ನಿರ್ಮಾಪಕರು ಕಾರಣಾಂತರಗಳಿಂದ ಅವರಿಗೆ ಮಾಡಲಿಕ್ಕೆ ಆಗದ ಪ್ರಸಂಗ ಬಂದಿದೆ. ಆದರೆ ಯಾವ ಚಲನಚಿತ್ರ ಮಂದಿರದಲ್ಲೂ ಹಾಕಿಲ್ಲವೆಂಬ ದೂರು ಬಂದಿಲ್ಲ. ಕಂಟೋನ್‌ಮೆಂಟ್ ಮುಂತಾದ ಕಡೆಗಳ ಚಲನಚಿತ್ರಮಂದಿರಗಳಲ್ಲಿ ಅವರು ಹಾಕುವುದಕ್ಕೆ ತಯಾರಿದ್ದರೂ ನಿರ್ಮಾಪಕರು ರಿಲೀಸ್ ಮಾಡುವುದಕ್ಕೆ ತಯಾರಿಲ್ಲ. ಇಂಥ ಚಲನಚಿತ್ರ ಮಂದಿರಗಳಲ್ಲಿ ಹಾಕಲಿಲ್ಲವೆಂದರೆ ಅಂಥವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುತ್ತೇನೆ. ನಂಜನಗೂಡಿನ ವಿಚಾರವನ್ನು ಸರ್ಕಾರ ಗಮನ ದಲ್ಲಿಟ್ಟುಕೊಳ್ಳುತ್ತದೆ.

ಶ್ರೀ ಎಸ್. ಬಂಗಾರಪ್ಪ. ಜಾಹಿರಾತಿನ ವಿಚಾರದಲ್ಲಿ ಹೇಳಿದ್ದೀರಿ. ಅದಕ್ಕೆ ಕೇಳುತ್ತಿದ್ದೇನೆ. ಕೆಲವು ಪತ್ರಿಕೆಗಳು ನಿಮ್ಮ ಇಲಾಖೆಗೆ ಪತ್ರ ಬರೆದು ಕೇಳಿದರೂ ಹಿಂದಿನ ಒಂದೆರಡು ವರ್ಷದ ಬಾಕಿಯನ್ನು ಕೊಟ್ಟಿಲ್ಲ. ಆ ಹಣವನ್ನು ಕೂಡಲೇ ಕೊಡಬೇಕೆಂದು ಹೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ ಪ್ರಪಂಚ ಪತ್ರಿಕೆ ಎಂದು ವಾರ ಪತ್ರಿಕೆ ಇದೆ. ಅದೇ ರೀತಿ ಅನೇಕ ವಾರ ಪತ್ರಿಕೆಗಳು ಇವೆ. ಕೇಂದ್ರ ಸರ್ಕಾರದವರು ಜಾಹಿರಾತಿಗಾಗಿ ಎಷ್ಟು ಹಣವನ್ನು ಕೊಡುತ್ತಾರೆ ಅದಕ್ಕಿಂತ ಹೆಚ್ಚಿಗೆ ದರವನ್ನು ತಾವು ಇಡುವುದಾಗಿ ಒಪ್ಪಿದ್ದೀರಿ. ಬೇರೆ ಹೊಸ ಪತ್ರಿಕೆಗಳಿಗೆ ಜಾಹಿರಾತು ಕೊಡದೆ ಹಿಂದೆ ಕೊಟ್ಟ ಪತ್ರಿಕೆಗೆ ಲಕ್ಷಾಂತರ ರೂಪಾಯಿ ಮಂಜೂರ್ಮಾಡಿದ್ದೀರಿ. ಅದು ಕಾನೂನು ಬಾಹಿರವಾಗಿದೆ. ಹಾಗೇನಾದರೂ ಇದ್ದರೆ ಯಾವ ಕಾರಣದಿಂದ ಮಂಜೂರಾಗಿದೆ ? ಕೇಂದ್ರ ಸರ್ಕಾರ ಮಂಜೂರ್ಮಾಡಿದ್ದಕ್ಕಿಂತ ಜಾಸ್ತಿ ಕೊಟ್ಟಿದ್ದು ಏತಕ್ಕೆ ? ಅದೊಂದು ಪತ್ರಿಕೆಗೆ ಏತಕ್ಕೆ ಜಾಸ್ತಿ ಕೊಟ್ಟಿರಿ ? ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಸದನದ ಮುಂದೆ ಇಡುತ್ತೀರಾ ? ಅದೇ ರೀತಿ ಬೇರೆ ಪತ್ರಿಕೆಗಳಿಗೆ ಏನಾದರೂ ಕೊಟ್ಟಿದ್ದೀರಾ ? ಯಾವ ಯಾವ ಪತ್ರಿಕೆಗಳಿಗೆ ಹಣ ಕೊಡಬೇಕಾಗಿದೆ ಅದನ್ನೆಲ್ಲ ಕೂಡಲೇ ಡಿಸ್‌ಪೋಸ್ ಮಾಡಿಸಿರಿ, ಆ ಎಲ್ಲ ಕಾಗದ ಪತ್ರಗಳನ್ನೂ ದಾಖಲೆಗಳನ್ನೂ ಸಭೆಯ ಮುಂದೆ ಇಡಿರಿ.

ಶ್ರೀ ಜೀವರಾಜ ಆಳ್ವ.—ಎರಡು ನಿಮಿಷ ಸಮಯ ಕೊಟ್ಟರೆ ಆಮೇಲೆ ಉತ್ತರಿಸುತ್ತೇನೆ.

ಶ್ರೀ ಪಟಪಕ್ಕಿ ರತ್ನಾಕರ್,—ಮಾನ್ಯ ಸಚಿವರು ತಮ್ಮ ದೀರ್ಘವಾದ ಭಾಷಣದಲ್ಲಿ ರಾಜ್ಯದ ಐತಿಹಾಸಿಕ ಸ್ಮಾರಕಗಳ ರಕ್ಷಣೆಯ ಮತ್ತು ಅದರ ಬಗ್ಗೆ ಸಂಶೋಧನೆ ಮಾಡತಕ್ಕ ವಿಚಾರದ ಬಗ್ಗೆ

ಪ್ರಸ್ತಾಪ ಮಾಡಲಿಲ್ಲ. ಏತಕ್ಕೆ ಮಾಡಲಿಲ್ಲವೆಂದು ಗೊತ್ತಿಲ್ಲ. ಜೊತೆಗೆ ಶಿವಪ್ಪನಾಯಕನ ಬಗ್ಗೆ ಮಲೆನಾಡು ಪ್ರದೇಶದಲ್ಲಿರತಕ್ಕ ಐತಿಹಾಸಿಕ ದಾಖಲೆಗಳನ್ನು ಉಳಿಸಿ ಕೊಂಡು ಬರುವುದಕ್ಕೆ ಸರ್ಕಾರ ಯಾವ ರೀತಿ ಕ್ರಮ ತೆಗೆದುಕೊಂಡಿದೆ ? ಎಷ್ಟು ಹಣ ಇಟ್ಟಿದೆ ? ಮಾನ್ಯ ಸ್ನೇಹಿತರು ಹೇಳಿದ ಹಾಗೆ ದಿನಗೂಲಿ ನೌಕರರನ್ನು ಖಾಯಂ ಮಾಡಿದರೆ ಚಿರಋಣಿಯಾಗಿರುತ್ತೇನೆ.

ಶ್ರೀ ಜೀವರಾಜ ಆಳ್ವ.—ಶಿವಪ್ಪನಾಯಕನ ಅರಮನೆ ಹೇಗಿತ್ತು ಹೇಗಾಗಿದೆ ಎಂಬುದು ಸದಸ್ಯರಿಗೆ ಗೊತ್ತಿದೆ. ಐತಿಹಾಸಿಕ ದಾಖಲೆಗಳ ಬಗ್ಗೆ ಮ್ಯೂಸಿಯಂ ಮಾಡುತ್ತೇವೆಂದು ಹೇಳಿದೆ. ಆಗ ತಾವು ಇರಲಿಲ್ಲ.

ಶ್ರೀ ಪಟಮಕ್ಕಿ ರತ್ನಾಕರ್.—ಕೋಟೆ ಇರತಕ್ಕದ್ದು ತೀರ್ಥಹಳ್ಳಿ ಕ್ಷೇತ್ರದಲ್ಲಿ. ಅದನ್ನು ಕೇಳ ತಕ್ಕವರು ಇಲ್ಲ. ಐತಿಹಾಸಿಕ ಸ್ಮಾರಕ ಸಂಪತ್ತು ನಾಶವಾಗುವ ಪರಿಸ್ಥಿತಿಗೆ ಬಂದಿದೆ. ಅದಕ್ಕೆ ಕಾವಲು ಸಮಿತಿಯವರು ಇಲ್ಲ. ದಯವಿಟ್ಟು ಇದರ ಬಗ್ಗೆ ಗಮನ ಹರಿಸಬೇಕು.

ಶ್ರೀ ಜೀವರಾಜ ಆಳ್ವ.—ಸದಸ್ಯರ ಸಲಹೆಯನ್ನು ಒಪ್ಪುತ್ತಿದ್ದೇನೆ.

ಶ್ರೀ ಪಿ. ಎಸ್. ರಾಣೆ.—ಸರ್ಕಾರದವರು ತುಳು ಭಾಷೆಯ ಅಭಿವೃದ್ಧಿಗೆ ಯಾವರೀತಿ ಸ್ವಲ್ಪ ಹಣ ವನ್ನು ಇಟ್ಟಿದ್ದಾರೆ ಅದೇ ರೀತಿ ಕೊಂಕಣಿ ಭಾಷೆ ಅಭಿವೃದ್ಧಿಗೂ ಇಡಬೇಕೆಂದು ಹೇಳುತ್ತೇನೆ. ಸಚಿವರು ಇದರ ಬಗ್ಗೆ ಉತ್ತರ ಹೇಳಲಿಲ್ಲ. ಕೋಚ್‌ಗಳ ಬಗ್ಗೆ ಈಗಾಗಲೇ ಅವರು ಹೇಳಿದ್ದಾರೆ ಅವರನ್ನು ಖಾಯಂ ಆಗಿ ನೇಮಿಸುತ್ತೀರಾ ? ಕೋಚ್‌ಗಳು ಹೆಚ್ಚಾಗಿ ಬೆಂಗಳೂರು ನಗರದಲ್ಲೇ ಕೇಂದ್ರೀಕೃತರಾಗಿ ದ್ದಾರೆ, ಆದಷ್ಟೂ ಅವರನ್ನು ಜಿಲ್ಲಾ ಕೇಂದ್ರಗಳಿಗೆ ನೇಮಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೀವರಾಜ ಆಳ್ವ.—ಕೊಂಕಣಿ ಭಾಷೆ ಅಭಿವೃದ್ಧಿ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ಇತ್ತೀಚೆಗೆ ಮಂಗಳೂರು ನಗರದಲ್ಲಿ ಕೊಂಕಣಿ ಭಾಷೆಯ ಪರಿಷತ್ತು ನಡೆಯಿತು. ಆ ಪರಿಷತ್ತಿನಿಂದ ಬಂದ ನಿರ್ಣಯವನ್ನು ಸರ್ಕಾರ ಒಪ್ಪಿಕೊಂಡಿದೆ. ಅದಕ್ಕೆ ಹಣ ಕೂಡ ಒದಗಿಸಿಕೊಟ್ಟಿದೆ.

ಅಧ್ಯಕ್ಷರು.—ಇಲ್ಲಿಗೆ ಚರ್ಚೆ ಮತ್ತು ಉತ್ತರ ಮುಗಿಯಿತು. ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವವೇನೆಂದರೆ,

'೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೧, ೧೧, ೧೨ ಮತ್ತು ೨೭ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚ ವನ್ನು ವಹಿಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗಳನ್ನು ಮಂಜೂರ್ಮಾಡ ಬೇಕು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರ್ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ 1 — ಭೂಸಾರ ಮತ್ತು ಜಲರಕ್ಷಣೆ ವ್ಯವಸಾಯ (ತೋಟಗಾರಿಕೆಯು ಮತ್ತು ಬರಗಾಲಕ್ಕೆ ಗುರಿಯಾದ ಪ್ರದೇಶಗಳ ಯೋಜನೆ ಹೊರತು)

'ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂಸಾರ ಮತ್ತು ಜಲರಕ್ಷಣೆ ವ್ಯವಸಾಯಕ್ಕೆ (ತೋಟಗಾರಿಕೆ ಮತ್ತು ಬರಗಾಲಕ್ಕೆ ಗುರಿಯಾದ ಪ್ರದೇಶ ಗಳ ಯೋಜನೆ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೫,೮೨,೦೮,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೬,೬೯,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವುದು.'

ಅಭಿಯಾಚನೆ ಕ್ರಮಾಂಕ 11 — ಯುವಜನ ಸೇವೆ

' ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯುವಜನ ಸೇವೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೮,೨೫,೧೨,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫೦,೦೦,೦೦೦ ರೂ ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು. '

ಅಭಿಯಾಚನೆ ಕ್ರಮಾಂಕ 12 — ಕಲೆ. ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ

' ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೨೭,೯೭,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು, '

ಅಭಿಯಾಚನೆ ಕ್ರಮಾಂಕ 27 — ವಾರ್ತಾ ಮತ್ತು ಪ್ರಚಾರ

' ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾರ್ತಾ ಮತ್ತು ಪ್ರಚಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೮೪,೯೧,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೬೯,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು. '

II. PAPERS LAID ON THE TABLE

1. SRI A. LAXMISAGAR (Minister for Law and Urban Development).—Sir, on behalf of Minister for Social Welfare and Minister for Transport & Tourism I beg to lay.—

1. Eighth Annual Report & Accounts of the Karnataka Backward Classes & Minorities Development Corporation Limited for the year 1984-85 ;

as required under Section 619A of the Companies Act 1956.

2. Notification No. FTD 23 TMR 84, dated 24th February 1986;

3. The Karnataka Motor Vehicles (Third Amendment) Rules, 1986 ;

as required under sub-section (3) of Section 133 of the Motor Vehicles Act, 1939.

೧೨-೩೦ ಪಿ.ಎಂ.

ವಿತ್ತೀಯ ಕಾರ್ಯಕಲಾಪಗಳು

೧೯೮೬-೮೭ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ ಬೇಡಿಕೆ ಕ್ರಮಸಂಖ್ಯೆ ೬ ಮತ್ತು ೪೮ ಗಣಿ ಮತ್ತು ಭೂ ವಿಜ್ಞಾನ, ವಿದ್ಯುತ್ ಯೋಜನೆಗಳು

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುಚ್ಛಕ್ತಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗಣಿಗಳು ಮತ್ತು